ಡಿ.ಕೆ. ರಂಗಪ್ಪ ಇವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಒಂದು ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ. (೫೦೩೬.೮೭) ಉಚ್ಚ ನ್ಯಾಯಾಲಯವು ದಿನಾಂಕ ೨೫-೩-೮೭ ರಂದು ತಡೆ ಆಜ್ಞೆ ನೀಡಿರುತ್ತದೆ ಮತ್ತು, ಈ ಪ್ರಕರಣವು ನ್ಯಾಯಾಲಯದ ಮುಂದೆ ಇರುವುದರಿಂದ ಚರ್ಚೆಯು ಸಬ್‌ಜುಡಿಸ್ ಆಗುವುದು. ಮತ್ತೆ ಹೈಕೋರ್ಟಿನಲ್ಲಿ ಸ್ಟೇ ಇದೆ. ನ್ಯಾಯಾಲಯದಲ್ಲಿ ಏನು ತೀರ್ಪು ಬರುತ್ತದೆಯೋ ಆ ಪ್ರಕಾರ ನಡೆದುಕೊಳ್ಳುತ್ತೇವೆ. ಇನ್ನು ತಹಶೀಲ್ದಾರರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ಬಗ್ಗೆ ನಾನು ವಿಚಾರಣೆ ಮಾಡುತ್ತೇನೆ.

ಶಾಸನ ರಚನಾ ಕಾರ್ಯಕಲಾಪಗಳು

1988ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು) —ಮಾನ್ಯ ಅಧ್ಯಕ್ಷರೇ, ೧೯೮೮ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೮ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಜೀವರಾಜ ಆಳ್ವ (ಮಾನ್ಯ ಉನ್ನತ ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೮೮ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು. —ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲಾಗಿದೆ.*

ವಿತ್ತೀಯ ಕಾರ್ಯಕಲಾಪಗಳು

ಶ್ರೀ ರಮೇಶ್ ಸಿ ಜಿಗಜಣಗಿ (ಗಣಿ ಮತ್ತು ಭೂವಿಜ್ಞಾನ, ಯುವಜನ ಸೇವಾ ರಾಜ್ಯ ಸಚಿವರು)— ಸನ್ಮಾನ್ಯ ಅಧ್ಯಕ್ಷರೇ,

ಅಭಿಯಾಚನೆ ಕ್ರಮಾಂಕ 13 ಮತ್ತು 7

(ಗಣಿ, ಭೂವಿಜ್ಞಾನ ಮತ್ತು ಯುವಜನ ಸೇವಾ ಇಲಾಖೆಗಳು)

ಅಭಿಯಾಚನೆ ಕ್ರಮಾಂಕ ೧೩ ಯುವಜನ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧,೪೧,೯೫,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

---

*Annexure

ಅಭಿಯಾಚನೆ ಕ್ರಮಾಂಕ: ೭ ಗಣಿಗಳು ಮತ್ತು ಭೂವಿಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೫ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂವಿಜ್ಞಾನ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೮೮,೦೭,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನು ದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಬೇಡಿಕೆಗಳನ್ನು ಮಂಡಿಸಲಾಗಿದೆ. ಶ್ರೀ ಡಿ.ಎ. ಚಿನ್ನಪ್ಪನವರೇ ತಾವು ಮಾತನಾಡಿ.

† ಶ್ರೀ ಡಿ.ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಅಧ್ಯಕ್ಷರೇ, ಗಣಿ ಮತ್ತು ಭೂವಿಜ್ಞಾನ ಹಾಗೂ ಯುವಜನ ಸೇವೆ ಖಾತೆಗಳ ಮೇಲೆ ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ನಾನು ನಾಲ್ಕು ಮಾತುಗಳನ್ನು ಮಾತನಾಡಬಯಸುತ್ತೇನೆ. ಈ ಖನಿಜ ಮತ್ತು ಗಣಿ ಸಂಪತ್ತು ಇರುವಂತಹ ಇಡೀ ಭೂಮಿ, ಏನಿದೆ, ಈ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ಮೈನ್ಸ್ ಅಂಡ್ ಜಿಯಾಲಜಿಗೆ ಸಪರೇಟ್ ಮಂತ್ರಿಗಳನ್ನು ನೇಮಕ ಮಾಡಿದ್ದಾರೆ. ಈ ಇಲಾಖೆಗೆ ಒಬ್ಬ ಮಂತ್ರಿಗಳು. ಇವರು ಕೊಟ್ಟಿರತಕ್ಕಂಥ ರಿಪೋರ್ಟ್ ಬರೀ ೫ ಪೇಜುಗಳು ಮಾತ್ರ. ಈ ೫ ಪೇಜುಗಳಿಗೆ ಒಬ್ಬ ಮಂತ್ರಿಗಳು ಎನ್ನತಕ್ಕಂಥಾ ಒಂದು ವಿಷಯವನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಈ ಖನಿಜ ಸಂಪತ್ತು ಕರ್ನಾಟಕ ರಾಜ್ಯದಲ್ಲಿ ಬಹಳ ಕಡೆ ಸಿಗುತ್ತದೆ. ಈ ಖನಿಜ ಸಂಪತ್ತಿನಿಂದ ಕರ್ನಾಟಕ ರಾಜ್ಯಕ್ಕೆ ಕೋಟ್ಯಾಂತರ ರೂಪಾಯಿಗಳಷ್ಟು ವರಮಾನವಿದ್ದರೂ ಸಹ ಈ ಬಗ್ಗೆ ಸರ್ಕಾರ ಯಾವ ಒಂದು ಗಮನವನ್ನೂ ಹರಿಸಲಿಲ್ಲ. ಈ ಬಗ್ಗೆ ಹೆಚ್ಚು ಪ್ರಯತ್ನವನ್ನು ಸಹ ಮಾಡಲಿಲ್ಲ. ಇದರಿಂದ ಕರ್ನಾಟಕ ಸರ್ಕಾರದ ಆದಾಯಕ್ಕೆ ಬಹಳ ಧಕ್ಕೆಯಾಗಿದೆ. ಈಗ ರಿಸೋರ್ಸ್ ಬಹಳ ಕಡಿಮೆಯಾಗಿದೆ. ನಮ್ಮಲ್ಲಿರುವ ಖನಿಜ ಸಂಪತ್ತನ್ನು ಸರ್ಕಾರದವರು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವಲ್ಲಿ ನೆಗ್ಲೆಕ್ಟ್ ಮಾಡಿದ್ದಾರೆ. ಈ ಬಗ್ಗೆ ಹೇಳುವುದಾದರೆ, ಈಗಾಗಲೇ ಚಾಮರಾಜನಗರ ತಾಲ್ಲೂಕಿನಲ್ಲಿ ಕರೀ ಕಲ್ಲು ಮತ್ತು ಬಣ್ಣದ ಕಲ್ಲುಗಳನ್ನು ತೆಗೆದು ಮಾರಾಟ ಮಾಡಿಕೊಳ್ಳುವುದಕ್ಕೆ ಸರ್ಕಾರದವರು ಕಂಟ್ರಾಕ್ಟ್ ಕೊಟ್ಟಿರುವುದರಿಂದ ಸರ್ಕಾರಕ್ಕೆ ನಷ್ಟವಾಗಿದೆ, ನಾನು ಈ ಬಗ್ಗೆ ಸರ್ಕಾರಕ್ಕೆ ತಿಳಿಸುವುದೇನೆಂದರೆ, ನಮ್ಮ ರಾಜ್ಯದಲ್ಲಿ ಖನಿಜ ಸಂಪತ್ತು ಏನಿದೆ ಅದನ್ನೆಲ್ಲಾ ಸರ್ಕಾರದವರು ರಾಷ್ಟ್ರೀಕರಣ ಮಾಡಬೇಕು. ಏಕೆಂದರೆ, ರಾಷ್ಟ್ರೀಕರಣವಾದರೆ ಸ್ಮಗಲಿಂಗ್ ಆಗುವುದು ತಪ್ಪುತ್ತದೆ. ಇವತ್ತಿನ ದಿವಸಗಳಲ್ಲಿ ಚಾಮರಾಜನಗರ ತಾಲ್ಲೂಕಿನಿಂದ ಬೇರೆ ದೇಶಗಳಿಗೆ ಕಲ್ಲುಗಳು ಸ್ಮಗಲಿಂಗ್ ಆಗಿ ಹೋಗುತ್ತಿದೆ. ಇದರ ಬಗ್ಗೆ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಯಾರು ಸ್ಮಗಲಿಂಗ್ ಮಾಡುತ್ತಿದ್ದಾರೋ ಅಂಥವರುಗಳಿಗೇ ಸರ್ಕಾರ ಪ್ರೋತ್ಸಾಹ ಕೊಡುತ್ತಿದೆ. ಸ್ಮಗಲಿಂಗ್ ತಡೆಗಟ್ಟುವ ಬಗ್ಗೆ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಖನಿಜ ಸಂಪತ್ತನ್ನು ಪತ್ತೆ ಮಾಡುವುದಕ್ಕಾಗಿ ರಾಜ್ಯ ಸರ್ಕಾರವು ಕೇವಲ ೧,೮೫೦ ಹೆಕ್ಟೇರ್ ಭೂಮಿಯನ್ನು ಮಾತ್ರ ಸರ್ವೇ ಮಾಡಿದ್ದಾರೆ. ಸರಿಯಾದ ರೀತಿಯಲ್ಲಿ ಇವರು ಸರ್ವೇ ಮಾಡಿದ್ದಿದ್ದರೆ ಇನ್ನೂ ಹೆಚ್ಚಾಗಿ ಖನಿಜ ಸಂಪತ್ತು ನಮ್ಮ ರಾಜ್ಯದಲ್ಲಿ ಕಂಡು ಬರುತ್ತಿತ್ತು. ಆದರೆ, ಇವರು ಸರಿಯಾಗಿ ಸರ್ವೇ ಮಾಡಿಲ್ಲ. ಇವರು ಮಾಡಿರುವ ಸರ್ವೇ ಏನು ಇದೆ, ಇದು ನಿಜವಾದ ಸರ್ವೆಯಲ್ಲ. ನಮ್ಮ ರಾಜ್ಯ ಸರ್ಕಾರ ಖನಿಜ ಸಂಪತ್ತನ್ನು ಹೆಚ್ಚಿಗೆ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ. ಆಮೇಲೆ ಈ ಡಿಪಾರ್ಟ್‌ಮೆಂಟಿನಲ್ಲಿ ಬಹಳಷ್ಟು ಜನ ಅಧಿಕಾರಿಗಳಿದ್ದಾರೆ. ಈ ಅಧಿಕಾರಿಗಳು, ಭೂಮಿಯೊಳಗೆ ಎಲ್ಲಿ ನೀರು ಸಿಗುತ್ತದೆ. ಎಲ್ಲಿ ಖನಿಜ ಸಂಪತ್ತು ಸಿಗುತ್ತದೆ ಎಂಬುದನ್ನು ಕಂಡು ಹಿಡಿಯುತ್ತಿಲ್ಲ. ಈ ಇಲಾಖೆಯಲ್ಲಿರುವ ಅಧಿಕಾರಿಗಳೇ ತೋರಿಸಿದಂಥ ಜಾಗದಲ್ಲಿ ಬೋರ್‌ವೆಲ್ ಹಾಕಿದರೂ ನೀರು ಸಿಗುವುದಿಲ್ಲ. ಈ ಡಿಪಾರ್ಟ್‌ಮೆಂಟಿನಲ್ಲಿ ಸರಿಯಾದ ಸ್ಪೆಷಲೈಸ್ಡ್ ಜಿಯಾಲಜಿಸ್ಟ್‌ಗಳು ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ಇದೇ ರೀತಿಯಾಗಿ ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಕರೀ ಕಲ್ಲುಗಳು ಸಿಕ್ಕುತ್ತದೆ. ಈ ಜಾಗದಲ್ಲಿ ಕಲ್ಲುಗಳನ್ನು ತೆಗೆಯಬಾರದೆಂದು ಸರ್ಕಾರವು ಬ್ಯಾನ್ ಮಾಡಿದೆ. ಈ ರೀತಿ ಬ್ಯಾನ್ ಮಾಡಿರುವುದರಿಂದ ಬಹಳಷ್ಟು ಅನುಕೂಲವಾಗಿದೆ. ತುಮಕೂರು ಜಿಲ್ಲೆಯಲ್ಲಿರುವ ಪಾವಗಡ ತಾಲ್ಲೂಕಿನಲ್ಲಿ ರೂಬಿ (ಹವಳ)

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸಿಗುತ್ತದೆ. ಇಲ್ಲಿಯೂ ಸಹ ಸರ್ಕಾರದವರು ಬ್ಯಾನ್ ಮಾಡಿದ್ದಾರೆ. ಸರ್ಕಾರದವರು ಈ ಜಾಗದಲ್ಲಿ ಪಾಲಿಶಿಂಗ್ ಮಿಷಿನ್ ಹಾಕಿ ರೂಬಿಯನ್ನು ತಯಾರು ಮಾಡುವುದಾದರೆ ಸರ್ಕಾರಕ್ಕೆ ಬಹಳ ಲಾಭ ಬರುತ್ತದೆ, ಇದರ ಬಗ್ಗೆ ಸರ್ಕಾರದವರು ಯಾವ ಪ್ರಯತ್ನವನ್ನೂ ಮಾಡಿಲ್ಲ. ಮತ್ತು ಯಾವುದೇ ಪ್ಲಾನ್ ಕೂಡ ಮಾಡಿಲ್ಲ. ಈಗಲಾದರೂ ಈ ಪಾಲಿಶಿಂಗ್ ಮಿಶನ್ ಹಾಕುವ ಬಗ್ಗೆ ನಾನು ಒತ್ತಾಯಿಸುತ್ತೇನೆ. ಅಧ್ಯಕ್ಷರೇ, ಚಾಮರಾಜನಗರದಲ್ಲಿ ಏನಾಗಿದೆ ಎಂದರೆ, I will read the paper cuttings:

"The transfer of a junior IAS Officer has become a scandal. Mr. Madan Gopal, Assistant Commissioner, Nanjangud was recently transferred to Bangalore and the people of the area under his jurisdiction reacted vigorously."

ಯಾರು ಈ ಸ್ಮಗಲರ್ಸ್‌ನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡಿದ್ದಾರೋ ಅಂತಹವರನ್ನು ಹೊರಹಾಕಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಆ ಊರಿನ ಜನರು ಆ ಅಧಿಕಾರಿ ಬೇಕು ಎಂದು ಹೇಳಿದರೂ ಕೂಡ ಆ ಅಧಿಕಾರಿಯನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ. ಹೀಗೆ ನಡೆದುದನ್ನು ನೋಡಿದರೆ, ಸರಕಾರದವರು ಯಾರು ಸ್ಮಗಲಿಂಗ್‌ನ್ನು ನಿಲ್ಲಿಸುತ್ತಾರೆ ಅಂತಹವರ ಮೇಲೆ ಕ್ರಮತೆಗೆದುಕೊಳ್ಳುತ್ತಾ ಇರುವುದನ್ನು ನೋಡಿದರೆ, ಇದು ಒಂದು ರೀತಿಯಲ್ಲಿ ಜನತಾ ಸರಕಾರದ ನೀತಿ ಎಂದು ಹೇಳಿದರೆ ತಪ್ಪಾಗಲಾರದು ಎಂದು ನಾನು ಹೇಳಬಯಸುತ್ತೇನೆ. ಮುಂದೆ.

"There was a spontaneous bundh agaiıst the transfer in Nanjangud in which even the Congress-I and Janatha men participated, There was protest in the adjoining taluks of Chamarajanagar and Gundlupet as well, People had a strong reason to protest. Mr. Madan Gopal who was posted in Nanjangud after his training in Mussourie, zealously craeked down illegal quarrying of granite in the area. During his tenure of 16 months in Nanjangud he booked as many as 80 cases of illegel quarring and seized black grenite stones worth lakhs of rupees."

ಈ ಕಳ್ಳತನವನ್ನು ನಿಲ್ಲಿಸಬೇಕೆಂದು ಹೇಳಿ, ಆ ಅಧಿಕಾರಿಯವರು ೧೫ ತಿಂಗಳಲ್ಲಿ ಸುಮಾರು ೮೦ ಕೇಸ್‌ಗಳನ್ನು ಹಾಕಿದ್ದಾರೆ ಆದರೆ ಅಂತಹ ಒಬ್ಬ ಅಧಿಕಾರಿಯನ್ನು ಈ ಸರಕಾರದವರು ಅದೇ ಜಾಗದಲ್ಲಿ ಇಟ್ಟುಕೊಳ್ಳಲಿಕ್ಕೆ ಹೋಗಲಿಲ್ಲ.

"He was strick and effective. He even went to the extent of circulating handbills, which egged on people of stopping lorries transporting illegally extracted stones and inform the nearest Police Station. The hand bills listed 20 villages where illegal quarrying was going on."

ಇಂಥ ಸ್ಮಗಲಿಂಗ್ ವಿಚಾರದಲ್ಲಿ ಆ ಅಧಿಕಾರಿಯು ಸ್ಮಗಲರ್ಸ್ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಜನತೆಗೂ ಕೂಡ ಅದರ ಬಗ್ಗೆ ತಿಳುವಳಿಕೆ ಕೊಡುವುದಕ್ಕೆ ಹ್ಯಾಂಡ್ ಬಿಲ್ಸ್‌ನ್ನು ಮಾಡಿಸಿ, ಹಂಚಿದ್ದಾರೆ. ಆದರೂ ಕೂಡ ಇಂಥ ಸತ್ಕೆಲಸ ಮಾಡಿದ ಅಧಿಕಾರಿಯನ್ನು ಇಟ್ಟುಕೊಳ್ಳುವ ಮನಸ್ಸು ಈ ಸರ್ಕಾರ ಮಾಡಿಲ್ಲ ಮತ್ತು ತಪ್ಪಿತಸ್ಥರ ಮೇಲೆ ಯಾವುದೇ ಕ್ರಮ ಜರುಗಿಸಿಲ್ಲ

"As many as 110 petitions were filed in Courts of law challenging Mr. Madan Gopal's ac ion"

"The High Court held that private unlicenced quarrying was illegal in Government and darkest land but legal in private land. It also suggested some guidelines in this regard."

ಸ್ಮಗಲರ್ಸ್ ಬಗ್ಗೆ, ಅವರ ಮೇಲೆ ಗೈಡ್‌ಲೈನ್ಸ್ ಮಾಡಿ ಇಲ್ಲೀಗಲ್ ಚಟುವಟಿಕೆ ಮಾಡುತ್ತಿರುವುದನ್ನು ನಿಲ್ಲಿಸಿ ಎಂದು ಹೇಳುತ್ತಾ ಇದ್ದರೂ ಕೂಡ ಸರಕಾರ ಏನು ಕ್ರಮ ತೆಗೆದುಕೊಂಡಿಲ್ಲ.

Mr. Madan Gopal's campaign was the first serious effort by the Government to check illegal granite quarrying which has been going on for the last 20 years."

ಇಷ್ಟು ವರ್ಷಗಳಿಂದ ಈ ಸರಕಾರ ಏನು ಮಾಡುತ್ತಿತ್ತು? ಸರಕಾರಕ್ಕೆ ಈ ಮೂಲಕ ಖಾಸಗಿಯವರಿಂದ ಏನಾದರೂ ಲಾಭ ಇದೆಯೇ ಎಂದು ನೋಡಬೇಕಾಗುತ್ತದೆ. ಇಲ್ಲದಿದ್ದರೆ ಖಂಡಿತವಾಗಿಯೂ ಇದರ ಬಗ್ಗೆ ಕ್ರಮ ತೆಗೆದುಕೊಂಡು ಆ ಅಧಿಕಾರಿಯನ್ನು ಅಲ್ಲಿಯೇ ಉಳಿಸತಕ್ಕಂಥ ಕೆಲಸವನ್ನು ಮಾಡುತ್ತಾ ಇದ್ದರು.

"This reporter remembers his visit to the forest area of Kollegal in 1978 when he say how the use of dynamites in the quarries sent wild elephants helter skelter. No politician of either the Congress-I or the other parities considered illegal quarrying a serious matter..."

"The abrubt transfer of the Assistant Commissioner, after just 16 months of tenure has become a controversial because people feel that granite runners on the pull in the high echelons of power, and scheming politicians, have got him out of their way. The fact thatthe Rural Development Minister, Abdul Nazir Sab, who hails from Gundlupet was not seeing eye to eye with the Assistant Commissioner..."

1-30 P. M.

"To come back to the issue of illegal quarrying of granite, there is no doubt that the Government is suffering a huge loss by way of uncollected royalties. According to the speech made by Mr. K. N. Nage Gowda in the Legislative Council last year, the Government is losing Rs. 30 crores every year because of unlicensed quarrying."

ಏನಿಲ್ಲ ಎಂದರೂ ಸರ್ಕಾರಕ್ಕೆ ಅನ್‌ಲೈಸೆನ್ಸ್‌ಡ್ ಕ್ವಾರಿಗಳಿಂದ ೩೦ ಕೋಟಿಯಷ್ಟು ನಷ್ಟವಾಗುತ್ತಿದೆ. ಆದರೂ ಸಹ ಸರ್ಕಾರ ಇದರ ಬಗ್ಗೆ ಯೋಚನೆ ಮಾಡಿಲ್ಲ. ಇದನ್ನು ನೋಡಿದಾಗ ಇದರಲ್ಲಿ ಸರ್ಕಾರಕ್ಕೆ ಏನೋ ಲಾಭ ಇದೆ ಎಂಬ ಬಗ್ಗೆ ಸಂಶಯ ನನಗೆ ಬರುತ್ತದೆ. ಇಲ್ಲದಿದ್ದರೆ ಇದನ್ನು ಸರ್ಕಾರ ತಪ್ಪಿಸಬಹುದಿತ್ತು.

"While the Government run Mysore Minerals has only 13 quarryies, unlicensed contractors are running more than 400 quarries. The latter are chipping away more than 50,000 cubic metres of granite every year."

ಒಂದು ವರ್ಷಕ್ಕೆ ೫೦ ಸಾವಿರ ಕ್ಯುಬಿಕ್ ಮೀಟರ್ ಗ್ರಾನೈಟನ್ನು ಇಲ್ಲೀಗಲಾಗಿ ಬೇರೆ ದೇಶಗಳಿಗೆ ರಫ್ತು ಮಾಡುವ ವ್ಯವಸ್ಥೆ ಇದೆ.

> "Illegal granite quarrying is a very lucrative business-a cubic metre of black stone extracted at a cost of Rs. 2,700 is said to fetch a price of Rs. 15,000 in the export market."

೨೭೦೦ ರೂ. ಇಲ್ಲಿ ಮಾರ್ಕೆಟ್ ಇದ್ದರೆ ಅಲ್ಲಿ ೧೫ ಸಾವಿರ ರೂ. ಬೆಲೆ ಇದೆ. ಆದ್ದರಿಂದ ಎಷ್ಟು ನಷ್ಟವಾಗುತ್ತಿದೆ ಎಂಬುದನ್ನು ನೋಡಿ.

> "When the going is so good, granite-runners do not mind greasing a palm here and there-as a matter of fact, they grease palms right from the quarry to the Mangalore or Madras harbour according to Mr. G. Raju Gowda."

ಅಧ್ಯಕ್ಷರೇ, ಸರ್ಕಾರದವರು ಕರ್ನಾಟಕದವರಿಗೆ ಕಂಟ್ರಾಕ್ಟ್ ಕೊಟ್ಟಿದ್ದಾರೆ, ಹಾಗೆ ಪರದೇಶದವರಿಗೂ ಕೊಟ್ಟಿದ್ದಾರೆ. ಹೆಚ್ಚಾಗಿ ಕೊಟ್ಟಿರುವುದು ಪರದೇಶದವರಿಗೆ. ಅವರು ಇಲ್ಲಿಗೆ ಬಂದು ನಮ್ಮ ಕಲ್ಲನ್ನು ತೆಗೆದುಕೊಂಡು ಹೋಗಿ ಹೆಚ್ಚಿನ ಲಾಭ ಮಾಡುತ್ತಿದ್ದಾರೆ. Sri Raju Gowda has given a statement stating that the Government is suffering great loss. Departmental enquiry is pending from 1-4-87. Enquiry in 100 cases. Balance 89 cases. ಹೀಗೆ ಏಕೆ ಎಂದು ಸರ್ಕಾರ ಹೇಳಬೇಕು. ಎನ್‌ಕ್ವೈಯರಿ ಮಾಡುವ ಅವಶ್ಯಕತೆ ಏನು ಯಾರಿಂದ ಬಂತು, ಏಕೆ ಬಂತು ಯಾವ ಸಂದರ್ಭದಲ್ಲಿ ಬಂತು ಎಂದು ಹೇಳಬೇಕು. ಏಕೆಂದರೆ ಸರ್ಕಾರ ಇದರ ಬಗ್ಗೆ ಬಹಳ ಸಡಿಲ ಬಿಟ್ಟಿದ್ದಾರೆ. ಅನಂತರ ಡಿಪಾಜಿಟ್ ೧೩,೩೩,೩೫೦–೭೫ ರೂ. ಇದೆ. ಆದರೆ ಎನ್.ಸಿ.ಎನ್. ೧,೩೬.೭೫೦ ರೂ, ಬ್ಯಾಂಕ್ ಗ್ಯಾರಂಟಿ ೫,೮೭,೩೬೪ ರೂ. ಎಫ್.ಆರ್.ಡಿ. ಒಂದು ಲಕ್ಷದ ೬೪ ಸಾವಿರದ ಏಳುನೂರ ಐವತ್ತು, ಇದು ಇರತಕ್ಕದ್ದು. ಮುಂದೆ ಗ್ಯಾರಂಟಿ ೭,೬೨.೨೮೪ ರೂ. ಇವರಿಗೆ ಬಂದಿರತಕ್ಕದ್ದು ೫,೭೧,೩೬೪ ಇದರಲ್ಲಿ ೧೭.೦೦೦ ಬ್ಯಾಂಕ್ ಗ್ಯಾರಂಟಿ ಹೇಗೆ ರಿಫಂಡ್ ಮಾಡಿದರು ಎಂಬುದನ್ನು ಸರ್ಕಾರ ಹೇಳಬೇಕು. ಆಮೇಲೆ ಇಲ್ಲಿ ಬರುವ ಉತ್ಪತ್ತಿಯಲ್ಲಿ ಸುಮಾರು ೬೦ ಪರ್ಸೆಂಟ್ ಅಧಿಕಾರಿಗಳಿಗೆ ಹೋಗುತ್ತದೆಂದು ಸ್ಪಷ್ಟವಾಗಿ ಇಲ್ಲಿ ಹೇಳಿದ್ದಾರೆ.

ಇವರ ಬಡ್ಜೆಟ್ ಎಕ್ಸ್‌ಪೆಂಡಿಚರ್ ೮೭ರಲ್ಲಿ ಮಾಡಿರತಕ್ಕಂಥಾದ್ದು ನಾನ್ ಪ್ಲಾನ್‌ನಲ್ಲಿ ೧೨೦.೩೫ ಲಕ್ಷ, ಪ್ಲಾನ್‌ನಲ್ಲಿ ೧೦೫.೩೪ ೮೭ರಲ್ಲಿ ಪ್ಲಾನ್‌ನಲ್ಲಿ ೨೧೨ ಲಕ್ಷ ಆದರೆ ಅದರಲ್ಲಿ ಖರ್ಚು ಮಾಡಿರತಕ್ಕಂಥಾದ್ದು ೧೨೫ ಲಕ್ಷ ಮಾತ್ರ. ಕಳೆದ ವರ್ಷ ಅಂದರೆ ೮೬ರಲ್ಲಿ ೧೨೦ರಲ್ಲಿ ೧೦೫ ಲಕ್ಷ ಖರ್ಚು ಮಾಡಿದ್ದಾರೆ, ಈ ವರ್ಷ ೨೧೭ರಲ್ಲಿ ೧೭೫.೩೨ ಲಕ್ಷ ಖರ್ಚು ಮಾಡತಕ್ಕಂಥಾದ್ದು ಇದೆ. ಹೆಚ್ಚೂ ಕಡಿಮೆ ೯೦ ಲಕ್ಷವನ್ನು ಈ ಇಲಾಖೆಯಲ್ಲಿ ಖರ್ಚು ಮಾಡಲಿಕ್ಕೆ ಆಗಿಲ್ಲ. ಇದರಲ್ಲಿ ಹೆಚ್ಚು ಉತ್ಪಾದನೆಯನ್ನು ತೋರಿಸಲಿಕ್ಕೆ ಆಗಿಲ್ಲ. ೮೭ರಲ್ಲಿ ನಾನ್ ಪ್ಲಾನ್‌ನಲ್ಲಿ ೬೮.೬೮ ಎಕ್ಸ್‌ಪೆಂಡಿಚರ್ ಆಗಿರತಕ್ಕಂಥಾದ್ದು ೬೩.೪೬. ಸುಮಾರು ೨೫ ಲಕ್ಷದಷ್ಟು ಹಣವನ್ನು ಖರ್ಚು ಮಾಡಿಲ್ಲ ಅದೇ ರೀತಿಯಲ್ಲಿ ೧೮೪ ಲಕ್ಷ ಪ್ಲಾನ್ ಬಡ್ಜೆಟ್ ಇದ್ದರೆ ೯೯.೯೬ ಲಕ್ಷ ಮಾತ್ರ ಖರ್ಚಾಗಿದೆ. ಹೆಚ್ಚೂ ಕಡಿಮೆ ಸುಮಾರು ೯೬–೯೭ ಲಕ್ಷ ಮಾತ್ರ ಖರ್ಚಾಗಿರುವುದಕ್ಕೆ ಸರ್ಕಾರ ಜವಾಬು ಕೊಡಬೇಕಾಗುತ್ತದೆ. ಸರ್ಕಾರದವರು ಇದನ್ನು ನೇರವಾಗಿ ನ್ಯಾಷನಲೈಸ್ ಮಾಡಿದರೆ ಇದರಿಂದ ಬೇಕಾದಷ್ಟು ಮಿನರಲ್ಸ್‌ಗಳನ್ನು ಕಂಡು ಹಿಡಿಯಬಹುದು. ಕರ್ನಾಟಕದ ಪ್ರತಿ ಜಾಗದಲ್ಲಿ ಮಿನರಲ್ಸ್‌ಗಳು ಸಿಗುತ್ತದೆ ಗ್ರಾನೈಟ್ಸ್ ಸಿಗುತ್ತದೆ ಇನ್ನೂ ಅನೇಕ ಖನಿಜ ಸಂಪತ್ತುಗಳು ಸಿಗುತ್ತದೆ. Even a small portion of sand is also a mineral. ಇದರ ಬಗ್ಗೆ ಸಹ ರಿಸರ್ಚ್ ಮಾಡಬೇಕಾಗುತ್ತದೆ ಬೇಕಾದಷ್ಟು ಹೊಳೆಗಳು ಇದ್ದು ಆದರೆ ಇಬ್ಬದಿಗಳಲ್ಲಿ ಮರಳು ಇದೆ, ಅಲ್ಲಿ ಖನಿಜ ಸಂಪತ್ತು ಸಿಗುತ್ತದೆ, ಇದನ್ನು ಅವರು ಇನ್‌ವೆಸ್ಟಿಗೇಷನ್ ಮಾಡಿ ಡಿಸ್‌ಕವರ್ ಮಾಡತಕ್ಕಂತಹ ವ್ಯವಸ್ಥೆಯನ್ನು ಮಾಡಲಿಕ್ಕೆ ಒಂದು ಇಲಾಖೆಯನ್ನು ರಚನೆ ಮಾಡಬೇಕಾಗುತ್ತದೆ. ಸಣ್ಣ ಮಿನರಲ್ಸ್ ಆದರೂ ಕೂಡ ಅದರಿಂದ

ಸರ್ಕಾರಕ್ಕೆ ಹೆಚ್ಚು ಪ್ರಯೋಜನ ಸಿಗುತ್ತದೆ. ಈ ಬಗ್ಗೆ ಒಂದು ಇಲಾಖೆಯನ್ನು ರಚನೆ ಮಾಡಿ ಮಿನರಲ್ಸ್‌ಗಳನ್ನು ಕಂಡುಹಿಡಿದು ಈ ಮೂಲಕ ರಾಜ್ಯದ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕು. ಜಿಯಾಲಜಿಕಲ್ ಇಲಾಖೆಯಿಂದ ಭೂಗರ್ಭದಲ್ಲಿರತಕ್ಕಂತಹ ಜಲವನ್ನು ಮೇಲಕ್ಕೆ ತರಲಾಗುತ್ತಿದೆ. ಆದರೆ ಈಗ ನೀರು ಇನ್ನೂ ಕೆಳಕ್ಕೆ ಹೋಗುತ್ತಿದ್ದು ನಮಗೆ ಬೇಕಾದಷ್ಟು ನೀರು ಸಿಗುತ್ತಿಲ್ಲವೆಂದು ಅನಿಸುತ್ತದೆ. ಇದಕ್ಕೆ ಒಂದು ಸಮಿತಿಯನ್ನು ಮಾಡಿ. ಯಾವ ರೀತಿಯಲ್ಲಿ ಈ ನಿಯಂತ್ರಣವನ್ನು ಮಾಡಬಹುದು ಎಂಬುದನ್ನು ಆ ಸಮಿತಿಯು ವಿವರವಾಗಿ ಪರಿಶೀಲಿಸಿ ವರದಿ ಕೊಟ್ಟರೆ ಸರ್ಕಾರಕ್ಕೆ ಅನುಕೂಲವಾಗುತ್ತದೆ ಇದನ್ನು ಮಾಡಬೇಕು ಎಂದು ಈ ಮೂಲಕ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಈ ಕಲ್ಲು ಕತ್ತರಿಸುವ ಮತ್ತು ಪಾಲಿಷ್ ಮಾಡತಕ್ಕಂತಹ ಫ್ಯಾಕ್ಟರಿಗಳನ್ನು ಸರ್ಕಾರವೇ ಮಾಡುವುದಾದರೆ ಅದರಿಂದ ಜನತೆಗೆ ಕೆಲಸ ಸಿಗುತ್ತದೆ ಮತ್ತು ಅದರಿಂದ ಸರ್ಕಾರಕ್ಕೆ ಹೆಚ್ಚಿನ ಲಾಭ ಕೂಡ ಬರುತ್ತದೆ. ನಿಮ್ಮ ರಿಸೋರ್ಸಸ್ ಕೂಡ ಹೆಚ್ಚಾಗುತ್ತದೆ. ಇದರ ಬಗ್ಗೆ ಸರ್ಕಾರ ಕೂಡಲೇ ಕ್ರಮವನ್ನು ತೆಗೆದುಕೊಳ್ಳಬೇಕು. ನಮ್ಮಲ್ಲಿ ಏನು ಸಂಪತ್ತು ಇದೆ ಅದು ಬೇರೆ ಯಾವರಿಗೆ ಹೋಗತಕ್ಕಂತಹ ವ್ಯವಸ್ಥೆಯಾಗುತ್ತಿದೆ ಆ ಸಂಪತ್ತನ್ನು ನೀವು ತಡೆಹಿಡಿದು ಇದು ನಮ್ಮ ದೇಶದ ಸಂಪತ್ತಾಗಿ ಉಳಿಯುವಂತೆ ಮಾಡಬೇಕು. ಆದರಿಂದ ದೇಶದ ಅಭಿವೃದ್ಧಿಯಾಗುತ್ತದೆ ದೇಶದ ಆರ್ಥಿಕ ಸ್ಥಿತಿ ಹೆಚ್ಚಾಗುತ್ತದೆ. ಇದರಿಂದ ಕರ್ನಾಟಕದ ಆರ್ಥಿಕ ಸ್ಥಿತಿ ಕೂಡ ಹೆಚ್ಚಾಗುತ್ತದೆ. ಇದನ್ನು ಮಾಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಪಾಲಿಷಿಂಗ್ ಮತ್ತು ಕಟಿಂಗ್ ಫ್ಯಾಕ್ಟರಿಗಳನ್ನು ಸರ್ಕಾರವೇ ಹಾಕಿ ಹೆಚ್ಚಿನ ಉತ್ಪಾದನೆಯನ್ನು ಮಾಡಬೇಕೆಂದು ಸರ್ಕಾರವನ್ನು ಮತ್ತೊಮ್ಮೆ ಒತ್ತಾಯ ಮಾಡುತ್ತಿದ್ದೇನೆ.

ಅಧ್ಯಕ್ಷರೇ, ತದನಂತರ ತುಮಕೂರಿನ ಪಾವಗಡದಲ್ಲಿ ಸಿಗತಕ್ಕಂಥ ಈ ರ್ಯೂಬಿಕ್ ಸ್ಟೋನ್‌ಗಳ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಅಲ್ಲಿ ಬಹಳಷ್ಟು ಬೆಲೆ ಬಾಳತಕ್ಕಂಥಾದ್ದು ಸಿಗುತ್ತದೆ, ಇಂಥಾದ್ದು ಬಹಳಷ್ಟು ಕರ್ನಾಟಕ ರಾಜ್ಯದಲ್ಲಿ ಬಹಳ ಕಡೆ ಸಿಗುತ್ತಿದೆ, ಇದನ್ನು ಇನ್‌ವೆಸ್ಟಿಗೇಟ್ ಮಾಡಿ ಕಂಡುಹಿಡಿಯಬೇಕು. ತುಮಕೂರು ಡಿಸ್ಟ್ರಿಕ್ಟ್‌ನಲ್ಲಿ ಸಿಗತಕ್ಕಂಥ ಈ ರ್ಯೂಬಿಕ್ ಸ್ಟೋನ್ ಏನು ಇದೆ, ಅದು ಬಹಳ ಬೆಲೆ ಬಾಳತಕ್ಕಂಥದ್ದು. ಈ ರೀತಿ ಬಹಳಷ್ಟು ಬೆಲೆ ಬಾಳತಕ್ಕಂಥದ್ದನ್ನು ಅಲ್ಲಿಯ ಜನರು ಕದ್ದು ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದಾರೆ ಅದರ ಬದಲು ಆ ಏರಿಯಾದಲ್ಲಿ ಇನ್ನು ಏನೇನು ಸಿಗುತ್ತದೆಂಬುದನ್ನು ಕಂಡುಹಿಡಿದು ಅದಕ್ಕೆ ಅಲ್ಲಿ ಫ್ಯಾಕ್ಟರಿಯನ್ನು ತೆರೆದು ಅಲ್ಲಿ ಸಿಗತಕ್ಕಂಥ ಕಲ್ಲು ಏನು ಇದೆ. ಅದನ್ನು ತೆಗೆದುಕೊಂಡು ಅಲ್ಲಿ ಪಾಲಿಷ್ ಮಾಡಿ ಮಾರುವುದಾದರೆ ಸರ್ಕಾರಕ್ಕೆ ಇನ್ನೂ ಹೆಚ್ಚಿನ ಒಂದು ಲಾಭ ಬರುತ್ತದೆ ಎಂದು ನಾನು ಹೇಳಬಯಸುತ್ತೇನೆ. ಇವತ್ತು ಏನಾಗಿದೆ, ಸರ್ಕಾರದವರು ಬೇರೆ ಪ್ರೈವೇಟ್ ಕಂಟ್ರಾಕ್ಟರ್‌ಗಳಿಗೆ ಕೊಟ್ಟು ಅವರೇ ಲಾಭ ಗಳಿಸತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆಯೇ ಹೊರತು ದೇಶದ ಉತ್ಪತ್ತಿಯನ್ನು ಹೆಚ್ಚಿಸಬೇಕು ಎಂದು ಬೇಕತಕ್ಕಂಥ ಭಾವನೆ ತಮ್ಮಲ್ಲಿ ಇವತ್ತು ಇಲ್ಲ. ಆದ್ದರಿಂದ ಮಂತ್ರಿಗಳಲ್ಲಿ ನಾನು ಒತ್ತಾಯಪಡಿಸತಕ್ಕಂಥದ್ದು, ಇದು ನಿಜವಾಗಿಯೂ ಈ ಭೂಮಿಯಲ್ಲಿ ಇರತಕ್ಕಂಥ ಖನಿಜ ಸಂಪತ್ತು ಏನು ಇದೆ, ಆ ಖನಿಜ ಸಂಪತ್ತನ್ನು ನಾವು ಹೆಚ್ಚಿಸುವುದಾದರೆ ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಇಲಾಖೆಗಳಿಗಿಂತ ಹೆಚ್ಚಿನ ಉತ್ಪತ್ತಿ ಈ ಖನಿಜ ಸಂಪತ್ತಿನಿಂದ ಸಿಗುತ್ತದೆ ಎಂದು ನಾನು ಇಲ್ಲಿ ಹೇಳಬಯಸುತ್ತೇನೆ. ಇದಕ್ಕೋಸ್ಕರವಾಗಿ ಹೊಸದಾಗಿ ಒಂದು ಡಿಪಾರ್ಟ್‌ಮೆಂಟನ್ನು ರಚನೆ ಮಾಡುವ ಬಗ್ಗೆ ಹೆಚ್ಚು ಪ್ರಯತ್ನ ಇಷ್ಟರವರೆಗೂ ಆಗಿಲ್ಲ. ಈ ಬಗ್ಗೆ ಆ ಡಿಪಾರ್ಟ್‌ಮೆಂಟನ್ನೇ ಊರ್ಜಿತಗೊಳಿಸಬೇಕು, ಅದರಿಂದ ಸರಿಯಾದ ರೀತಿಯಲ್ಲಿ ಕೆಲಸ ಮಾಡಿಸಿ ಉತ್ಪತ್ತಿಯನ್ನು ಹೆಚ್ಚಿಸತಕ್ಕಂಥ ಒಂದು ಪ್ರಯತ್ನವನ್ನು ಸರ್ಕಾರ ಮಾಡಬೇಕು. ಏಕೆಂದರೆ, ಈ ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್ ಏನು ಇದೆ, ಅದು ಬಳಕೆಗೆ ಬರುತ್ತಿಲ್ಲ. ಯಾವ ಅಧಿಕಾರಿಗಳು ಈ ಇಲಾಖೆಯಲ್ಲಿ ಇದ್ದಾರೆ ಎಂದು ಗೊತ್ತಾಗುತ್ತಿಲ್ಲ, ಇಲ್ಲಿ ಏನೇನು ಮಾಡುತ್ತಿದ್ದಾರೆ ಎಂದು ಅದೂ ಕೂಡ ಗೊತ್ತಾಗುತ್ತಿಲ್ಲ. ಆದರಿಂದಾಗಿ ಪ್ರೈವೇಟ್ ಪರ್ಸನ್ಸ್ ಅದರ ಲಾಭವನ್ನು ಪಡೆಯುತ್ತಿದ್ದಾರೆ. ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಆಡಲಿಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದೀರಿ ನಮ್ಮಲ್ಲಿ ಇವತ್ತು ಗಣಿ ಸಂಪತ್ತು ಏನು ಇದೆ, ಈ ಗಣಿ ಸಂಪತ್ತು ನಿಜವಾಗಿಯೂ ಬರುತ್ತಾ ಬರುತ್ತಾ

ಅನ್ಯರ ಸಂಪತ್ತಾಗುತ್ತಿದೆ. ಇದನ್ನು ಇವತ್ತು ಏನಾದರೂ ಸಂರಕ್ಷಣೆ ಮಾಡದಿದ್ದರೆ ನಾಳೆ ನಾವು ಎಲ್ಲವನ್ನೂ ಹಾಳು ಮಾಡಿಕೊಂಡ ಹಾಗೆ ಆಗುತ್ತದೆ. ಇಡೀ ಪ್ರಪಂಚದಲ್ಲಿಯೇ ಅತೀ ಹೆಚ್ಚಿನ ಸಂಪತ್ತನ್ನು ಹೊಂದಿರತಕ್ಕಂಥ ಈ ಭರತಭೂಮಿಯಲ್ಲಿ ಅದರಲ್ಲೂ ಕರ್ನಾಟಕ ರಾಜ್ಯದಲ್ಲಿ ಈ ಸಂಪತ್ತು ಅನ್ಯರ ಸಂಪತ್ತಾಗದಂತೆ ಕಾಪಾಡಲಿಕ್ಕೆ ನಾವು ಅನೇಕ ಕ್ರಮಗಳನ್ನು ಕೈಕೊಳ್ಳಬೇಕಾಗಿದೆ ಈ ಗಣಿ ಸಂಪತ್ತಿನ ಬಗ್ಗೆ ಮಾನ್ಯ ಸದಸ್ಯರಾದ ಚಿನ್ನಪ್ಪನವರು ಬಹಳ ವಿಶ್ಲೇಷಣಾ ರೀತಿಯಲ್ಲಿ ವಿವರಣೆ ಕೊಟ್ಟರು. ಇವತ್ತು ಈ ಗಣಿ ಇಲಾಖೆ ಸಾರ್ವಜನಿಕರ ಹಿತವನ್ನು ಕಾಪಾಡಲಿಕ್ಕೆ ಇದ್ದರೂ ಸಹ ಯಾರೋ ಕೆಲವು ಹಾರಾಟಗಾರರು ಇವತ್ತು ಕಲ್ಲು, ಮರ ಎಲ್ಲದರ ಲಾಭವನ್ನು ಅವರೇ ಪಡೆದು ಕೊಳ್ಳುತ್ತಿದ್ದಾರೆ. ಕೆಲವು ಕಡೆಯಲ್ಲಿ ಹೇಳುವುದಾದರೆ ೨೫-೩೦ ವರ್ಷಗಳ ಹಿಂದೆ ಏನೊಂದು ಪರವಾನಿಗೆಯನ್ನು ತೆಗೆದುಕೊಂಡರೋ ಅದನ್ನೇ ತದನಂತರ ಬೇರೆಯವರಿಗೆ ಮಾರಿದ್ದಾರೆ. ಇವತ್ತು ಸುಣ್ಣ ಕಲ್ಲಿದ್ದಲು ಮುಂತಾದ ಖನಿಜ ಸಂಪತ್ತನ್ನು ಹಾರಾಟ ಮಾಡಲು ಪರವಾನಿಗೆ ಕೊಡುತ್ತೀರಿ. ಈ ರೀತಿ ಪರವಾನಿಗೆಯನ್ನು ೨೦-೨೫ ವರ್ಷಗಳ ಕಾಲ ಕೊಡುವುದನ್ನು ನಿಲ್ಲಿಸಬೇಕು. ಸಣ್ಣ ಸಣ್ಣದಕ್ಕೆ ಕೊಟ್ಟಾಗ ಅದನ್ನು ಲಾಭದಾಯಕವಾಗಿ ಬೇರೆಯವರಿಗೆ ಮಾರುವುದು ತಪ್ಪುತ್ತದೆ ಎನ್ನುವ ದೃಷ್ಟಿ ಯಿಂದ ಇದನ್ನು ಉಳಿಸಬೇಕು ಎಂದು ಹೇಳುತ್ತೇನೆ. ಭೂ ವಿಜ್ಞಾನದಲ್ಲಿ ಏನು ಆಗಿದೆ ಅಂದರೆ ಜಲ ಸಂಪತ್ತು ದಿನೇ ದಿನೇ ಕೆಳಮಟ್ಟಕ್ಕೆ ಹೋಗುತ್ತಿದೆ. ಕೊಳವೆ ಬಾವಿಗಳನ್ನು ತೋಡಿಸಬೇಕಾಗಿದೆ.

ಅಧ್ಯಕ್ಷರು,—ನೀವು ಮಾತನಾಡಿ, ಅವರು ಕೇಳಿಸಿಕೊಳ್ಳುತ್ತಾರೆ.

ಶ್ರೀ ಬಿ. ಆರ್. ನೀಲಕಂತಪ್ಪ.—ಇವೊತ್ತು ಜಿಯೋಲಾಜಿಕಲ್ ಸರ್ವೆ ಡಿಪಾರ್ಟ್‌ಮೆಂಟ್ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ. ೧೦೦ ವೆಲ್‌ಗಳನ್ನು ತೆಗೆಸಲಿಕ್ಕೆ ಒಬ್ಬ ಜಿಯಾಲಜಿಸ್ಟ್ ಅನ್ನು ನೇಮಕ ಮಾಡಿದರೆ ನಮ್ಮ ತಾಲ್ಲೂಕಿನಲ್ಲಿ ಆಗಲೀ ಅಥವಾ ನನ್ನ ಕ್ಷೇತ್ರದಲ್ಲಿಯಾಗಲೀ ಕೇವಲ ಎರಡು ಜನ ಅಥವಾ ಮೂರು ಜನ ಇರುತ್ತಾರೆ. ಈ ದಿಶೆಯಲ್ಲಿ ಅವರು ಕೊಟ್ಟ ಒಂದು ಮಾಹಿತಿ ಅಥವಾ ಕಂಡು ಹಿಡಿದಿರತಕ್ಕ ಜಲ ಸಂಪತ್ತಿನಲ್ಲಿ ನೂರಕ್ಕೆ ೨೦ ಭಾಗ ಸಕ್ಸಸ್ ಆಗಿದೆ, ೭೦ ರಿಂದ ೮೦ ಭಾಗ ಫೆಲ್ಯೂರ್ ಆಗಿದೆ. ಇದಕ್ಕೆ ಹೊಣೆ ಯಾರು, ಎಂದು ನಾನು ಹೇಳುತ್ತಾ ಇಲ್ಲ ಆದರೆ ಅವರು ನಿರ್ಧಿಷ್ಟ ಕಾಲದಲ್ಲಿ ಕಂಡು ಹಿಡಿಯಲಿಕ್ಕೆ ಆಗುತ್ತಿಲ್ಲ, ಈ ದೃಷ್ಟಿಯಿಂದ ರೈತರ ಬವಣೆ ವಿಚಿತ್ರವಾಗಿದೆ. ತಾವು ಏನಾದರೂ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು, ಏಕೆಂದರೆ ತಾವು ಉತ್ಸಾಹಿಗಳು ಇದ್ದೀರಿ, ಇಡೀ ರಾಜ್ಯದಲ್ಲಿ ಮತ್ತು ಜಿಲ್ಲೆಯಲ್ಲಿ, ೧೦೦ ವೆಲ್‌ಗಳ ಸ್ಕೀಮ್‌ನಲ್ಲಿ ಒಂದು ಪರಿಶೋಧನೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಯಾವ ರೀತಿ ಅದು ಸಕ್ಸಸ್ ಆಗಿದೆ. ಅಥವಾ ಫೆಲ್ಯೂರ್ ಆಗಿದೆ ಎನ್ನುವ ಬಗ್ಗೆ ಒಂದು ಮಾಹಿತಿಯನ್ನು ನೀಡಬೇಕು. ಇದರ ಬಗ್ಗೆ ಒಂದು ಯೋಜನೆ ರೂಪಿಸಬೇಕು, ಎಷ್ಟು ದಿವಸದ ಒಳಗೆ ಮಾಹಿತಿ ಕೊಡುತ್ತೀರಿ ಎಂಬ ಬಗ್ಗೆ ಭರವಸೆಯನ್ನು ಕೊಡಬೇಕು. ಇಲ್ಲದಿದ್ದರೆ ರೈತರ ಪರದಾಟ ಎರಡು ವರ್ಷ ಆದರೂ ಮೂರು ವರ್ಷ ಆದರೂ ನೂರು ಬಾವಿಗಳ ಯೋಜನೆಗಳಾಗಲೀ ಅಥವಾ ಇತರ ಯೋಜನೆಗಳಾಗಲೀ ಫಲಕಾರಿಯಾಗುವುದಿಲ್ಲ. ಬ್ಯಾಂಕ್‌ನಿಂದ ಅವರು ಸಾಲ ತೆಗೆದುಕೊಂಡಿರುತ್ತಾರೆ, ಅಥವಾ ದುಡ್ಡು ರಿಲೀಸ್ ಆಗಿರುತ್ತದೆ ಅಥವಾ ಎಲ್ಲಾ ಕ್ರಮಗಳೂ ಆಗಿರುತ್ತದೆ, ಆದರೂ ಜಿಯಾಲಜಿಸ್ಟ್ ಬಂದು ನೀರು ಗುರುತು ಮಾಡುವ ಕಾರ್ಯ ಮಾತ್ರ ಕಂಡು ಬಂದಿಲ್ಲ. ಇಲ್ಲಿ ಬಹಳ ಅವ್ಯವಸ್ಥೆ ಆಗಿದೆ. ಅದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ಇನ್ನು ಯುವಜನ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಯುವಶಕ್ತಿಯನ್ನು ಇವೊತ್ತು ಸರಿಯಾದ ದಾರಿಗೆ ತರಲಿಕ್ಕೆ ನಾವು ಪ್ರಯತ್ನ ಮಾಡಬೇಕಾಗಿದೆ. ಇಲ್ಲದಿದ್ದರೆ ಯುವಕರು ಅನೇಕ ಕೆಟ್ಟ ಹವ್ಯಾಸಕ್ಕೆ ಅಥವಾ ಕೆಟ್ಟ ದಾರಿಗೆ ಬಲಿ ಆಗುತ್ತಾರೆ, ಇವಕ್ಕೆ ಮೂಲ ಕಾರಣ ನಮ್ಮ ಶಿಕ್ಷಣ ಇಲಾಖೆಯಲ್ಲಿ ಒಂದು ಆಟಪಾಟಗಳಿಗೆ...

ಅಧ್ಯಕ್ಷರು.—ಮಾತನಾಡಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ಯುವಜನ ಇಲಾಖೆಯನ್ನು ನಾವು ಬಹಳ ವಿಶೇಷ ರೀತಿಯಲ್ಲಿ ಬೆಳೆಸಬೇಕಾಗಿದೆ. ಅದನ್ನು ಬೆಳೆಸಲಿಕ್ಕೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ, ಬಹಳ ಕಟ್ಟುನಿಟ್ಟಾದ ಕಾರ್ಯಕ್ರಮವನ್ನು ಹಾಕಿಕೊಂಡಾಗ ಮಾತ್ರ ರಾಷ್ಟ್ರ ಉಳಿಯುತ್ತದೆ, ರಾಜ್ಯ ಉಳಿಯುತ್ತದೆ. ಇಲ್ಲದಿದ್ದರೆ ಇನ್ನು ಹತ್ತಾರು ವರ್ಷಗಳಲ್ಲಿ ಮನುಷ್ಯ ಮನುಷ್ಯನಾಗಿ ಬದುಕಲು ಕಷ್ಟ ವಾಗುತ್ತದೆ. ಯುವಜನರಲ್ಲಿ ಇಂದು ಏನು ಆಗಿದೆ ಅಂದರೆ ಮುಂದೆ ಏನು ಮಾಡಬೇಕು, ಯಾವರೀತಿ

ಇರಬೇಕು ಎನ್ನುವುದು, ಇತ್ಯಾದಿಯಾಗಿ ಅವರು ಒಂದು ಗುರಿಯನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಕಾರಣ ಇಷ್ಟೇ, ಜನಸಂಖ್ಯೆ ಇರಬಹುದು, ಯುವಶಕ್ತಿ ಜಾಸ್ತಿ ಇರಬಹುದು ಅಥವಾ ನಾವು ಹಾಕಿಕೊಂಡ ಮಾರ್ಗಗಳು ಕಡಿಮೆ ಇರಬಹುದು, ಅದನ್ನು ತಾಲನೆ ಮಾಡಬೇಕಾಗಿದೆ. ಈ ದೃಷ್ಟಿಯಿಂದ ರಾಷ್ಟ್ರೀಯ ಸೇವಾ ಯೋಜನೆ, ನೂಟ್ರಿಷನ್ ಕೇಂದ್ರಗಳು ಇವು ಕೇವಲ ಕೆಲವೇ ಭಾಗಗಳಲ್ಲಿ ಆಟಪಾಠಗಳನ್ನು ನಡೆಸಿ ಪ್ರಶಸ್ತಿ ಕೊಟ್ಟು ಹೋಗುವ ಪರಿಸ್ಥಿತಿ ಉಂಟಾಗಿದೆ. ನಮ್ಮ ಯೋಜನೆ ಇರುವುದು ಒಂದು ತರಹ, ಗುರಿ ಇರುವುದು ಒಂದು ತರಹ. ಆದ್ದರಿಂದ ನಾವು ನಮ್ಮ ಯೋಜನೆಯನ್ನು ಬಹಳ ಒಳ್ಳೆಯ ರೀತಿಯಲ್ಲಿ ಬದಲಾವಣೆ ಮಾಡಬೇಕಾಗಿದೆ. ವಿದ್ಯಾರ್ಥಿಗಳಿಗೆ ಸ್ಕೌಟ್ಸ್ ಮತ್ತು ಗೈಡ್ಸ್ ಅಂದರೆ ಎನ್‌ಸಿಸಿ,ನಲ್ಲಿ ತರಬೇತಿ ನೀಡಲಾಗುತ್ತಿದೆ. ಇದರಲ್ಲಿ ಸಹ ಹಣ ಖರ್ಚಾಗುತ್ತಿದೆ. ಎಲ್ಲಾ ಇಲಾಖೆಗಳಿಗಿಂತ ಶಿಕ್ಷಣ ಇಲಾಖೆಗೆ ಇಡೀ ಬಜೆಟ್‌ನಲ್ಲಿ ನಾವು ಜಾಸ್ತಿ ಹಣವನ್ನು ಕೊಡುತ್ತಿದ್ದೇವೆ.

ಆದರೆ ಇದರ ಉಪಯೋಗವೆಷ್ಟಾಗುತ್ತಿದೆ ಎಂಬುದನ್ನು ನೋಡಿದಾಗ, ನೂರು ರೂಪಾಯಿಗಳಲ್ಲಿ ಹತ್ತು ಪೈಸೆಯಷ್ಟು ಸಹ ಸರಿಯಾಗಿ ಉಪಯೋಗವಾಗದ ಪರಿಸ್ಥಿತಿ ಉಂಟಾಗಿದೆ. ಇದು ಸರಿಯಲ್ಲ. ದಯಮಾಡಿ ಸರ್ಕಾರದವರು ನಮ್ಮ ಯುವಕರನ್ನು ಸರಿಯಾದ ರೀತಿಯಲ್ಲಿ ಬೆಳೆಸಬೇಕು. ಇಲ್ಲದಿದ್ದರೆ ಸರ್ಕಾರ ಒಂದು ಗುರುತರವಾದಂಥ ತಪ್ಪನ್ನು ಮಾಡಿದಂತೆ ಆಗುತ್ತದೆಂದು ಹೇಳುತ್ತೇನೆ. ನಮ್ಮಲ್ಲಿ ಈಗ ಅನೇಕ ಸೇವಾ ದಳಗಳಿವೆ, ಯುವಕ ಕೇಂದ್ರಗಳಿವೆ. ಆದರೆ ಇವುಗಳನ್ನು ನಾವು ಸರಿಯಾಗಿ ಬಳಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಇವೊತ್ತು ಪ್ರತಿ ಹಳ್ಳಿಯಲ್ಲಿಯೂ ಯುವಕ ಕೇಂದ್ರಗಳಿವೆ. ಈ ಯುವಕ ಸಂಘಗಳಿಗೆ ನಾವು ಸರಿಯಾದ ಪ್ರೋತ್ಸಾಹವನ್ನು ಕೊಡುತ್ತಿಲ್ಲ. ವರ್ಷಕ್ಕೆ ಒಂದು ಸಲ ತಾಲ್ಲೂಕ್ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಆಟಪಾಠಗಳು ನಡೆದಾಗ ಮಾತ್ರ ಈ ಯುವಕ ಸಂಘಗಳ ಉಪಯೋಗವಾಗುತ್ತದೆ. ನಮ್ಮ ಯುವಕರನ್ನೇ ಆಗಲೀ, ನಮ್ಮ ರೈತರನ್ನೇ ಆಗಲೀ, ಸಾಮಾಜಿಕ ಸೇವೆಯಲ್ಲಿ ತೊಡಗಿಸಿ, ಅವರನ್ನೆಲ್ಲಾ ಉತ್ತಮ ರೀತಿಯಿಂದ ಬೆಳೆಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇವರಿಗೆ ಸೂಕ್ತ ಮಾರ್ಗದರ್ಶನಗಳನ್ನು ನೀಡಬೇಕಾಗುತ್ತದೆ. ಮುಖ್ಯವಾಗಿ ಪ್ರತಿ ತಾಲ್ಲೂಕ್ ಕೇಂದ್ರದಲ್ಲಿಯೂ ಕ್ರೀಡಾಂಗಣವನ್ನು ನಿರ್ಮಿಸಬೇಕಾಗಿದೆ. ಆದರೆ ಇವು ಈಗ ಕೆಲವು ಜಿಲ್ಲಾ ಕೇಂದ್ರಗಳಲ್ಲಿ ಸಹ ಇಲ್ಲ. ನಮ್ಮ ಚಿಕ್ಕಮಗಳೂರಿನಲ್ಲಿ ಹೋದವರ್ಷ ಕ್ರೀಡಾಂಗಣದ ಕೆಲಸ ಪ್ರಾರಂಭವಾಯಿತು. ಆದರೆ ಅದರ ಕೆಲಸ ಈಗ ಅರ್ಧಕ್ಕೆ ನಿಂತಿದೆ. ಇದರ ಕೆಲಸ ಜಾಗ್ರತೆ ಮುಗಿಯಬೇಕು. ನಮ್ಮ ರಾಜ್ಯದಲ್ಲಿರುವ ಎಲ್ಲ ತಾಲ್ಲೂಕ್ ಕೇಂದ್ರಗಳಲ್ಲಿ ಕ್ರೀಡಾಂಗಣಗಳು ಪ್ರಾರಂಭವಾಗಬೇಕು. ಇದಕ್ಕೆ ಆಗುವಂತಹ ಖರ್ಚಿನಲ್ಲಿ ಶೇಕಡಾ ೭೫ ಅಥವಾ ೮೦ ರಷ್ಟು ಭಾಗದ ಹಣವನ್ನು ಕೇಂದ್ರ ಸರ್ಕಾರ ಕೊಡುತ್ತದೆ. ಇದರ ಜೊತೆಗೆ ಸಾರ್ವಜನಿಕರಿಂದ ವಂತಿಗೆ ಹಣ ವಸೂಲಿ ಮಾಡಿ ಈ ಕೆಲಸವನ್ನು ಕೈಕೊಳ್ಳಬಹುದಾಗಿದೆ. ಈ ಯುವಜನ ಇಲಾಖೆ ಬಗ್ಗೆ ಮತ್ತು ಗಣಿಗಳ ಬಗ್ಗೆ ಮಾತನಾಡಲು ನನಗೆ ಅವಕಾಶವಿದೆ ಎಂಬುದು ಈ ದಿನ ನನಗೆ ತಿಳಿಯಿತು. ನನಗೆ ಈ ವಿಚಾರ ಮೊದಲೇ ಗೊತ್ತಿದ್ದರೆ ಈ ಇಲಾಖೆಗಳ ಬಗ್ಗೆ ಚೆನ್ನಾಗಿ ತಿಳಿದುಕೊಂಡು, ಉತ್ತಮ ಕೆಲಸಗಳು ಯಾವುವು ಕೆಟ್ಟ ಕೆಲಸಗಳು ಯಾವುವು ಎಂದು ಹೇಳುವುದಕ್ಕೆ ನನಗೆ ಸಾಧ್ಯವಾಗುತ್ತಿತ್ತು. ಒಟ್ಟಿನಲ್ಲಿ ಹೇಳಬೇಕೆಂದರೆ, ಈ ಇಲಾಖೆಗಳು ಉತ್ತಮ ರೀತಿಯಿಂದ ಕೆಲಸ ಮಾಡುತ್ತಿವೆ. ಆದರೆ ಸಾಲದು, ಇನ್ನೂ ಹೆಚ್ಚು ಹೆಚ್ಚು ಕೆಲಸಗಳನ್ನು ಮಾಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ನಂಜಯ್ಯನಮಠ್.—ಸದಸ್ಯರು ಹಾಜರಿಲ್ಲ,

ಶ್ರೀ ಮದನಗೋಪಾಲನಾಯಕ್.—ಸದಸ್ಯರು ಹಾಜರಿಲ್ಲ,

ಶ್ರೀ ಶಿವಣ್ಣ.—ಸದಸ್ಯರು ಹಾಜರಿಲ್ಲ,

ಶ್ರೀ ಆರ್. ಎನ್. ನಾಯಕ್.—ಸದಸ್ಯರು ಹಾಜರಿಲ್ಲ,

ಶ್ರೀ ಬಿ. ಸ್ವಾಮಿರಾವ್.—ಸದಸ್ಯರು ಹಾಜರಿಲ್ಲ,

ಶ್ರೀ ಕೆ. ಜೆ. ಜಾರ್ಜ್.—ಸದಸ್ಯರು ಹಾಜರಿಲ್ಲ,

ಶ್ರೀ ಕೆ. ರಾಮನಾಥರೈ.—ಸದಸ್ಯರು ಹಾಜರಿಲ್ಲ.

† ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಂಡಿಸಿರುವಂತಹ ಗಣಿಗಳು ಮತ್ತು ಭೂ ವಿಜ್ಞಾನ, ಯುವಜನ ಸೇವೆ ಬೇಡಿಕೆಗಳಿಗೆ ಈ ಸಭೆ ಅನುಮತಿ ಕೊಡಬೇಕೆಂದು ಏನು ಕೇಳಿದ್ದಾರೆ, ಅದನ್ನು ವಿರೋಧಿಸಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮೊದಲು, ಚುನಾವಣಾ ಸಂದರ್ಭದಲ್ಲಿ ಯುವಕರಿಗೆ ಕೊಟ್ಟಂತಹ ಭರವಸೆಯನ್ನು ಪ್ರಾಮಾಣಿಕ ರೀತಿಯಿಂದ ಜಾರಿಗೆ ತರುತ್ತಾರೆ, ಜವಾಬ್ದಾರಿಯಿಂದ ಅದನ್ನು ನೆರವೇರಿಸುತ್ತಾರೆಂದು ನಮ್ಮ ಯುವಕರು ತಿಳಿದುಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಇವರಿಗೆ ಬೆಂಬಲ ಕೊಟ್ಟರು. ನಮ್ಮ ಯುವಕರು ಇವರ ಮೇಲೆ ಬಹಳ ಆಸೆ ಆಕಾಂಕ್ಷೆಗಳನಿಟ್ಟುಕೊಂಡಿದ್ದರು, ನಮ್ಮ ಯುವಕರ ಒಂದು ಬೆಂಬಲದಿಂದಲೇ ಇವರು ಅಧಿಕಾರಕ್ಕೆ ಬರಲು ಸಾಧ್ಯವಾಯಿತು ಎಂದು ಹೇಳಿದರೆ ತಪ್ಪಾಗಲಾರದು ? ಇವತ್ತು ಒಬ್ಬ ಗ್ರಾಮೀಣ ಪ್ರದೇಶದ ಯುವಕನೂ ಕೂಡ ಈ ಒಂದು ನಿರೀಕ್ಷೆಯನ್ನು ಇಟ್ಟುಕೊಂಡಿರುವುದರಿಂದ ತಮಗೆ ಅಧಿಕಾರಕ್ಕೆ ಬರಲು ಅವಕಾಶವನ್ನು ಕಲ್ಪಿಸಿಕೊಡಲಿಕ್ಕೆ ಸಾಧ್ಯವಾಯಿತು. ಕಳೆದ ೫ ವರ್ಷಗಳಿಂದ ಕೂಡ ನಿರಾಶಾದಾಯಕವಾದಂಥ ಒಂದು ವಾತಾವರಣವನ್ನು ಕಡೆಯ ಹಂತದಲ್ಲಿ ಇದ್ದಂಥ, ಗ್ರಾಮೀಣ ಪ್ರದೇಶದಲ್ಲಿದ್ದಂಥ ಯುವಕರಲ್ಲೂ ಕೂಡ ಮೂಡಿಸಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಯುವಕರು ಎಂದು ಹೇಳಿದರೆ ಬಿಸಿ ರಕ್ತದವರು. ಅವರು ಯಾವುದೇ ಕೆಲಸಕಾರ್ಯವನ್ನು ಮಾಡಿದರೆ ಸ್ವಲ್ಪ ವೇಗವಾಗಿ ಮಾಡುತ್ತಾರೆ. ವಿದ್ಯಾರ್ಥಿಗಳು ಸ್ವಲ್ಪ ಜಾಸ್ತಿ ಓದುತ್ತಾರೆ. ಕ್ರೀಡೆಯಲ್ಲಿ ಸ್ವಲ್ಪ ವೇಗವಾಗಿ ಓಡಾಡುತ್ತಾರೆ. ಅದೇ ರೀತಿ ಗಲಾಟೆಯಲ್ಲಿ ಸ್ವಲ್ಪ ಜಾಸ್ತಿ ಗಲಾಟೆ ಮಾಡುತ್ತಾರೆ ಇದು ಪ್ರಾಯದ ಒಂದು ಸಮಯ ಇರಬಹುದು. ನಾನು ಮೊದಲೇ ಹೇಳಿದ ರೀತಿಯಲ್ಲಿ ಅವರು ಬಿಸಿರಕ್ತದ ಯುವಕರು. ಈ ಯುವಕರಿಗೆ ಹೊಂದಿಕೊಂಡು ೧೯೮೫ನೇ ಇಸವಿಯಲ್ಲಿ ಈ ಇಲಾಖೆ ಸ್ಥಾಪನೆಯಾಗಿದೆ, ಈ ಇಲಾಖೆ ಮುಖಾಂತರ ಯುವಕರಿಗೆ ಪ್ರೋತ್ಸಾಹ ಕೊಡುವಂಥ, ಯುವಕರ ಪ್ರತಿಭೆಯನ್ನು ಎತ್ತಿ ತೋರಿಸುವಂಥ, ಯುವಕರಲ್ಲಿ ನಾಯಕತ್ವವನ್ನು ಬೆಳೆಸುವಂಥ, ಇನ್ನೂ ಹೆಚ್ಚಿನ ರೀತಿಯಲ್ಲಿ ಯುವಕರು ತಮ್ಮ ಜವಾಬ್ದಾರಿಯನ್ನು ಅರ್ಥಮಾಡಿಕೊಂಡು ಅವರು ಮುಂದೆ ಬರುವ ರೀತಿಯಲ್ಲಿ ಅವಕಾಶವನ್ನು ಕಲ್ಪಿಸಿಕೊಡುವಂಥ ರೀತಿಯಲ್ಲಿ ಮಾಡತಕ್ಕಂಥ ಕಾರ್ಯವನ್ನು ತಮ್ಮ ಇಲಾಖೆ ಇಟ್ಟುಕೊಂಡಿದೆ. ಮಾನ್ಯ ಅಧ್ಯಕ್ಷರೆ, ಈ ಒಂದು ಉದ್ದೇಶ ಜವಾಬ್ದಾರಿ, ಕರ್ತವ್ಯದಿಂದ ಎಷ್ಟು ಮುಂದೆ ಬಂದಿದೆ ಎಂದು ಅವಲೋಕಿಸಿದರೆ, ಹಿಂದೆ ಇದ್ದಂಥ ಒಂದು ಯುವಕ ಮಂಡಲ ಇರಬಹುದು ಅಥವಾ ಬೇರೆ ಬೇರೆ ವ್ಯವಸ್ಥೆಗಳು ಇರಬಹುದು, ಅವು ಇವತ್ತು ಸಂಪೂರ್ಣವಾಗಿ ನಿರ್ಜೀವವಾಗಿ ಯಾವುದೇ ರೀತಿಯ ಕಾರ್ಯಕ್ರಮ ಕೂಡ ಇಲ್ಲದೆ, ಬರೀ ತಾಲ್ಲೂಕು ಮಟ್ಟದ ಅಧಿಕಾರಿಗಳ ಹತ್ತಿರ ಯುವಕ ಮಂಡಲ ಇರುವಂಥ ವ್ಯವಸ್ಥೆಯನ್ನು ಕಾಣುತ್ತಿದ್ದೇವೆ. ಇವತ್ತು ಬೇರೆ ಬೇರೆ ರೀತಿಯ ಕಾರ್ಯಕ್ರಮಗಳನ್ನು ಈ ಯುವಕ ಮಂಡಲಗಳ ಮುಖಾಂತರ ನೆರವೇರಿಸತಕ್ಕಂಥ ಒಂದು ವ್ಯವಸ್ಥೆ ಇತ್ತು. ಇವತ್ತು ಹೊಸದಾಗಿ ಈ ಖಾತೆಗೆ ಮಾನ್ಯ ಜಿಗಜಿಣಗಿಯವರು ಸಚಿವರಾಗಿ ಬಂದಿದ್ದಾರೆ. ಹಿಂದೆ ಇದಕ್ಕೆ ಬೇರೆ ಬೇರೆ ಸಚಿವರು ಇದ್ದರು. ಆ ಸಂದರ್ಭದಲ್ಲಿ ಅವರು ಪ್ರತಿಯೊಂದು ಕಡೆಗೆ ಹೋದಂಥ ಸಂದರ್ಭದಲ್ಲಿ ಸಾರ್ವಜನಿಕ ಸಭೆಗಳಲ್ಲಿ ಭರವಸೆಗಳನ್ನು ಕೊಡುತ್ತಾ ಬಂದಿದ್ದಾರೆ. ಯುವಕರಿಗೆ ಕ್ರೀಡೆಗಳ ಮಟ್ಟಿಗೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತೇವೆ ಎಂದು ಭರವಸೆಗಳನ್ನು ಕೊಟ್ಟಿರುವುದನ್ನು ಪತ್ರಿಕೆಗಳಲ್ಲಿ ಕಂಡಿದ್ದೇವೆ. ಆದರೆ ಯುವಜನ ಸೇವಾ ಇಲಾಖೆಗೆ ಇಟ್ಟಂಥ ಮೊತ್ತ ಏನಿದೆ, ಇದರ ಹೆಚ್ಚಿನ ಅಂಶ ರಾಜ್ಯಾದ್ಯಂತ ಇರುವ ೩೩ ಸಾವಿರ ಯುವಕ ಮಂಡಲಗಳಿಗೆ. ವಾಲಿಬಾಲ್ ವಾಲಿಬಾಲ್ ನೆಟ್ಟೂ ಸಹ ಒದಗಿಸಿಕೊಡಲಿಕ್ಕೆ ಈ ದುಡ್ಡಿನಿಂದ ಸಾಧ್ಯವಾಗಿಲ್ಲ. ಇದು ಇವತ್ತು ಯುವಕರಿಗೆ ಕೊಟ್ಟಂಥ ಪ್ರೋತ್ಸಾಹ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇನ್ನೂ ಕೂಡ ಯುವಕರನ್ನು ನಾವು ಈ ಯುವಕ ಸಂಘಗಳ ಮುಖಾಂತರ ಅಥವಾ ಬೇರೆ ಬೇರೆ ಸಂಘಟನೆಗಳ ಮುಖಾಂತರ ಇವತ್ತು ಸಂಘಟನೆ ಮಾಡಿ ಆ ಸಂಘಟನೆ ಮುಖಾಂತರ ಅವರಿಗೆ ತಮ್ಮ ಇಲಾಖೆಗಳ ಮುಖಾಂತರ ಇರುವ ಸೌಲಭ್ಯವನ್ನು ಕೊಡುವುದರ ಜೊತೆಗೆ ಇನ್ನೂ ಕೂಡ ಸಾರ್ವಜನಿಕ ಸಮಾಜದಲ್ಲಿ ಈ ಒಂದು ಸಂಘಗಳ ಮುಖಾಂತರ ಅವರು ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗುವ ರೀತಿಯಲ್ಲಿ ತಾವು ಅಳವಡಿಸಿಕೊಂಡು ಹೋಗುವಂಥ ದೊಡ್ಡ ಜವಾಬ್ದಾರಿ ಈ ಇಲಾಖೆಗೆ ಇದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಹೆಚ್ಚಾಗಿ ಕ್ರೀಡಾಮಟ್ಟಿಗೆ, ಬೇರೆ ಬೇರೆ ಚಟುವಟಿಕೆಗಳ ಮಟ್ಟಿಗೆ ಪ್ರತಿಷ್ಠೆಯನ್ನು ಸ್ಥಾಪನೆ ಮಾಡಿದಂಥ ಜಿಲ್ಲೆ. ಇವತ್ತು ರಾಷ್ಟ್ರಮಟ್ಟದಲ್ಲಿ, ಅದೇರೀತಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಮುಂದೆ

ಬಂದಂಥ ಹಲವಾರು ಕ್ರೀಡಾಪಟುಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದಾರೆ. ಈ ರೀತಿಯಾದ ಪ್ರತಿಭೆ ಅವರಲ್ಲಿದ್ದರೂ ಕೂಡ ಯಾವುದೇ ರೀತಿಯ ಪ್ರೋತ್ಸಾಹ ಅವರಿಗೆ ಸಿಗುತ್ತಾ ಇಲ್ಲ. ಇವತ್ತು ಸಂಪೂರ್ಣವಾಗಿ ಇಲಾಖಾ ಮಟ್ಟದಲ್ಲಿ ಅಥವಾ ಬೇರೆ ಬೇರೆ ದೃಷ್ಟಿಯಿಂದ ಸರ್ಕಾರದಿಂದ ಯಾವುದೇ ರೀತಿಯ ನೆರವು ಅವರಿಗೆ ಸಿಗುತ್ತಾ ಇಲ್ಲ. ಇವತ್ತು ಯುವಕರು ತಮ್ಮಲ್ಲಿರುವಂಥ ಪ್ರತಿಭೆಯನ್ನು ತೋರಿಸುವಂಥ ಒಂದು ಅವಕಾಶ ಸಿಗುತ್ತಾ ಇಲ್ಲ ಎನ್ನುವಂಥ ದೂರುಗಳು ಬರುತ್ತಿವೆ.

೨-೦೦ ಪಿ, ಎಂ.

ನಾನಾದರೂ ಉದಾಹರಣೆಗೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಅಂದರೆ ಪುತ್ತೂರು ತಾಲ್ಲೂಕಿನಲ್ಲಿ ಒಂದು ಗ್ರಾಮಾಂತರ ಪ್ರದೇಶವಿದೆ. ಅಲ್ಲಿ ರಾಜ್ಯಮಟ್ಟದ ಒಂದು ಕ್ರೀಡೆಯನ್ನು ನಡೆಸಬೇಕೆಂಬ ಒಂದು ಕಾರ್ಯಕ್ರಮವನ್ನು ಅಳವಡಿಸಿಕೊಂಡು ಬಂದಿದ್ದೇವೆ. ಅಲ್ಲಿಗೆ ಸ್ಟೇಟ್ ಸ್ಪೋರ್ಟ್ಸ್ ಕೌನ್ಸಿಲ್‌ನ ಅಧ್ಯಕ್ಷರಾದಂಥ ಶ್ರೀ ರಾಘವನ್‌ರವರು ಬಂದಿದ್ದರು, ಆಗ ಅವರು ಏನೊಂದು ಭರವಸೆಯನ್ನು ಕೊಟ್ಟರು ಎಂದರೆ ನಾನು ಈ ಉದ್ದೇಶಕ್ಕಾಗಿ ೧೦ ಸಾವಿರ ರೂಪಾಯಿಗಳನ್ನು ಸರ್ಕಾರದಿಂದ ಬಿಡುಗಡೆ ಮಾಡಿಸುತ್ತೇನೆಂದು ಹೇಳಿದರು. ಆದರೆ ಇದುವರೆಗೂ ಆ ೧೦ ಸಾವಿರ ರೂಪಾಯಿ ಬಿಡುಗಡೆಯಾಗಿ ನಮಗೆ ಮುಟ್ಟಲಿಲ್ಲ. ಅಂದಮೇಲೆ ಈ ರೀತಿಯ ಪೊಳ್ಳು ಭರವಸೆಗಳನ್ನು ಸಾರ್ವಜನಿಕ ಸಮಾರಂಭವೊಂದರಲ್ಲಿ ಭಾಗವಹಿಸಿದಾಗ ಏತಕ್ಕೆ ಕೊಡಬೇಕು ? ಇದು ಯಾವ ರೀತಿಯ ಒಂದು ಜವಾಬ್ದಾರಿ ಆಶ್ವಾಸನೆ ಎಂಬುದನ್ನು ತಾವು ಹೇಳಬೇಕೆಂದು ನಾನು ಕೇಳಬಯಸುತ್ತೇನೆ.

ಇದೇ ರೀತಿ ಹೇಳುವುದಾದರೆ ಯುವಕರ ವಯಸ್ಸಿಗೆ ತಕ್ಕಂತೆ ಬೇರೆ ಬೇರೆ ವ್ಯವಸ್ಥೆಗೆ ಹೊಂದಿಕೊಂಡು ಅಂದರೆ ಅದು ಎನ್.ಸಿ.ಸಿ. ಇರಬಹುದು, ನೆಹರೂ ಯುವಕ ಕೇಂದ್ರದ ಮುಖಾಂತರ ಪಡೆಯುವ ಅವಕಾಶವಿರಬಹುದು, ಕೇಂದ್ರಸರ್ಕಾರದ ವತಿಯಿಂದ ಸಿಕ್ಕಬಹುದಾದ ಪ್ರೋತ್ಸಾಹ ಇರಬಹುದು' ಅದನ್ನು ಅಳವಡಿಸಿಕೊಂಡು ಮುಂದಕ್ಕೆ ಹೋಗಬೇಕಾದ ಪರಿಸ್ಥಿತಿ ನಮ್ಮ ಮುಂದಿದೆ. ಈ ರೀತಿಯ ಕಾರ್ಯಕ್ರಮಗಳನ್ನು ಕೇವಲ ಬೆಂಗಳೂರಿಗೇ ಮಾತ್ರ ಸೀಮಿತ ಮಾಡದೆ, ಕೇವಲ ಜಿಲ್ಲಾ ಮಟ್ಟಕ್ಕೇ ಸೀಮಿತ ಮಾಡದೆ, ಅಥವಾ ತಾಲ್ಲೂಕು ಮಟ್ಟಕ್ಕೇ ಸೀಮಿತ ಮಾಡದೆ ಗ್ರಾಮೀಣ ಮಟ್ಟಕ್ಕೂ ಮುಟ್ಟುವ ವ್ಯವಸ್ಥೆಯನ್ನು ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡಿದರೆ ಮಾತ್ರ ಗ್ರಾಮೀಣ ಯುವಕರಿಗೆ ಅನುಕೂಲವಾಗುತ್ತದೆ ಹಾಗೂ ಪ್ರೋತ್ಸಾಹ ಸಿಕ್ಕುತ್ತದೆಂದು ನಾನು ಹೇಳಬಯಸುತ್ತೇನೆ.

ಈಗ ತಾವು ಜಿಲ್ಲಾ ಪರಿಷತ್ತಿನ ವ್ಯವಸ್ಥೆಯನ್ನು ಮಾಡಿದ್ದೀರಿ, ಅದೇ ರೀತಿ ಮಂಡಲ ಪಂಚಾಯತ್‌ನ ವ್ಯವಸ್ಥೆಯನ್ನೂ ಮಾಡಿದ್ದೀರಿ. ಒಂದೊಂದು ಮಂಡಲ ಪಂಚಾಯ್ತಿಗೂ ೩-೪ ಗ್ರಾಮಗಳನ್ನು ಸೇರಿಸಿದ್ದೀರಿ. ಆದರೆ ಒಂದೊಂದು ಮಂಡಲಕ್ಕೂ ಒಂದೊಂದು ರೀತಿಯ ಕಾರ್ಯಕ್ರಮಗಳನ್ನು ಕೊಡುವುದಕ್ಕೆ ತಮ್ಮಿಂದ ಇದುವರೆಗೂ ಆಗಿಲ್ಲ. ಹಳ್ಳಿಯ ಯುವಕರು ತಮ್ಮಲ್ಲಿರತಕ್ಕ ಪ್ರತಿಭೆಯನ್ನು ಎತ್ತಿ ತೋರಿಸುವುದಕ್ಕೆ ಉಪಯುಕ್ತವಾದ ಬೇರೆ ಬೇರೆ ರೀತಿಯ ಕಾರ್ಯಕ್ರಮಗಳನ್ನು ತಾವು ಏನೇನು ಹಮ್ಮಿಕೊಂಡಿದ್ದೀರೆಂದು ನಾನು ಕೇಳಬಯಸುತ್ತೇನೆ. ನನಗೆ ತಿಳಿದಮಟ್ಟಿಗೆ ನಿಮ್ಮಲ್ಲಿ ಯಾವುದೇ ನಿರ್ದಿಷ್ಟವಾದ ಯೋಜನೆಯೂ ಇಲ್ಲ. ಹಿಂದೆ ಒಂದು ಸಾರಿ ಈ ಕ್ರೀಡೆಯ ಬಗ್ಗೆ ಒಂದು ಲೇಖನವನ್ನು ನಾನು ಪತ್ರಿಕೆಯಲ್ಲಿ ನೋಡಿದ್ದೆ. ಕ್ರೀಡಾ ಸಮಾರಂಭವೊಂದರಲ್ಲಿ ಭಾಗವಹಿಸಿದ್ದ ಮಾನ್ಯ ಬಿ. ಎಲ್. ಶಂಕರ್‌ರವರು ಇಲ್ಲಿ ಒಂದು ಸ್ಟೇಡಿಯಂನ್ನು ನಿರ್ಮಾಣ ಮಾಡಲು ಸಹಾಯ ಮಾಡುತ್ತೇವೆಂದು ಹೇಳಿದರು. ಆದರೆ ಇವತ್ತಿನವರೆಗೂ ಅಲ್ಲಿ ಸ್ಟೇಡಿಯಂ ಬರಲಿಲ್ಲ. ಕೇವಲ ಬೋರ್ಡ್ ಮಾತ್ರ ಇದೆ. ಇದೇರೀತಿ ಸ್ಟೇಡಿಯಂ ಇರಬಹುದು, ಕೇಂದ್ರ ಸರ್ಕಾರದಿಂದ ಸಿಕ್ಕಬಹುದಾದ ಯೋಜನೆಯ ಅಡಿಯಲ್ಲಿ ಇನ್ನೊಂದು ಕಾರ್ಯಕ್ರಮ ಇರಬಹುದು, ಅಥವಾ ರಾಜ್ಯಸರ್ಕಾರದ ಮುಖಾಂತರ ಸಿಕ್ಕತಕ್ಕ ವ್ಯವಸ್ಥೆ ಇರಬಹುದು ಅದನ್ನು ಉಪಯೋಗ ಮಾಡಿಕೊಳ್ಳಲು ಸರ್ಕಾರ ಗಮನಹರಿಸಬೇಕು. ರಾಜ್ಯ ಸರ್ಕಾರದ ವತಿಯಿಂದ ಅಂತಹ ಯೋಜನೆಗಳನ್ನು ನಾವು ಇವತ್ತಿನವರೆಗೂ ಕಾಣುತ್ತಿಲ್ಲ.

ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಗ್ರಾಮೀಣ ಪ್ರದೇಶದಲ್ಲಿ ಕಂಬಳ ಎಂಬ ಕ್ರೀಡೆಗೆ ಜನರಿಂದ ಬಹಳ ಹೆಚ್ಚಿನ ಪ್ರೋತ್ಸಾಹ ಇದೆ. ಹಳ್ಳಿಯ ಜನರಲ್ಲಿ ಉತ್ಸಾಹವನ್ನು ಮೂಡಿಸುವಂಥ ಇಂಥ ಕ್ರೀಡೆಗಳನ್ನು ಹೆಚ್ಚು ಜನಪ್ರಿಯಗೊಳಿಸುವುದಕ್ಕೆ ತಾವು ಏನು ಯೋಜನೆಗಳನ್ನು ಹಮ್ಮಿಕೊಂಡಿದ್ದೀರೆಂದು ನಾನು ಕೇಳಬಯಸುತ್ತೇನೆ. ಕಳೆದಸಾರಿ ನಾನು ಪತ್ರಿಕೆಯಲ್ಲಿ ಒಂದು ಲೇಖನವನ್ನು ಓದಿದ್ದೆ.

ಅಂತರರಾಷ್ಟ್ರೀಯ ಕ್ರೀಡಾಪಟುವಾದ ಕುಮಾರಿ ವಂದನಾರವರು ಚಿನ್ನದ ಪದಕವನ್ನು ಗಳಿಸಿದ್ದಕಾಗಿ ಅವರನ್ನು ಸ್ವಾಗತಿಸುವುದಕ್ಕೆ ನಮ್ಮ ರಾಜ್ಯದ ಪ್ರತಿನಿಧಿಗಳು ಯಾರೂ ಕೂಡ ಇರಲಿಲ್ಲ. ಕು. ವಂದನಾ ರವರು ನಮ್ಮ ಕರ್ನಾಟಕದವರು ಎಂಬುದನ್ನು ನಮ್ಮ ಸರ್ಕಾರದವರು ಸಂಪೂರ್ಣವಾಗಿ ಮರೆತಿದ್ದಾರೆಂಬ ವಿಚಾರ ಪತ್ರಿಕೆಯಲ್ಲಿ ಬಂದಿದ್ದುದನ್ನು ನಾನು ನೋಡಿದ್ದೇನೆ.

ತಮ್ಮ ಇಲಾಖೆಯಲ್ಲಿ ಸಿಕ್ಕತಕ್ಕಂಥ ಪ್ರೋತ್ಸಾಹ ಈರೀತಿ ಆಗಕೂಡದು. ಎಲ್ಲಿ ಪ್ರತಿಭೆ ಇದೆ ಅಲ್ಲಿ ಅದನ್ನು ಎತ್ತಿ ತೋರಿಸುವಂತಾಗಬೇಕು. ಕಳೆದ ವರ್ಷ ನಮ್ಮಲ್ಲಿ ಒಬ್ಬ ಸಣ್ಣ ಹುಡುಗಿ ಭೂದೂರು ತಾಲ್ಲೂಕ್ ಹೈಸ್ಕೂಲಿನಲ್ಲಿ ಓದುತ್ತಿರುವ ಹುಡುಗಿ ಕ್ರೀಡೆಯಲ್ಲಿ ಗೆದ್ದ ಕಾರಣದಿಂದಾಗಿ ಹೈಸ್ಕೂಲ್ ಮಟ್ಟಕ್ಕೆ ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ನಾನೂರು ಮೀಟರ್ ಓಟ ಸ್ಪರ್ಧೆಯಲ್ಲಿ ಭಾಗವಹಿಸುವಂಥ ಒಂದು ಪ್ರಥಮ ಅವಕಾಶ ದೊರೆಯಿತು. ಈರೀತಿ ಎಷ್ಟೋ ಜನರು ತಮ್ಮ ಪ್ರತಿಭೆಯನ್ನು ತೋರಿಸತಕ್ಕಂಥವರು ಗ್ರಾಮಾಂತರ ಪ್ರದೇಶಗಳಲ್ಲಿ ಇರುತ್ತಾರೆ. ಅವರಿಗೆ ಸರಿಯಾದ ರೀತಿಯಲ್ಲಿ ತಮ್ಮ ಪ್ರತಿಭೆಯನ್ನು ಎತ್ತಿ ತೋರಿಸುವಂಥ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಇದೇ ರೀತಿಯಲ್ಲಿ ಹೆಚ್ಚಿನ ಪ್ರೋತ್ಸಾಹ ಯುವಕರಿಗೂ ದೊರೆಯಬೇಕೆಂದು ಹೇಳುತ್ತಾ ಹೆಚ್ಚಿನ ಸಮಯವನ್ನು ಇದಕ್ಕೆ ಬಳಸಿಕೊಂಡು ಮಾತನಾಡಲಿಕ್ಕೆ ಹೋಗದೆ. ಗಣಿಗೆ ಸಂಬಂಧಪಟ್ಟಹಾಗೆ ನಮ್ಮ ಜಿಲ್ಲೆಯನ್ನು ಹೋಲಿಸಿ ಮಾತನಾಡಿದರೆ, ಈವತ್ತು ಚಿನ್ನದ ಗಣಿಯಾಗಲಿ ಬೇರೆ ಬೇರೆ ಯಾವುದೇ ಗಣಿಯಾಗಲಿ ಕಾಣುವುದಿಲ್ಲ. ಆದರೆ ನಮ್ಮಲ್ಲಿ ಹಿಂದೆ ಉಪಯೋಗಿಸುತ್ತಿದ್ದಂಥ ಚಿನ್ನದ ಭರಣಿಗಳು ಭೂಮಿಯ ಒಳಗೆ ಸಿಕ್ಕತಕ್ಕಂಥ ಅವಕಾಶವಿದೆ. ನಮ್ಮ ತಾಲ್ಲೂಕು ನಿಡುಕೊಳ್ಳಿ ಎಂಬ ಗ್ರಾಮದಲ್ಲಿ ಇತ್ತೀಚೆಗೆ ಮಣ್ಣನ್ನು ತೆಗೆಯುತ್ತಿದ್ದಂಥ ಸಂದರ್ಭದಲ್ಲಿ ಚಿನ್ನದ ಬರಣಿಯೊಂದು ದೊರಕಿತು. ಸಿಕ್ಕಿದ ಭರಣಿಯನ್ನು ಅವರವರೇ ಅಣ್ಣತಮ್ಮಂದಿರು ಹಂಚಿಕೊಂಡರು. ಅವರು ಹಂಚಿಕೊಳ್ಳತಕ್ಕಂಥ ಸಂದರ್ಭದಲ್ಲಿ ತಕರಾರು ಬಂದು ಡಿ.ಎಸ್.ಪಿ.ಗೆ ಕಂಪ್ಲೈಂಡ್ ಕೊಟ್ಟರು. ಕಂಪ್ಲೇಂಟ್ ಕೊಟ್ಟದ್ದು ಯಾವರೀತಿಯೂ ತೀರ್ಮಾನವಾಗದೆ ಅದು ಹಾಗೆಯೇ ನಿಂತಿದೆ. ಡಿ.ಎಸ್.ಪಿ.ಯಲ್ಲಿ ನಾನೂ ಕೂಡ ವಿಚಾರ ಮಾಡಿದ್ದೇನೆ. ನೀವು ಸಚಿವರಾಗಿತಕ್ಕಂಥ ಸಂದರ್ಭದಲ್ಲಿ ಯಾವರೀತಿಯಾದ ಬೆಲೆಬಾಳತಕ್ಕಂಥ ವಸ್ತುಗಳು ಸಿಕ್ಕಿದರೂ ಅವರವರೇ ಹಂಚಿಕೊಳ್ಳತಕ್ಕಂಥ ವ್ಯವಸ್ಥೆಯಾಗಲು ಬಿಡದೆ ಅದರ ಬಗ್ಗೆ ಹೆಚ್ಚು ಮುಂತವರ್ಜಿಯನ್ನು ವಹಿಸಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ).—

ಮಾನ್ಯ ಅಧ್ಯಕ್ಷರೇ, ಯುವಜನ ಸೇವಾ, ಕ್ರೀಡೆ ಮತ್ತು ಗಣಿ ಉದ್ಯಮಗಳ ಬೇಡಿಕೆಯನ್ನು ನಾನು ಸ್ವಾಗತಿಸುತ್ತಾ ನಮ್ಮ ಸರ್ಕಾರ ಯುವಜನ ಸೇವೆಯ ಬಗ್ಗೆ ಬಹಳಷ್ಟು ಗಮನವನ್ನು ನೀಡಿದೆ. ಈ ದಿಸೆಯಲ್ಲಿ ಸಾಕಷ್ಟು ಯೋಜನೆಗಳನ್ನು ಹಮ್ಮಿಕೊಂಡಿದೆ, ಮತ್ತು ಅದನ್ನು ವಿಸ್ತರಿಸಿದೆ. ಆದರೂ ಈ ಒಂದು ರಾಜ್ಯದ ಯುವಜನರಿಗೆ ಅವರ ಒಂದು ಆಸಕ್ತಿಗೆ ಸರಿಯಾಗಿ ಸಾಕಷ್ಟು ಪ್ರೋತ್ಸಾಹ ಸಿಕ್ಕುತ್ತಿಲ್ಲ ಎನ್ನುವ ವಿಷಯವನ್ನು ತಮ್ಮ ಮೂಲಕ ಹೇಳಬಯಸುತ್ತೇನೆ. ಈವತ್ತಿನದಿವಸ ಯುವಕರ ಸಂಘಟನೆ, ಯುವಕರಲ್ಲಿರತಕ್ಕಂಥ ಪ್ರತಿಭೆಯನ್ನು ಗುರುತಿಸಿ ಅವರಲ್ಲಿ ಅನೇಕ ಕ್ರೀಡೆಗಳಲ್ಲಿ ಪ್ರೋತ್ಸಾಹವನ್ನು ಕೊಟ್ಟು ಅವರಲ್ಲಿ ಕ್ರೀಡಾ ಉತ್ಸಾಹವನ್ನು ಬೆಳೆಸುವುದು ಒಂದು ಮಹತ್ವದ ಕಾರ್ಯ ಮತ್ತು ಆದ್ಯ ಕರ್ತವ್ಯವೂ ಆಗಿದೆ. ಪ್ರಾಥಮಿಕ ಹಂತದಿಂದ ಹಿಡಿದು ಯೂನಿವರ್ಸಿಟಿ, ವಿಶ್ವವಿದ್ಯಾನಿಲಯದ ಹಂತದವರೆಗೂ ನಾವು ಬಹಳ ಸುಸಜ್ಜಿತವಾಗಿ ಯುವಜನತೆ ಒಂದು ಕ್ರೀಡಾ ಮತ್ತು ಆಟಪಾಠಗಳಲ್ಲಿ ಬೆಳೆಯಲಿಕ್ಕೆ ಸಾಕಷ್ಟು ಅವಕಾಶಗಳನ್ನು ಮಾಡಿಕೊಡಬೇಕು. ಈ ದಿಸೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಪ್ರಾಥಮಿಕ ಶಾಲಾ ಮತ್ತು ಪ್ರೌಢಶಾಲೆ ಮಕ್ಕಳನ್ನು ಈ ಚಟುವಟಿಕೆಗಳಲ್ಲಿ ತೊಡಗಿಸಿ ಪ್ರತಿವರ್ಷ ನಡೆಯುತ್ತಿದೆ ಅದು ಇನ್ನೂ ಹೆಚ್ಚಿನ ಗುಣಮಟ್ಟದಲ್ಲಿ ನಡೆಯಬೇಕು. ಚಿಕ್ಕ ಯುವಕರಲ್ಲಿ ಇರತಕ್ಕಂಥ ಪ್ರತಿಭೆಯನ್ನು ಸರಿಯಾಗಿ ಗುರುತಿಸಬೇಕು. ಒಳ್ಳೆಯ ಪ್ರತಿಭಾ ಮಕ್ಕಳಿಗೆ ಸರಿಯಾದರೀತಿ ಸಹಾಯವನ್ನು ಕೊಟ್ಟು ಆ ಮಕ್ಕಳು ಕ್ರೀಡಾ ಚಟುವಟಿಕೆಗಳಲ್ಲಿ ಮುಂದಕ್ಕೆ ಬರಲು ತಾಲ್ಲೂಕುಮಟ್ಟದಿಂದ ಜಿಲ್ಲಾ ಮಟ್ಟದವರೆಗೂ ಆ ಕೆಲಸ ನಡೆಯಬೇಕು. ಹೈಸ್ಕೂಲುಮಟ್ಟದಲ್ಲಿ ಅನೇಕ ಕಡೆಗಳಲ್ಲಿ ಈ ಕಾರ್ಯಕ್ರಮಗಳು ಸುಸಜ್ಜಿತವಾಗಿ ನಡೆಯುತ್ತಿರುತ್ತವೆ. ಯಾವುದೇ ಹಳ್ಳಿಯಲ್ಲಿಯೂ ಕೂಡ ಈಗ ಪಿ. ಟಿ. ಟೀಚರ್ಸ್ ಹೈಸ್ಕೂಲುಗಳಲ್ಲಿ ಇರುತ್ತಾರೆ. ಅಲ್ಲಿ ಪ್ರತಿಭಾವಂತ ಮಕ್ಕಳನ್ನು ಗುರುತಿಸತಕ್ಕಂಥ ಕಾರ್ಯ ನಡೆಯುತ್ತಿದೆ. ಅದೇ ಪ್ರಕಾರವಾಗಿ ಪ್ರಾಥಮಿಕ ಹಂತ

ದಲ್ಲಿಯೂ ಈ ಒಂದು ಚಟುವಟಿಕೆಗೆ ಪ್ರಾಮುಖ್ಯತೆಯನ್ನು ಕೊಡಬೇಕು. ಪ್ರಾಥಮಿಕ ಹಂತದಲ್ಲಿ ಈ ಚಟುವಟಿಕೆಗಳಿಗೆ ಪ್ರೋತ್ಸಾಹವನ್ನು ಕೊಡಲು ಸ್ಥಳಾವಕಾಶವಿರುವುದಿಲ್ಲ. ಆಟದ ಬಯಲು ಸಿಗುವುದೇ ಬಹಳ ಕಷ್ಟವಾಗಿದೆ. ಆಟದ ಬಯಲು ಪ್ರತಿಯೊಂದು ಪ್ರಾಥಮಿಕ ಶಾಲೆಗೂ ಅವಶ್ಯಕವಾಗಿ ಇರಬೇಕು. ಕ್ರೀಡಾಂಗಣದ ಅವಶ್ಯಕತೆಯೂ ಬಹುಮಟ್ಟಿಗೆ ಇದೆ. ಪ್ರತಿಯೊಂದು ಪ್ರೌಢ ಶಾಲೆಗೂ ಕ್ರಿಡಾಂಗಣವನ್ನು ಗುರುತಿಸಿ ನಿರ್ಮಿಸಬೇಕು. ಕರ್ನಾಟಕದ ಅನೇಕ ಆಟಪಾಠಗಳು ಏನಿವೆ ಅವುಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಕ್ರಿಕೆಟ್, ಹಾಕಿ, ಟೆನಿಸ್ ಮುಂತಾದ ಆಟಗಳಿಗೆ ಜಿಲ್ಲಾ ಮಟದಲ್ಲಿ ಮತ್ತು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಸಾಕಷ್ಟು ಸಹಾಯ, ಸಹಕಾರ ಸಿಕ್ಕುತ್ತಿದೆ. ಆದರೆ ನಮ್ಮದೇ ಆಟಗಳಾದ ಕೊಕ್ಕೋ, ಕಬಡ್ಡಿ ಏನಿವೆ, ಅವುಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಆದರಿಂದ ಮಕ್ಕಳಲ್ಲಿರತಕ್ಕ ಪ್ರತಿಭೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಇವತ್ತಿನ ದಿವಸ ರಾಜ್ಯ ಸರ್ಕಾರ ಜಿಲ್ಲಾ ಮಟ್ಟದಿಂದ ವಿಭಾಗ ಮಟ್ಟದಲ್ಲಿ, ವಿಭಾಗ ಮಟ್ಟದಿಂದ ರಾಜ್ಯ ಮಟ್ಟದಲ್ಲಿ ಪ್ರತಿಭೆಯನ್ನು ತೋರಿಸಿದ ಅನೇಕ ಮಕ್ಕಳಿಗೆ ಪ್ರೋತ್ಸಾಹ ನೀಡುತ್ತಿದೆ. ಆದರೆ ಅದು ಸಾಲದು. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಉತ್ತಮ ಆಟಗಾರ ಮಕ್ಕಳನ್ನು ಆರಿಸಬೇಕು, ಮತ್ತು ಅವುಗಳಿಗೆ ಸುಸಜ್ಜಿತವಾಗಿ ಸ್ಪರ್ಧೆಯನ್ನು ಏರ್ಪಡಿಸಬೇಕು. ಸರ್ಕಾರದ ನಿಯಮದ ಪ್ರಕಾರ ಈ ಸ್ಪರ್ಧೆಗಳನ್ನು ಏರ್ಪಡಿಸುವಂಥ ವ್ಯವಸ್ಥೆ ಇದೆ. ಆದರೆ ಆ ವಿದ್ಯಾರ್ಥಿಗಳಿಗೆ ವಾರಕ್ಕೊಮ್ಮೆ ತಿಂಗಳಿಗೊಮ್ಮೆ ತರಬೇತಿ ಕೊಟ್ಟು ಪ್ರತಿ ವರ್ಷ ಪ್ರತಿಭೆಯನ್ನು ಗುರುತಿಸುವ ಕಾರ್ಯ ನಡೆಯಬೇಕಾಗಿದೆ. ಆದರೆ ಅದು ಸರಿಯಾಗಿ ನಡೆಯುತ್ತಿಲ್ಲ. ಆ ಒಂದು ಪ್ರೋತ್ಸಾಹ ಸಿಗುತ್ತಿಲ್ಲ. ಈಗ ಜಿಲ್ಲಾ ಮಟ್ಟದಲ್ಲಿ ಮತ್ತು ವಿಭಾಗ ಮಟ್ಟದಲ್ಲಿ ಆರಿಸಿದಂತಹ ಮಕ್ಕಳನ್ನು ರಾಜ್ಯ ಮಟ್ಟಕ್ಕೆ ಸಹ ಆಯ್ಕೆ ಮಾಡಿ ಕಳುಹಿಸುತ್ತಿದ್ದಾರೆ. ಅದರಲ್ಲಿ ಆಯ್ಕೆ ಆದವರನ್ನು ರಾಷ್ಟ್ರ ಮಟ್ಟಕ್ಕೆ ಕಳುಹಿಸುತ್ತಿದ್ದಾರೆ. ಅಲ್ಲಿ ಅನೇಕ ಪ್ರತಿಭಾವಂತ ಯುವಕರಿಗೆ ಯೋಗ್ಯ ಸ್ಥಾನ ಸಿಗುತ್ತಿಲ್ಲ. ಪ್ರತಿಭಾವಂತರಿಗೆ ಆದ್ಯತೆ ಕೊಟ್ಟು ರಾಷ್ಟ್ರ ಮಟ್ಟದಲ್ಲಿ ಆಯ್ಕೆ ಆಗುವುದಕ್ಕೆ ಅವಕಾಶ ಮಾಡಿಕೊಡಬೇಕು. ಅನೇಕ ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಧಾರವಾಡದಲ್ಲಿ ಆರ್. ಎಂ. ಶೆಟ್ಟಿ ಕ್ರೀಡಾಂಗಣವೆಂದು ದೊಡ್ಡ ಕ್ರೀಡಾಂಗಣವನ್ನು ಕಟ್ಟಿಸಿದ್ದಾರೆ. ಅದು ಜಿಲ್ಲಾ ಮಟ್ಟದ ಸ್ಥಳ. ಬೆಂಗಳೂರನ್ನು ಬಿಟ್ಟರೆ ಎರಡನೆಯ ಮಹಾ ಸುಶಿಕ್ಷಿತ ಜಿಲ್ಲೆ ಅದು. ಅಲ್ಲಿ ಎರಡು ವಿಶ್ವವಿದ್ಯಾನಿಲಯಗಳಿವೆ. ಅನೇಕ ಯುವಕರು ಇದ್ದಾರೆ. ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಡುವಂತಹ ಸಂಘಗಳು ಇವೆ. ಅವೆಲ್ಲ ಸಂಘಗಳು ಸೇರಿ ಪ್ರತಿ ಆಡಳಿತಾಧಿಕಾರಿಗಳಿಗೆ ಮತ್ತು ವರ್ಷ ಸ್ಪರ್ಧೆಯನ್ನು ಏರ್ಪಡಿಸಬೇಕು, ಅಂಥ ಒಂದು ಕಾರ್ಯಕ್ರಮ ನಡೆಯಬೇಕೆಂದು ಈ ಹಿಂದೆ ಜಿಲ್ಲಾ ಯುವಜನ ಸೇವಾಧಿಕಾರಿಗಳಿಗೆ ಹೇಳಿ ಮೀಟಿಂಗ್ ಕರೆಸಿದ್ದೆ. ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವಂತಹ ಎಲ್ಲಾ ಸಂಸ್ಥೆಗಳವರನ್ನು ಕರೆಸಿ ಅವರವರ ಆಸಕ್ತಿ ಪ್ರಕಾರ ಅವಕಾಶ ನೀಡಿ ಒಂದೊಂದು ಸಂಸ್ಥೆಯವರು ಆಸಕ್ತಿ ವಹಿಸಿ ಮುಂದೆ ಬರುವಂತೆ ಪ್ರೋತ್ಸಾಹಿಸಬೇಕೆಂಬ ಆಶಯವಿತ್ತು. ಅಂತೆಯೇ ಎಲ್ಲಾ ಸಂಘ ಸಂಸ್ಥೆಗಳವರನ್ನು ಕರೆಸಿದ್ದೆ. ಆದರೆ ಅವತ್ತಿನ ದಿವಸ ಅನಿವಾರ್ಯ ಕಾರಣಗಳಿಂದ ನಾನು ಉಪಸ್ಥಿತನಿರಲಿಲ್ಲ, ನಂತರ ಆ ಕಾರ್ಯಕ್ರಮ ಮುಂದುವರಿಯಲಿಲ್ಲ. ಇದರ ಮೂಲ ಉದ್ದೇಶ ಏನೆಂದರೆ ಯುವ ಸೇವಾ ಕ್ರೀಡಾ ಸಂಸ್ಥೆಗಳು ಏನು ಇವೆ ಅವುಗಳಿಗೆ ಒಂದೊಂದು ಆಟದಲ್ಲಿ ಉತ್ಸಾಹ ಇರುತ್ತದೆ. ಎಲ್ಲ ಕ್ರೀಡೆಗಳನ್ನು ಆಡುವುದು ಎಂದರೆ ಅವುಗಳ ಸ್ಪರ್ಧೆಯನ್ನು ಏರ್ಪಡಿಸುವುದು. ಹಾಕಿ ಎಂದರೆ ಅದರ ಸ್ಪರ್ಧೆಯನ್ನು ಏರ್ಪಡಿಸುವುದು, ವಾಲಿಬಾಲ್ ಫುಟ್‌ಬಾಲ್ ಅಂದರೆ ಅವುಗಳ ಸ್ಪರ್ಧೆಯನ್ನು ಏರ್ಪಡಿಸುವುದು. ಈ ಪ್ರಕಾರ ಮಾಡಿದಾಗ ಪ್ರತಿಯೊಬ್ಬರನ್ನು ಒಂದೊಂದು ಸ್ಪರ್ಧೆಗಳು ಆಕರ್ಷಿಸುತ್ತವೆ. ಒಂದೊಂದು ಸಂಸ್ಥೆಗಳಿಗೆ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಿ ಅಂದರೆ ಎಲ್ಲ ಸಂಸ್ಥೆಗಳನ್ನು ಕ್ರೀಡೆಯಲ್ಲಿ ಸೇರಿಸಿಕೊಂಡು ಆಟವಾಡುತ್ತಾರೆ. ಅಂತಹ ಸಂಸ್ಥೆಗಳಿಗೆ ಈ ಸರ್ಕಾರ ಪ್ರೋತ್ಸಾಹ ನೀಡುತ್ತದೆ. ಫುಟ್‌ಬಾಲ್, ಹಾಕಿ, ಟೆನ್ನಿಸ್ ಮುಂತಾದ ಆಟಗಳನ್ನು ಬಿಟ್ಟು ಲೋಕಲ್ ಆಟಪಾಠಗಳಾದ ಕೊಕ್ಕೊ, ಕಬ್ಬಡಿ, ಇತ್ಯಾದಿಗಳ ಸ್ಪರ್ಧೆಗಳನ್ನು ಏರ್ಪಡಿಸತಕ್ಕ ಸಂಘಸಂಸ್ಥೆಗಳು ಏನು ಇವೆ ಅವುಗಳಿಗೆ ಪ್ರೋತ್ಸಾಹ ನೀಡಬೇಕು. ಆದರೆ ಆ ದಿಸೆಯಲ್ಲಿ ಪ್ರೋತ್ಸಾಹ ದೊರೆಯುತ್ತಿಲ್ಲ. ಕೊಕ್ಕೊ ಕಬ್ಬಡಿಗಳಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಾಗಿ ಮಕ್ಕಳು ಆಟವಾಡಲು ಸಿಗುತ್ತಾರೆ. ಈಜು ಸ್ಪರ್ಧೆಯಲ್ಲಿ ನೋಡಿದರೆ ಮಹಾನಗರಸಭೆಯ ಈಜು ಕೊಳದಲ್ಲಿ ನೀರು ಇರುವುದಿಲ್ಲ. ಇಂಥ ಪರಿಸ್ಥಿತಿ ಇದೆ. ಈಜು ಸ್ಪರ್ಧೆಯಲ್ಲಿ ಸಾಕಷ್ಟು ಮಕ್ಕಳನ್ನು ತೊಡಗಿಸಬೇಕಾಗಿದೆ.

ಅನೇಕ ಸ್ಪೋರ್ಟ್ಸ್ ಇವೆ. ಅಲ್ಲಿ ಉತ್ತಮ ಮಕ್ಕಳಿರುತ್ತಾರೆ. ಆದರೆ ಅವರಿಗೆ ಹಾಕಿಕೊಳ್ಳುವುದಕ್ಕೆ ಬಟ್ಟೆ ಇರುವುದಿಲ್ಲ. ಅವರಿಗೆ ಪ್ರೋತ್ಸಾಹ ಕೊಟ್ಟು ಬಟ್ಟೆ ಕೊಟ್ಟು ಆಟದಲ್ಲಿ ತೊಡಗಿಸಬೇಕು. ಎನ್ ಸಿ.ಸಿ. ಮುಂತಾದ ಅನೇಕ ಕಾರ್ಯಕ್ರಮಗಳಲ್ಲಿ ಮಕ್ಕಳನ್ನು ತೊಡಗಿಸಬೇಕು. ಆಟಪಾಠದ ಜೊತೆಗೆ ಸಂಘಟನಾ ಚಟುವಟಿಕೆ ಮತ್ತು ಪ್ರತಿಭೆಯನ್ನು ಗುರುತಿಸುವ ಕಾರ್ಯ ನಡೆಯಬೇಕಾಗಿದೆ. ಅದೇ ಪ್ರಕಾರ ಮುಖ್ಯವಾಗಿ ಆದ್ಯತೆ ಕೊಟ್ಟು ಆಗಬೇಕಾದ್ದು ಅಂದರೆ ಪ್ರತಿ ಪ್ರಾಥಮಿಕ ಶಾಲಾ ಹಂತದಲ್ಲಿ ಕ್ರೀಡಾಂಗಣ ಹಾಗೂ ಪ್ರತಿ ತಾಲ್ಲೂಕು ಮಟ್ಟದಲ್ಲಿ ಕೂಡ ಕ್ರೀಡಾಂಗಣ ನಿರ್ಮಾಣ ಮಾಡಬೇಕು. ಪ್ರತಿ ಶಾಲೆಯಿಂದಲೂ ಪ್ರತಿ ವರ್ಷ ಮಕ್ಕಳು ಕಡ್ಡಾಯವಾಗಿ ಆಯ್ಕೆಯಾಗಿ ಬರಬೇಕು. ಕಿರಿಯ ವರ್ಗ ಮತ್ತು ಹಿರಿಯ ವರ್ಗದ ಮಕ್ಕಳು ಪ್ರತಿ ಶಾಲೆಗಳಲ್ಲೂ ಆಯ್ಕೆ ಆಗುವಂತೆ ಕಡ್ಡಾಯ ಮಾಡಬೇಕು. ಅಲ್ಲಿರುವಂಥ ಶಿಕ್ಷಕರು ಮತ್ತು ಪ್ರಾಧ್ಯಾಪಕರು ಆಸಕ್ತಿಯಿಂದ ಮಕ್ಕಳನ್ನು ಕರೆಸಿ ಕ್ರೀಡಾ ಸ್ಪರ್ಧೆಯಲ್ಲಿ ತೊಡಗಿಸುವಂಥ ವ್ಯವಸ್ಥೆ ಮಾಡಬೇಕು. ಆ ದಿಸೆಯಲ್ಲಿ ಕೆಲಸ ನಡೆಯಬೇಕು. ಗ್ರಾಮೀಣ ಮಟ್ಟದಲ್ಲಿ ಅನೇಕ ಕಡೆ ವಾಚನಾಲಯಗಳಿಲ್ಲ. ಅದು ಅವಶ್ಯ. ಮಕ್ಕಳಿಗೆ ಆಟಪಾಠಗಳ ಬಗ್ಗೆ ಪತ್ರಿಕೆ ಇದೆ ಎಂದು ಹೇಳುತ್ತಿದ್ದಾರೆ. ಇದರ ಸರ್ಕ್ಯುಲೇಷನ್ ಎಷ್ಟಿದೆಯೋ ಗೊತ್ತಿಲ್ಲ. ಅದು ಮುಖ್ಯವಾದುದು. ಅದರಲ್ಲಿ ಬರುವಂಥ ಆರ್ಟಿಕಲ್ಸ್ ಬಹಳ ಮುಖ್ಯವಾದುದು ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ರಾಜ್ಯದಲ್ಲಿ, ರಾಷ್ಟ್ರಮಟ್ಟದಲ್ಲಿ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಅನೇಕ ಆಟಪಾಠಗಳು ನಡೆಯುತ್ತಿವೆ. ನಮ್ಮ ಮಕ್ಕಳು ಯಾವ ದೃಷ್ಟಿಯಿಂದಲೂ ಕಡಿಮೆ ಇಲ್ಲ. ಕಾಲೇಜು ಮಟ್ಟದಲ್ಲಿ, ಪ್ರೌಢಶಾಲಾ ಮಟ್ಟದಲ್ಲಿ ಉತ್ತಮವಾದ ಪ್ರತಿಭಾಶಾಲಿ ಮಕ್ಕಳಿದ್ದಾರೆ. ಅವರನ್ನು ಗುರುತಿಸಿ ರಾಷ್ಟ್ರಮಟ್ಟದಲ್ಲಿ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಆಟಗಳಿಗೆ ಕಳುಹಿಸುವ ವ್ಯವಸ್ಥೆ ಆಗಬೇಕು. ಅದರ ಜೊತೆಗೆ ಮೊದಲಿನಿಂದಲೂ ಬೆಳೆದುಬಂದ ಕುಸ್ತಿ ಪೈಲ್ವಾನರುಗಳಿಗೆ ಪ್ರೋತ್ಸಾಹ ಕೊಡಬೇಕು. ಪ್ರತಿಯೊಂದು ಗ್ರಾಮದಲ್ಲೂ ಮೊದಲು ಗರಡಿಮನೆಗಳಿದ್ದವು. ಈಗ ಗರಡಿಮನೆಗಳು ಎಲ್ಲಾ ಕಡೆ ಮಾಯವಾಗಿವೆ. ಅದು ಎಲ್ಲಿದೆಯೋ ಎಂಬ ಅವಶೇಷ ಕೂಡ ಸಿಗುವುದಿಲ್ಲ. ಗರಡಿ ಮನೆಗಳ ಸ್ಥಿತಿಯಂತೂ ಗುರುತಿಸುವುದಕ್ಕೂ ಸಾಧ್ಯವಿಲ್ಲ. ನಮ್ಮಲ್ಲಿ ಎಂಥೆಂಥ ಕುಸ್ತಿ ಪಟುಗಳಿದ್ದರು ? ಕರ್ನಾಟಕದಲ್ಲಿ ಆ ಪಟುಗಳಿಗೆ ನಾಗರೀಕರು, ಆವತ್ತಿನ ಸಮಾಜ ಮತ್ತು ರಾಜ ಮಹಾರಾಜರುಗಳು ಪ್ರೋತ್ಸಾಹ ಕೊಟ್ಟು ಸಲಹುತ್ತಿದ್ದರು. ಆದರೆ ಈಗ ನಮ್ಮ ಸರ್ಕಾರ ಆ ರೀತಿ ಪ್ರೋತ್ಸಾಹ ಕೊಡುತ್ತಿಲ್ಲ. ಎಷ್ಟೋ ಮಂದಿ ಕುಸ್ತಿ ಪಟುಗಳಿಗೆ ಮಾಸಾಶನ ಸಿಕ್ಕದೆ ನಿಧನರಾದರು. ದೊಡ್ಡ ದೊಡ್ಡ ಪೈಲ್ವಾನರುಗಳು, ಜೀವನದುದ್ದಕ್ಕೂ ರಾಷ್ಟ್ರ ಮಟ್ಟದ ಪ್ರಶಸ್ತಿ ಪಡೆದ ಪೈಲ್ವಾನರುಗಳು ಮಾಸಾಶನ ಸಿಕ್ಕದೆ ನಿಧನರಾಗುವ ಪರಿಸ್ಥಿತಿ ಬಂತು. ಇವತ್ತು ಮಾಸಾಶನ ಕೊಡುತ್ತಿದ್ದಾರೆ. ಅದೇನೂ ಹೇಳಿಕೊಳ್ಳುವಂಥದ್ದಲ್ಲ. ಇನ್ನೂ ಹೆಚ್ಚಿನ ಮಾಸಾಶನ ಕೊಡಬೇಕು. ಗರಡಿ ಮನೆಗಳನ್ನು ಸುಸಜ್ಜಿತವಾಗಿ ಗ್ರಾಮೀಣ ಪ್ರದೇಶದಲ್ಲಿ ಬೆಳೆಸಬೇಕು. ಮಕ್ಕಳು ಕ್ರೀಡೆಯಲ್ಲಿ ಭಾಗವಹಿಸುವುದಕ್ಕೆ ಆಸಕ್ತಿ ವಹಿಸುವಂತೆ ಕ್ರಮ ತೆಗೆದುಕೊಳ್ಳಬೇಕು. ರಾಜ್ಯ ಮಟ್ಟದಲ್ಲಿ ರಾಷ್ಟ್ರ ಮಟ್ಟದಲ್ಲಿ ಕುಸ್ತಿ ಪಟುಗಳಿಗೆ ಪ್ರೋತ್ಸಾಹ ಕೊಡಬೇಕು. ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಸಾಕಷ್ಟು ಹಣ ಕೊಡುತ್ತಿದ್ದಾರೆ. ಅಂತರ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಕ್ರೀಡೆಗಳು ನಡೆಯುತ್ತಿವೆ. ಇದಕ್ಕೂ ಕೂಡ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಆದ್ಯತೆ ಕೊಟ್ಟು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ನಡೆಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ, ಇವತ್ತಿನ ದಿವಸ ಯುವಶಕ್ತಿಯನ್ನು ಪ್ರತಿಭಾವಂತರನ್ನಾಗಿ, ಸದೃಢರನ್ನಾಗಿ ಸಮಾಜದಲ್ಲಿ ತೊಡಗಿಸಬೇಕೆಂದು, ಅವರು ರಾಷ್ಟ್ರದ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಮತ್ತು ಅವರಲ್ಲಿ ಸಂಘಟನೆ ಬೆಳೆಯಲು ಪ್ರಯತ್ನಿಸಬೇಕು. ಅವರು ತಮ್ಮ ಪ್ರತಿಭೆಯನ್ನು ಹೆಚ್ಚು ವೃದ್ಧಿಸಿಕೊಳ್ಳಲು ಅನೇಕ ಯೋಜನೆಗಳನ್ನು ಸರ್ಕಾರ ಹಾಕಿಕೊಳ್ಳಬೇಕು. ಇಲ್ಲದೇಹೋದರೆ ಯುವಶಕ್ತಿಯನ್ನು ಹಾಳು ಮಾಡಿದಂತಾಗುತ್ತದೆ. ಇವತ್ತು ಪ್ರೋತ್ಸಾಹ ಇಲ್ಲದೆ ಅವರು ನಿರುತ್ಸಾಹಿಗಳಾಗಿದ್ದಾರೆ ನೋಂದಾಯಿಸಿದ ಯುವಸಂಘಗಳಿಗೆ ಮೆಟೀರಿಯಲ್ಸ್ ಕೊಡುತ್ತಿಲ್ಲ. ಸಲಕರಣೆಗಳನ್ನು ಯಾವ ಸಂಸ್ಥೆಗಳು ಉಪಯೋಗಿಸಿಕೊಂಡು ಪಾರ್ಟಿಸಿಪೇಟ್ ಮಾಡುತ್ತಿದೆಯೋ ಗೊತ್ತಾಗುತ್ತಿಲ್ಲ. ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಈ ಸಲಕರಣೆಗಳನ್ನು ಉಪಯೋಗಿಸಿಕೊಂಡು ಪಾರ್ಟಿಸಿಪೇಟ್ ಮಾಡುತ್ತಿದ್ದಾರಾ ಎಂಬುದನ್ನು ನೋಡಬೇಕಾಗಿದೆ. ಯಾರಿಗೆ ಸಹಾಯ ಕೊಟ್ಟಿರು, ಎಷ್ಟು ಸಂಘಸಂಸ್ಥೆಗಳು ಸಹಾಯ ತೆಗೆದುಕೊಂಡವು ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಎಷ್ಟು ಭಾಗವಹಿಸಿದ್ದವು ಎಂಬುದನ್ನು ಗುರುತಿಸಿದರೆ ಯಾವ ಸಂಸ್ಥೆಗಳು ಯಾವ

ಮಕ್ಕಳು ಪ್ರಯೋಜನ ಪಡೆಯುತ್ತಿವೆ ಎಂಬುದು ಗೊತ್ತಾಗುತ್ತದೆ. ಸರಿಯಾದ ಸಂಘಸಂಸ್ಥೆಗಳಿಗೆ ಸಹಾಯಧನ ಕೊಟ್ಟು ಮಕ್ಕಳ ಪ್ರತಿಭೆಯನ್ನು ಗುರುತಿಸುವ ಕಾರ್ಯ ಯುವಜನ ಸೇವಾ ಇಲಾಖೆಯಿಂದ ನಡೆಯಬೇಕು. ವಿವಿಧ ಮುಖಗಳಿಂದ ಪ್ರತಿಭೆಯನ್ನು ಗುರುತಿಸುವ ಅನೇಕ ಯೋಜನೆಗಳು ಫಲಪ್ರದವಾಗಿ ನಡೆಯಬೇಕೆಂದು ಮತ್ತೊಮ್ಮೆ ಹೇಳುತ್ತಿದ್ದೇನೆ. ರಾಜ್ಯ ಸರ್ಕಾರ ಅಷ್ಟೆ ಅಲ್ಲ, ಕೇಂದ್ರ ಸರ್ಕಾರ ಕೂಡ ಮಕ್ಕಳ ಪ್ರತಿಭೆಯನ್ನು ಗುರುತಿಸಿ ಯುವಜನ ಕ್ರೀಡಾ ಚಟುವಟಿಕೆಗಳಿಗೆ ಹೆಚ್ಚಿಗೆ ಆದ್ಯತೆ ಕೊಟ್ಟು ಪ್ರೋತ್ಸಾಹ ನೀಡಬೇಕು. ರಾಜ್ಯಸರ್ಕಾರ ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಒತ್ತಾಯಮಾಡಿ ಹಣವನ್ನು ಪಡೆಯಬೇಕು.

ಗ್ರಾಮೀಣ ಪ್ರದೇಶದಲ್ಲಿ ಯುವ ಸ್ಪರ್ಧಿಗಳಿಗೆ ಹಾಸ್ಟೆಲುಗಳಾಗಬೇಕು. ಇವತ್ತು ಬಹುಮುಖ್ಯವಾಗಿ ಕ್ರೀಡೆಗಳ ಬಗ್ಗೆ ಹಾಸ್ಟೆಲುಗಳಾಗಬೇಕು. ಇವತ್ತು ಶಹರದ ವಾತಾವರಣವನ್ನು ಬಿಡಿಸಿ ಗ್ರಾಮೀಣ ಪ್ರದೇಶದಲ್ಲಿ ಹಾಸ್ಟೆಲುಗಳ ನಿರ್ಮಾಣ ಮಾಡಿ ಅಲ್ಲಿ ಆಟಪಾಟಗಳಲ್ಲಿ ತರುಣರನ್ನು ತೊಡಗಿಸುವುದರಿಂದ ಅನುಕೂಲ ಆಗುತ್ತದೆ ನಾನು ಈ ಬಗ್ಗೆ ಹಿಂದೆ ಕೂಡ ವಿನಂತಿ ಮಾಡಿದ್ದೆ. ಉತ್ತಮವಾದ ಪರಿಸರದಲ್ಲಿ, ದೊಡ್ಡ ಸರೋವರಗಳ ಪಕ್ಕದಲ್ಲಿ, ನೀರು ಸೂಕ್ತವಾಗಿ ದೊರೆಯುವ ಕಡೆಗಳಲ್ಲಿ, ಅರಣ್ಯ ಪ್ರದೇಶದಲ್ಲಿ, ನಿರ್ಜನ ಪ್ರದೇಶದಲ್ಲಿ ಉತ್ತಮ ಹಾಸ್ಟೆಲುಗಳನ್ನು ಕಟ್ಟಿ, ಮಕ್ಕಳ ಆಯ್ಕೆ ಮಾಡಿ ಅಲ್ಲಿ ಸ್ಪರ್ಧೆಗಳನ್ನು ಏರ್ಪಾಡು ಮಾಡಿದರೆ ಮಕ್ಕಳಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಇವತ್ತು ಶಹರದಲ್ಲಿ ತೊಡಗಿಸುವುದರಿಂದ ಹೆಚ್ಚು ಅಷ್ಟೊಂದು ಪ್ರಯೋಜನವಾಗುವುದಿಲ್ಲ. ಅವರ ಆಸಕ್ತಿ ಎಲ್ಲಾ ಬೇರೆ ಬೇರೆ ಕಡೆ ಹೋಗುತ್ತದೆ. ಹೆಚ್ಚು ಹಣ ಖರ್ಚು ಮಾಡಿ ಇಲ್ಲಿ ಕ್ರೀಡಾಂಗಣ ಕಟ್ಟಿಸಿ, ಪ್ರೇಕ್ಷಕರನ್ನು ಕಲೆಹಾಕಿದರೂ ಮಕ್ಕಳು ಮಾತ್ರ ಸ್ಪರ್ಧೆಗೆ ಬರುವುದಿಲ್ಲ. ಅವರ ಹವ್ಯಾಸ ಬೇರೆ ಕಡೆ ಹೋಗಿರುತ್ತದೆ. ಆದ್ದರಿಂದ ಇಂತಹ ಮಕ್ಕಳಿಗೆ ವಿಶಿಷ್ಟ ರೀತಿಯಲ್ಲಿ, ಮಾದರಿಯಲ್ಲಿ ಕ್ರೀಡಾಂಗಣ ಮಾಡಬೇಕೆಂದು ಹೇಳುತ್ತೇನೆ. ಮತ್ತೆ ಮಕ್ಕಳ ಸಂಘಟನೆ ಬಗ್ಗೆ ವಾಚನಾಲಯದ, ಕ್ರೀಡಾ ಮನೋಭಾವನೆಯ ಆಟಪಾಠಗಳ ಸಲಕರಣೆ ಒದಗಿಸುವುದರಲ್ಲಿ ಹಾಗೂ ಗ್ರಾಮೀಣ ಆಟಪಾಠಗಳ ಬಗ್ಗೆ ಸರ್ಕಾರ ಯೋಜನೆ ಹಾಕಿಕೊಳ್ಳಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಹೇಳಿ ಕೆಲವು ವಿಚಾರಗಳನ್ನು ಗಣಿ ಖಾತೆಯ ಬಗ್ಗೆ ಮಾತನಾಡುತ್ತೇನೆ. ಇವತ್ತು ನಮ್ಮ ರಾಜ್ಯದ ಬಹು ದೊಡ್ಡ ಸಂಪತ್ತು ಎಂದರೆ ಗಣಿ. ಈ ಸಂಪತ್ತನ್ನು ನಾವು ಬಹಳ ಕಳೆದುಕೊಂಡಿದ್ದೇವೆ. ಇವತ್ತು ಗಣಿಗಳನ್ನು ಕಂದಾಯ ಇಲಾಖೆಯವರು ಮತ್ತು ಭೂಗರ್ಭ ಇಲಾಖೆಯವರು ಖಾಸಗಿಯವರಿಗೆ ಗುತ್ತಿಗೆಗೆ ಕೊಟ್ಟಿದ್ದಾರೆ. ಈ ಗಣಿ ಎಂದರೆ ದರೋಡೆಕೋರರ ವ್ಯವಸ್ಥಿತ ಉದ್ಯಮ ಎಂದರೆ ತಪ್ಪಾಗಲಾರದು. ಈ ವ್ಯವಸ್ಥೆಗೆ ಅಧಿಕಾರಿಗಳು ಎಷ್ಟು ಶಾಮೀಲು ಆಗಿದ್ದಾರೋ, ಅಥವಾ ನಾವು ಎಷ್ಟು ಶಾಮೀಲು ಆಗಿದ್ದೇವೆಯೋ ಒಟ್ಟಿನಲ್ಲಿ ಇವತ್ತು ಈ ದೇಶದಲ್ಲಿ ಗಣಿ ಉದ್ಯಮ ಕೊಳ್ಳೆ ಹೊಡೆಯುವ ಸ್ಥಿತಿಯಲ್ಲಿದೆ. ರಾಷ್ಟ್ರದ ಅಮೂಲ್ಯ ನಿಧಿ ಕಲ್ಲು ವಿದೇಶಕ್ಕೆ ರಫ್ತಾಗುತ್ತಿದೆ. ಇದು ದೊಡ್ಡ ಪ್ರಮಾಣದಲ್ಲಿ ರಫ್ತಾಗುತ್ತಿದ್ದರೂ ಸರ್ಕಾರಕ್ಕೆ ಎಷ್ಟು ಹಣ ಇದರಿಂದ ಬರಬೇಕೋ ಅಷ್ಟು ಹಣ ಇವತ್ತು ಬರುತ್ತಿಲ್ಲ. ವ್ಯವಸ್ಥಿತ ದರೋಡೆ ಈ ರಾಜ್ಯದಲ್ಲಿ ನಡೆಯುತ್ತಿದೆ. ಎಷ್ಟೋ ವರ್ಷಗಳಿಂದ ಬಲಿ ಹಾಕಬೇಕೆಂದು ನಮ್ಮ ಸರ್ಕಾರ ಪ್ರಯತ್ನ ಮಾಡಿದರೂ ಇನ್ನೂ ಕೂಡ ಸರಿಯಾದ ರೀತಿಯಲ್ಲಿ ಬಲಿ ಹಾಕಿಲ್ಲ. ಅನೇಕ ಪ್ರಾಮಾಣಿಕ ಅಧಿಕಾರಿಗಳು ಈ ಇಲಾಖೆಯಲ್ಲಿ ದುಷ್ಟ ಅಧಿಕಾರಿಗಳ ಕೈಗೆ ಸಿಕ್ಕಿ ಹಿಂಸೆಪಡುತ್ತಿದ್ದಾರೆ. ಈ ಒಂದು ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳ ಗಮನಕ್ಕೂ ತಂದಿದ್ದೇವೆ. ಅಲ್ಲಿರುವ ಅನೇಕ ಯೋಗ್ಯ ಅಧಿಕಾರಿಗಳಿಗೆ ಅಯೋಗ್ಯ ಅಧಿಕಾರಿಗಳಿಂದ ಹಿಂಸೆಯಾಗುತ್ತಿದೆ. ಅಲ್ಲಿ ಅಯೋಗ್ಯರ ಭ್ರಷ್ಟಾಚಾರ ಬೆಳೆದುಬರುತ್ತಿದೆ. ಈ ರೀತಿಯ ಒಂದು ವ್ಯವಸ್ಥೆ ಗಣಿ ಇಲಾಖೆಯಲ್ಲಿ ನಡೆಯುತ್ತಿದೆ. ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು. ರಾಜ್ಯದ ಆದಾಯವನ್ನು ಸಂಗ್ರಹಿಸುವ ಭೂ ಸಂಪತ್ತು ಸರಿಯಾದ ಪ್ರಮಾಣದಲ್ಲಿ ವಿತರಣೆಯಾಗಿ ರಾಜ್ಯ ಸರ್ಕಾರಕ್ಕೆ ತನ್ನ ಪಾಲು ಮುಟ್ಟುವುದರ ಬಗ್ಗೆ ವ್ಯವಸ್ಥೆ ಮಾಡಿಕೊಳ್ಳಬೇಕು. ಅವ್ಯವಸ್ಥಿತ ಕರಾರುಗಳು, ಕರಾರು ರಹಿತ ಕಲ್ಲು ಸಾಗಾಣಿಕೆ ಆಗುತ್ತಿರುವುದು ನಿಲ್ಲಬೇಕು. ಇವತ್ತು ಕಂದಾಯ ಹಾಗೂ ಗಣಿ ಇಲಾಖೆಯಲ್ಲಿ ಸರಿಯಾದ ದಾಖಲೆಗಳು ಸಿಗುತ್ತಿಲ್ಲ. ಅವರು ಪರವಾನಗಿ ಕೊಟ್ಟಿದ್ದು ಇವರಿಗೆ ಗೊತ್ತಾಗುವುದಿಲ್ಲ, ಇವರು ಕೊಟ್ಟಿದ್ದು ಅವರಿಗೆ ಗೊತ್ತಾಗುವುದಿಲ್ಲ. ಈ ರೀತಿಯ ಅವ್ಯವಸ್ಥೆ ಆ ಇಲಾಖೆಗಳಲ್ಲಿದೆ. ಇದರ ಬಗ್ಗೆ ಸರ್ಕಾರ ಗಮನಕೊಟ್ಟು ದೇಶದ ದೊಡ್ಡ ಸಂಪತ್ತಾದ ಗಣಿಯನ್ನು ಉಳಿಸಹುದು. ಇದರ ಬೆಲೆ ಇವತ್ತಿನ ದಿವಸ ಎಲ್ಲರಿಗೂ ಗೊತ್ತಿದೆ. ಇವತ್ತು ಬಂಗಾರದ ಬೆಲೆಗೆ ಕಲ್ಲು ಮಾರಾಟವಾಗುತ್ತಿದೆ. ಜಗತ್ತಿಗೆಲ್ಲ

ಕರ್ನಾಟಕದಿಂದ ನಿಧಿ ಹೋಗುತ್ತಿದೆ. ಅದನ್ನು ಉಳಿಸಿ ರಾಜ್ಯದ ಆದಾಯವನ್ನು ಹೆಚ್ಚು ಮಾಡಿಕೊಳ್ಳಬೇಕು. ಭೂಗರ್ಭ ಇಲಾಖೆಯ ವಿಷಯ ಹೇಳಬೇಕೆಂದರೆ ನೀರನ್ನು ಸಂಶೋಧನೆ ಮಾಡತಕ್ಕ ಈ ಇಲಾಖೆಯ ಸಿಬ್ಬಂದಿಯಂತೂ ಎಷ್ಟರಮಟ್ಟಿಗೆ ಸೇವೆ ಮಾಡುತ್ತಿದೆ ಎಂದರೆ ಅದನ್ನು ಹೇಳುವುದಕ್ಕೇ ಅಸಾಧ್ಯ. ಇಲ್ಲಿ ಯಾರಾದರೂ ಅರ್ಜಿ ಕೊಟ್ಟರೆ ಸರಿಯಾದ ವ್ಯವಸ್ಥೆ ಇಲ್ಲ. ಇವರು ಜಲವನ್ನು ಹುಡುಕುವ ವ್ಯವಸ್ಥೆ ಕೂಡಾ ಸರಿಯಾಗಿಲ್ಲ. ವಿಧಾನ ಕೂಡಾ ಸರಿಯಾಗಿಲ್ಲ. ಅಲ್ಲೂ ಕೂಡಾ ಸಾಕಷ್ಟು ಭ್ರಷ್ಟಾಚಾರ ನಡೆಯುತ್ತಿದೆ. ಇವತ್ತು ಒಬ್ಬ ರೈತ ಅಲ್ಲಿಗೆ ಹೋಗಿ ತಮ್ಮ ಭಾಗದಲ್ಲಿ ಜಲವನ್ನು ಕಂಡುಹಿಡಿಯುವ ಬಗ್ಗೆ ಅರ್ಜಿ ಕೊಟ್ಟ ನಂತರ ಅವರಿಗೆ ಸಾಕಷ್ಟು ಹಣವನ್ನೂ ಕೊಟ್ಟು ಹೋಗಬೇಕಾಗಿದೆ. ಈ ಎಲ್ಲಾ ವ್ಯವಸ್ಥೆಗಳ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರಣೆ ಮಾಡಿ ಈ ಇಲಾಖೆಗಳು ಜನಸೇವೆ ಮಾಡುವ ಬಗ್ಗೆ ಹಾಗೂ ಭೂಗರ್ಭದಲ್ಲಿ ಏನು ನಿಧಿ ಇದೆ ಅದು ಸದುಪಯೋಗ ಆಗುವ ಹಾಗೆ ಉಪಯೋಗ ಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ. ನ್ಯಾಯಯುತವಾಗಿ ಇಂಥಾ ಜಾಗಕ್ಕೆ ಬಿಲ್ ಹಾಕಿ ಬರುವ ಸರ್ಕಾರದ ಆದಾಯವನ್ನು ಉಳಿಸಿಕೊಳ್ಳಲಿಕ್ಕೆ ಅಧಿಕಾರಿಗಳು ಪ್ರಯತ್ನ ಮಾಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೇ, ಗಣಿ, ಭೂವಿಜ್ಞಾನ, ಯುವಜನ ಮತ್ತು ಕ್ರೀಡಾ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನನ್ನನ್ನು ಕರೆದಿದ್ದುದಕ್ಕಾಗಿ ಪ್ರಾರಂಭದಲ್ಲಿ ನಾನು ತಮಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಈ ಯುವಜನ ಮತ್ತು ಕ್ರೀಡಾ ಇಲಾಖೆ ಮಾನ್ಯ ಸಚಿವರಾದ ಶ್ರೀ ಜಿಗಜಿಣಗಿ ಅವರಿಗೆ ಬಂದಿದ್ದು ಇತ್ತೀಚೆಗೆ. ಇದಕ್ಕೆ ಹಿಂದೆ ಶ್ರೀ ಬಿ. ಎಲ್. ಶಂಕರ್ ಅವರು ಈ ಖಾತೆಯ ಮಂತ್ರಿಯಾಗಿದ್ದರು. ಈಗ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಬಗ್ಗೆ ನಾವು ಬಹಳ ಆಳವಾಗಿ ಚರ್ಚೆ ಮಾಡಿ ಏನಾದರೂ ಬೇಡಿಕೆಗಳನ್ನು ಮಾನ್ಯ ಮಂತ್ರಿಗಳ ಮುಂದೆ ಇಟ್ಟರೆ ಭರವಸೆ ಏನಾದರೂ ಅವರಿಂದ ಸಿಗುತ್ತದೆ ಎನ್ನುವ ನಂಬಿಕೆ ನನಗೆ ಇಲ್ಲ. ಇದೊಂದು ತರಹ ಇಂಟರೀಮ್ ಪೋರ್ಟ್‌ಫೋಲಿಯೋ ಅವರಿಗೆ ಸಿಕ್ಕಿದೆ. ಈ ಅಧಿವೇಶನ ಮುಗಿಯುವವರೆಗೆ ಇದನ್ನು ನೋಡಿಕೊಳ್ಳಲು ಒಬ್ಬರು ಬೇಕಾಗಿದ್ದರು. ಹೀಗಾಗಿ ಇದನ್ನು ಇವರಿಗೆ ಗಂಟುಹಾಕಿದ್ದಾರೆ.

ಶ್ರೀ ರಮೇಶ್ ಜಿಗಜಿಣಗಿ (ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು)... ಏನು ಬೇಕು ಹೇಳಿ ?

ಶ್ರೀ ಯು. ಭೂಪತಿ.—ಆದ್ದರಿಂದ ಪ್ರಾರಂಭದಲ್ಲಿ ನಾನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಆದರೆ ನಮಗೆ ಕೊಟ್ಟಿರತಕ್ಕಂಥ ವರದಿಯಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ವರದಿಯೊಳಗೆ ಹೆಚ್ಚಿನಂಶ ಗ್ರೌಂಡ್‌ವಾಟರ್ ಬಗ್ಗೆ ಹೇಳಿದ್ದಾರೆಯೇ ವಿನಹ ಮಿನರಲ್ ಡಿಪಾರ್ಟ್‌ಮೆಂಟ್ ಬಗ್ಗೆ ವಿವರವಾಗಿ ಹೇಳಿಲ್ಲ. ಸ್ವಲ್ಪದರಲ್ಲಿ ತೇಲಿಸಿಬಿಟ್ಟಿದ್ದಾರೆ. ಈ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಪ್ರಬಲವಾದ ಶಕ್ತಿ ಎಂದರೆ ಮಿನರಲ್ ಸೆಕ್ಷನ್. ಈ ಗ್ರೌಂಡ್ ವಾಟರ್ ಸೆಕ್ಷನ್‌ನವರು ಪಾಪ, ಅವರ ಕೆಲಸವನ್ನು ಅವರು ಮಾಡಿಕೊಂಡು ಹೋಗುತ್ತಿದ್ದಾರೆ. ಎಷ್ಟೋಂದು ಪ್ರಭಾವಿ ಜನರು ಈ ಇಲಾಖೆಯ ನೌಕರಿಯಲ್ಲಿ ಇದ್ದಾರೆ ಎಂದು ಹೇಳಿದರೆ ಒಂದೇ ಇಲಾಖೆಯಲ್ಲಿ, ಈ ಭಾಗ ಎಂದರೆ ಮೈನ್ಸ್ ಅಂಡ್ ಜ್ಯಾಲಜಿ ಡಿಪಾರ್ಟ್‌ಮೆಂಟ್ ಒಳಗಡೆ ಈ ಮಿನರಲ್ಸ್ ಸೆಕ್ಷನ್ ಎಂದು ಏನು ಕರೆಯುತ್ತಾರೆ, ಈ ವಿಭಾಗದಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳು ಹಲವಾರು ವರ್ಷಗಳಿಂದ ಕಳೆದ ಎಂಟು–ಹತ್ತು–ಇಪ್ಪತ್ತು ವರ್ಷಗಳಿಂದ ಯಾರ್ಯಾರು ಪ್ರಬಲ ಕೋಮುಗಳಿಗೆ ಸೇರಿದವರು, ಯಾರಿಗೆ ರಾಜಕೀಯವಾಗಿ ಪ್ರಭಾವ ಇರುತ್ತದೆ ಅಂತಹವರನ್ನು ಅಲ್ಲಿಂದ ಹೊರಹಾಕುವುದಕ್ಕೆ ಸಾಧ್ಯವಾಗಿಲ್ಲ. ಯಾವ ರಾಜಕೀಯ ಪ್ರಭಾವ ಇಲ್ಲದಂತಹ ದುರ್ಬಲ ವರ್ಗಗಳಿಗೆ ಸೇರಿದಂತವರು ಯಾರು ಇರುತ್ತಾರೆ ಅವರು, ತಮ್ಮ ಜೀವನದಲ್ಲೇ ಈ ಮಿನರಲ್ ಸೆಕ್ಷನ್ ಅನ್ನು ನೋಡುವುದಕ್ಕೆ ಸಾಧ್ಯವಿಲ್ಲ. ಅಂಡರ್‌ಗ್ರೌಂಡ್ ವಾಟರ್, ಸರ್ವೆ ಎಂದು ಇಂತಹ ವಿಭಾಗಗಳಲ್ಲಿ ಕೆಲಸ ಮಾಡಿ ಅದರು ಕೊನೆಗೊಂದು ದಿವಸ ಮನೆಗೆ ಬರುತ್ತಾರೆ. ಅದಕ್ಕೆ ಕಾರಣ ಏನು ? ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯ ಮಾಡುವುದು ಇಷ್ಟೇ ದಯಮಾಡಿ ಜಿಲ್ಲಾವಾರು ದಿದ ಅಧಿಕಾರಿಗಳ ಪಟ್ಟಿಯನ್ನು ಈ ಮನೆಯ ಮುಂದೆ ಇಡಬೇಕು. ಯಾವ್ಯಾವ ಜನಾಂಗಕ್ಕೆ ಸೇರಿದಂಥ ಅಧಿಕಾರಿಗಳು

ಎಷ್ಟು ವರ್ಷಗಳ ಕಾಲ ಮಿನರಲ್ಸ್ ಸೆಕ್ಷನ್‌ನಲ್ಲಿ ಕೆಲಸ ಮಾಡಿದ್ದಾರೆ ಮತ್ತು ಯಾವ ಜನಾಂಗದ ಅಧಿಕಾರಿಗಳು ಮಿನರಲ್ಸ್ ಸೆಕ್ಷನ್ ನೋಡಿಲ್ಲದೆ ಬರೇ ಗ್ರೌಂಡ್‌ವಾಟರ್ ಸೆಕ್ಷನ್‌ನಲ್ಲಿ ಕೆಲಸ ಮಾಡಿದ್ದಾರೆ ಎನ್ನತಕ್ಕದು ಈ ಮನೆಯ ಸದಸ್ಯರಿಗೆ, ನಮಗೆ ಗೊತ್ತಾಗಬೇಕು. ಈ ಮಾತನ್ನು ಹೇಳಲಿಕ್ಕೆ ಕಾರಣವೆಂದರೆ ಮಾನ್ಯ ಅಧ್ಯಕ್ಷರೇ, ತಮಗೇ ಗೊತ್ತಿದೆ; ಏನೆಂದರೆ, ಶ್ರೀ ಮದನಗೋಪಾಲ ಎನ್ನತಕ್ಕ ಅಧಿಕಾರಿಯ ವರ್ಗಾವಣೆ ಬಗ್ಗೆ ದೊಡ್ಡ ಗಲಾಟೆ ಆಯಿತು. ಒಬ್ಬ ಅಧಿಕಾರಿಯನ್ನು ಉಳಿಸಿಕೊಳ್ಳಬೇಕೆಂದು ಒಂದು ಜಿಲ್ಲಾ ಮಟ್ಟದ ಹೋರಾಟ ನಡೆಯಿತು. ಇದರಲ್ಲಿ ರಾಜಕೀಯ ಏನೇ ಇರಲಿ; ಇದಕ್ಕೆ ಕಾರಣ ಏನು ಎಂದು ಹೇಳಿದರೆ ಈ ಇಲಾಖೆಯಲ್ಲಿ ನಡೆಯತಕ್ಕಂಥ ಕಲ್ಪನೆಗೆ ನಿಲುಕದಂಥ ಭ್ರಷ್ಟಾಚಾರ. ಇಷ್ಟೇ ಹೊರತು ಬೇರೆ ಏನೂ ಇಲ್ಲ. ನಾನು ಒಬ್ಬ ಗಣಿ ಇರುವ ವಿಭಾಗದಿಂದ ಬಂದಿರತಕ್ಕಂಥ ಮನುಷ್ಯ. ನಮ್ಮಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರು ಹೆಚ್ಚು ಸಿಗುತ್ತದೆ. ಸಂಡೂರು ಹೊಸಪೇಟೆ ಹಾಗೂ ಬಳ್ಳಾರಿಯಲ್ಲಿ ೪೦–೪೫ ಕಿಲೋಮೀಟರ್ ಉದ್ದದ ಸಾಲು ಬೆಟ್ಟಗಳು ಕಬ್ಬಿಣ, ಮ್ಯಾಂಗನೀಸ್ ಅದಿರುಗಳಿಂದ ಕೂಡಿವೆ. ಅಲ್ಲಿ ಎರಡು ಕಂಪನಿಗಳು ಮಾತ್ರ ಸಾರ್ವಜನಿಕ ಕ್ಷೇತ್ರದಲ್ಲಿವೆ. ಒಂದು ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಶನ್, ಇದು ಕೇಂದ್ರ ಸರ್ಕಾರಕ್ಕೆ ಸೇರಿದ್ದು. ಮತ್ತು ಮೈಸೂರು ಮಿನರಲ್ ಲಿಮಿಟೆಡ್—ಇದು ರಾಜ್ಯ ಸರ್ಕಾರಕ್ಕೆ ಸೇರಿದು. ರಾಜ್ಯ ಸರ್ಕಾರಕ್ಕೆ ಸೇರಿದಂತೆ ಗಣಿ ಕಂಪನಿ ಏನಿದೆ, ಮೈಸೂರು ಮಿನರಲ್ಸ್ ಲಿಮಿಟೆಡ್ ಎಲ್ಲಿಯವರೆಗೆ ನಿಯಮಾವಳಿಗಳನ್ನು ಮೀರಿ ಕಾರ್ಯಕ್ರಮ ನಡೆಸುತ್ತಿದೆ ಎಂದು ಹೇಳಿದರೆ ಹಿಂದೆ ಒಮ್ಮೆ ಈ ಮನೆಯ ಸಾರ್ವಜನಿಕ ಉದ್ದಿಮೆಗಳ ಸಮಿತಿ ಇದನ್ನು ಸ್ಟಡಿಮಾಡಿ ಇಲ್ಲಿ ಏನು ಅವ್ಯವಹಾರ ನಡೆದಿದೆ, ಯಾರ್ಯಾರು ಇದರಲ್ಲಿ ಜವಾಬ್ದಾರರಿದ್ದಾರೆ ಎಂದು ವಿವರವಾದ ವರದಿಯನ್ನು ಕಳೆದ ವರ್ಷ ಕೊಟ್ಟಿತು.

೨.೩೦ ಪಿ.ಎಂ.

ಕಳೆದ ವರ್ಷ ಅಲ್ಲ, ಆಚೆ ವರ್ಷ. ನಾನು ಮಾನ್ಯ ದೇಶಮುಖ್‌ರವರು ಈ ಇಲಾಖೆಯ ಮಂತ್ರಿಗಳಾಗಿದ್ದಾಗ ಈ ಬಗ್ಗೆ ಕೇಳಿದ್ದೆ. ಈ ಸಮಿತಿಯವರು ಕೊಟ್ಟಂಥ ವರದಿಯನ್ನು ತಾವು ಕಾರ್ಯರೂಪಕ್ಕೆ ತಂದಿದ್ದೀರಾ, ಯಾರ್ಯಾರ ಮೇಲೆ ಕೇಸ್ ಹಾಕಿದ್ದೀರಿ, ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದೆ. ಅದಕ್ಕೆ ಅವರು ಸಂಬಂಧಪಟ್ಟ ಅಧಿಕಾರಿಗಳು ಯಾರು, ಈ ಅವ್ಯವಹಾರದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇವೆಂದು ಹೇಳಿದರು. ಈಗ ಕ್ರಿಮಿನಲ್ ಕೇಸ್ ಹಾಕಿದ್ದಾರೋ ಅಥವಾ ಸಿವಿಲ್ ಕೇಸ್ ಹಾಕಿದ್ದಾರೋ ನನಗಂತೂ ಗೊತ್ತಿಲ್ಲ. ಮಾನ್ಯ ಸಚಿವರು ನಮಗೆ ಹೇಳಬೇಕು. ಈ ಫೈಂಡಿಂಗ್ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಈ ಮನೆಗೆ ಹೇಳಬೇಕು. ಈ ಒಂದು ವ್ಯವಹಾರದಲ್ಲಿ ಯಾರು ಇನ್‌ವಾಲ್ವ್ ಆಗಿದ್ದಾರೆ, ಯಾರು ಸಂಬಂಧಪಟ್ಟಿದ್ದಾರೆ ಎಂದು ಹೆಸರುಗಳನ್ನು ಕೇಳಿದ್ದೇವೋ ಅವರು ಇವತ್ತು ಕೂಡ ರಾಜಾರೋಷವಾಗಿ ರಾಜರ ಗತ್ತಿನಲ್ಲಿ ಅದೇ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡಿಕೊಂಡಿದ್ದಾರೆ. ಯಾರಿಗೂ ಏನೂ ತೊಂದರೆ ಆಗಿಲ್ಲ. ಕೆಲವರು ಮಾತ್ರ ಬೇಸತ್ತು ರಾಜಿನಾಮೆ ಕೊಟ್ಟು ಹೋಗಿದ್ದಾರೆಂದು ಗೊತ್ತಾಯಿತು. ಇಂತಹವರ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದಾರೆಂದು ಕೇಳಿದೆ. ಆದ್ದರಿಂದ ಈ ವಿವರಗಳನ್ನು ಮಾನ್ಯ ಮಂತ್ರಿಗಳು ಕೊಟ್ಟರೆ ಬಹಳ ಒಳ್ಳೆಯದು. ಈ ಮೈಸೂರು ಮಿನರಲ್ಸ್ ಲಿಮಿಟೆಡ್‌ನವರು ನಿಯಮಗಳನ್ನು ಗಾಳಿಗೆ ತೂರುತ್ತಿದ್ದಾರೆಂದು ಏಕೆ ಹೇಳಿದೆ ಅಂದರೆ, ಯಾವುದೇ ಒಂದು ಪಬ್ಲಿಕ್ ಸೆಕ್ಟರ್ ಕಂಪನಿಯಲ್ಲಿ ಕಾಂಟ್ರಾಕ್ಟ್ ಪದ್ಧತಿಯನ್ನು ಕೊಡತಕ್ಕಂಥದ್ದು ನಿಯಮಗಳಿಗೆ ವಿರೋಧ; ಪ್ರೈವೇಟೈಸೇಷನ್‌ಗೆ ಇವತ್ತು ಸರ್ಕಾರವೇ ಎಂಟರ್‌ಟೇನ್ ಮಾಡುತ್ತಿದೆ. ಒಂದು ಸಾರ್ವಜನಿಕ ಉದ್ದಿಮೆಯಲ್ಲಿ ತಮಗೆ ಇರತಕ್ಕಂಥ ಉದ್ಯೋಗದ. ಅದಕ್ಕೆ ನಾವು ಏನು ಹೇಳುತ್ತೇವೆಂದರೆ ಒಂದು ಅಪೊರ್ಚುನಿಟಿ, ಇದನ್ನು ಜನರಿಗೆ ಕೊಟ್ಟು ಎಷ್ಟು ಸಾಧ್ಯವೋ ಅಷ್ಟು ಲಾಭವನ್ನು ತಗೆಯುವಂಥ ಕೆಲಸ ಮಾಡುವುದನ್ನು ಬಿಟ್ಟು ಖಾಸಗಿಯವರಿಗೆ ಒಂದೊಂದು ಭಾಗದ ಮೈನ್ಸ್‌ನ್ನು ಕಾಂಟ್ರಾಕ್ಟ್ ಕೊಡುತ್ತಿದ್ದಾರೆ. ಪಬ್ಲಿಕ್ ಸೆಕ್ಟರ್‌ನ ಇಂತಹ ಒಂದು ಮೈನ್ಸ್‌ನ ಕೆಲಸ ಏನೆಂದರೆ, ಒಬ್ಬ ವ್ಯಕ್ತಿಗೆ ಇಷ್ಟು ಎಕರೆ ಮೈನ್ಸ್ ಎಂದು ಕಾಂಟ್ರಾಕ್ಟ್ ಲೀಸ್ ಕೊಡುತ್ತಾರೆ. ಅವನು ಒಂದು ಟನ್ನಿಗೆ ೮–೧೦ ರೂಪಾಯಿ ಕಂಪನಿಗೆ ಕೊಟ್ಟರೆ ಬರೀ ಲಕ್ಷ ಒಡೆದುಕೊಂಡು ಕೂತಿರುತ್ತಾನೆ. ಇದು ಕರ್ನಾಟಕ ಸರ್ಕಾರದ ಸಾರ್ವಜನಿಕ ಕ್ಷೇತ್ರದಲ್ಲಿ ಇರತಕ್ಕಂಥ ಒಂದು ಗಣಿ. ಒಳ್ಳೆಯ ಹೆಸರು ಇರತಕ್ಕಂಥ ಗಣಿ. ಇದರ ಹಣೆಬರಹ ಏನಾಗಿದೆಯೆಂದರೆ, ಇದರಲ್ಲಿ ಕೂಡ ಮೇಲ್ಮಟ್ಟದಲ್ಲಿ ಭ್ರಷ್ಟಾಚಾರ.

ಮಾತೆತ್ತಿದರೆ, ಲಾಭ ಇಲ್ಲವೆಂದು ಹೇಳುತ್ತಾರೆ. ಸಂಬಳ ಹೆಚ್ಚು ಕೊಡುತ್ತೇವೆ. ನಡೆಸುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಇದು ಸರಿಯಲ್ಲ. ಇವತ್ತು ಕೇಂದ್ರ ಸರ್ಕಾರದ ಅಧೀನದಲ್ಲಿರತಕ್ಕ ಗಣಿಯಲ್ಲೂ ಕೂಡ ಕೊಡತಕ್ಕ ಸಂಬಳಕ್ಕೆ ಹೋಲಿಸಿದರೆ, ನೀವು ಕೊಡುವುದು ಶೇಕಡ ೬೦ರಷ್ಟು ಸಹ ಇಲ್ಲ. ಆದರೂ ಕೂಡ ನಷ್ಟ ಎಂದು ಹೇಳುತ್ತೀರಿ. ಇದಕ್ಕೆ ಕಾರಣ ಮೇಲ್ಮಟ್ಟದ ಭ್ರಷ್ಟಾಚಾರವೇ ಕಾರಣ. ಇನ್ನು ಗಣಿ ಮತ್ತು ಭೂಗರ್ಭಶಾಸ್ತ್ರ ಇಲಾಖೆಯಲ್ಲಿ ಗಣಿ ವಿಭಾಗದ ಕೆಲಸ ಏನೆಂದರೆ, ಖಾಸಗಿ ಗುತ್ತೇದಾರರಿಗೆ, ಎಲ್ಲೆಲ್ಲಿ ಗಣಿ ಇದೆ ಎನ್ನುವುದನ್ನು ಸರ್ವೆ ಮಾಡಿ ಇವರು ಕೊಡುತ್ತಾರೆ, ಇವರು ಇಲಾಖೆಗೆ ಮೊದಲು ರಿಪೋರ್ಟ್ ಮಾಡುವುದಿಲ್ಲ ಮೊದಲು ಖಾಸಗಿ ಗಣಿ ಮಾಲೀಕರಿಗೆ ರಿಪೋರ್ಟ್ ಮಾಡುತ್ತಾರೆ. ಇಂತಹ ಜಾಗದಲ್ಲಿ ಒಳ್ಳೆಯ ಗಣಿ ಇವೆ, ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಲೀಸ್ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಈ ರೀತಿ ಕೇಂದ್ರ ಸರ್ಕಾರದಲ್ಲಿ ಪ್ರಭಾವ ಬೀರತಕ್ಕ ಜನ ಯಾರಿರುತ್ತಾರೆ, ಅವರು ಅಲ್ಲಿಂದ ತರುತ್ತಾರೆ. ಆ ಮಟ್ಟದಲ್ಲಿಯೂ ಕೂಡ ಭ್ರಷ್ಟಾಚಾರ ಇರುವುದು ತಮಗೂ ಗೊತ್ತಿದೆ. ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಹೀಗೆ ಅಲ್ಲಿಯೂ ಕೂಡ ಲೀಸ್ ತೆಗೆದುಕೊಂಡು ಬರುತ್ತಾರೆ ಇವರಿಗೆ ಅನುಕೂಲವಾಗತಕ್ಕ ಮ್ಯಾಪ್ ಹಾಗೂ ಎಲ್ಲಾ ವಿವರಗಳನ್ನೂ ಕೊಡತಕ್ಕ ಕೆಲಸವನ್ನು ಈ ಇಲಾಖೆಯ ಅಧಿಕಾರಿಗಳು ಮಾಡುತ್ತಿದ್ದಾರೆ. ಇದಕ್ಕೆ ಕಮಿಷನ್, ಮಾಮೂಲಿ ಎಲ್ಲಾ ವ್ಯವಹಾರವೂ ಸಲೀಸಾಗಿ ನಡೆಯುತ್ತಾ ಹೋಗುತ್ತಿದೆ. ಇವುಗಳನ್ನು ನಾನು ನಮ್ಮ ಜಿಲ್ಲೆಯಲ್ಲಿ ಕಣ್ಣಾರೆ ನೋಡಿರತಕ್ಕ ವಿವರಗಳು. ಇನ್ನು ಕಬ್ಬಿಣದ ಅದಿರು, ಮ್ಯಾಂಗನೀಸ್ ಗಣಿಗಳನ್ನು ಇವತ್ತಿನವರೆಗೂ ಸರಿಯಾದಂಥ ರೀತಿಯಲ್ಲಿ ಸರ್ವೆ ಮಾಡಿಲ್ಲ. ಇವುಗಳಿಗೆ ಬೌಂಡರಿ ಫಿಕ್ಸ್ ಮಾಡಿಲ್ಲ, ಮೇರೆ ನಿಗದಿ ಮಾಡಿಲ್ಲ. ಯಾರಾದರೂ ಇದರ ಮೇರೆ ಎಷ್ಟೆಂದು ಕೇಳಿದರೆ ಆ ಗಣಿ ಪ್ರದೇಶದ ಮೇರೆ ಎಲ್ಲಿದೆ ಎಂದು ಒಂದು ಕಲ್ಲು ಕೂಡ ತೋರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಎಂದರೆ ಖಾಸಗಿ ಮಾಲೀಕರು ಎಲ್ಲರೂ ಕೂಡ, ರಿಸರ್ವ್ ಫಾರೆಸ್ಟ್ ಪಕ್ಕದಲ್ಲಿ ೧೦ ಎಕರೆ ಅಲಾಟ್ ಆಗಿತ್ತು ಎಂದರೆ, ತಮಗೆ ಲೀಸ್ ಇರತಕ್ಕ ಏರಿಯಾ ಬಿಟ್ಟು ಕಂಪ್ಲೀಟ್ ರಿಸರ್ವ್ ಫಾರೆಸ್ಟ್ ಏರಿಯಾ ಎನ್‌ಕ್ರೋಚ್ ಮಾಡಿ, ಒಂದು ಕಡೆ ಫಾರೆಸ್ಟ್ ಹಾಳು ಮಾಡುತ್ತಾರೆ, ಮತ್ತೊಂದು ಕಡೆ ತಮಗೆ ಅಲಾಟ್ ಆಗಿರತಕ್ಕಂಥ ಗಣಿಯಲ್ಲಿ ಮೈನಿಂಗ್ ಮಾಡುವುದಿಲ್ಲ. ಇಂತಹ ಪ್ರಕರಣಗಳು ಹಲವಾರು ಇವೆ. ಈ ಬಗ್ಗೆ ಹಲವಾರು ದೂರುಗಳು ಸರ್ಕಾರಕ್ಕೆ ಬಂದಿವೆ. ಯಾವ ಯಾವ ಗಣಿ ಮಾಲೀಕರ ಮೇಲೆ ತಾವು ಕೇಸ್ ಹಾಕಿದ್ದೀರಿ, ಏನೇನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಮಾನ್ಯ ಸಚಿವರು ಈ ಮನೆಗೆ ವಿವರವಾದ ಉತ್ತರವನ್ನು ಕೊಡಬೇಕು ಹಾಗೂ ವಿವರಗಳನ್ನು ಈ ಸಭೆ ಮುಂದೆ ಇಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಗ್ರಾನೈಟ್ ವಿಚಾರದಲ್ಲಿ ಬಹಳ ಬೆಲೆ ಬಾಳುವಂಥ ಬಣ್ಣದ ಕಲ್ಲುಗಳನ್ನು ರಾಜ್ಯದ ಬೇರೆ ಕಡೆಗೆರಫ್ತು ಮಾಡುತ್ತಿದ್ದಾರೆ ಎಂದು ಹೊರಗಡೆ, ಜನಗಳು ಚಳುವಳಿ ಮಾಡಿದರು. ಈ ಮನೆಯ ಸದಸ್ಯರೆಲ್ಲರಿಗೂ ಪತ್ರಗಳನ್ನು ಬರೆದರು. ಕರ್ನಾಟಕ ರಾಜ್ಯದ ಗಣಿ ಸಂಪತ್ತು ಲೂಟಿಯಾಗುತ್ತಿದೆ, ಕರ್ನಾಟಕದ ಸಂಪತ್ತು ಹೊರ ಹೋಗುತ್ತಿದೆ ಎಂದು. ಕರ್ನಾಟಕ ಸಂಪತ್ತನ್ನು ಹಿಂದೆ ಬ್ರಿಟಿಷರು ಈಸ್ಟ್ ಇಂಡಿಯಾ ಕಂಪೆನಿ ಮುಖಾಂತರ ಯಾವ ರೀತಿ ಹೊಡೆದುಕೊಂಡು ಹೋದರೋ, ಅದೇ ರೀತಿ ಇವತ್ತು ಗಣಿ ಮಾಲೀಕರು ತೆಗೆದುಕೊಂಡು ಹೋಗುತ್ತಿದ್ದಾರೆ. ಇದಕ್ಕೆ ತಡೆ ಹಾಕಬೇಕು. ಈ ಬಗ್ಗೆ ಸರ್ಕಾರದ ಗಮನಕ್ಕೆ ತರಬೇಕೆಂದು ಹೇಳಿ ಚಳುವಳಿ ಮಾಡಿದರು. ಆದರೆ ಸರ್ಕಾರದ ಇದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ.

ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ, ಅದು ಮಾಡಿದ್ದೇವೆ, ಇದು ಮಾಡಿದ್ದೇವೆ ಎಂದು ಮಾನ್ಯ ಮಂತ್ರಿಗಳು ಈ ಮನೆಯಲ್ಲೇ ಹೇಳಿದ್ದರು, ಅದು ನನಗೆ ಜ್ಞಾಪಕ ಇದೆ. ಆದರೆ ಏನು ಕ್ರಮ ತೆಗೆದುಕೊಂಡಿದ್ದಾರೋ ಬಿಟ್ಟಿದಾರೋ ನಮಗೆ ಗೊತ್ತಿಲ್ಲ. ಆದರೆ ನಡೆದುಕೊಂಡು ಬಂದಿರುವುದು ನಡೆಯುತ್ತಲೇ ಇದೆ. ಇನ್ನು ಜಿಲ್ಲಾ ಪರಿಷತ್‌ಗಳು ಮತ್ತು ಮಂಡಲ್ ಪಂಚಾಯತ್‌ಗಳು ಅಸ್ತಿತ್ವಕ್ಕೆ ಬಂದ ಮೇಲೆ ಜಿಲ್ಲಾ ಪರಿಷತ್ ಕಾಯಿದೆಯಲ್ಲಿ ಒಂದು ಪ್ರಾವಿಜನ್ ಮಾಡಲಾಗಿದೆ. ಆ ಪ್ರಾವಿಜನ್ ಏನು ಹೇಳುತ್ತದೆ ಎಂದರೆ, ಮಂಡಲ್ ಪಂಚಾಯತಿಗಳಿಗೆ ಅವರ ವ್ಯಾಪ್ತಿಯಲ್ಲಿ ಬರತಕ್ಕಂಥ ಗಣಿಗಳ ಮೇಲಿನ ಮಿನರಲ್ ರೈಟ್ಸ್ ಟ್ಯಾಕ್ಸ್ ವಸೂಲು ಮಾಡುವುದಕ್ಕೆ ಹಕ್ಕು ಇದೆ ಎಂದು ಹೇಳುತ್ತದೆ. ಆದರೆ ಸರಕಾರ ಈ ಮಿನರಲ್ ರೈಟ್ಸ್ ಟ್ಯಾಕ್ಸನ್ನು ವಸೂಲು ಮಾಡಕೂಡದು ಎಂಬುದಾಗಿ ಮಂಡಲ ಪಂಚಾಯತಿಗಳ ನಿರ್ದೇಶನ ನೀಡಿದೆ ಎಂದು ನನಗೆ ಗೊತ್ತಾಗಿದೆ. ನನ್ನ ಕ್ಷೇತ್ರ ಗಣಿ ಪ್ರದೇಶದಲ್ಲಿ

ಇರುತ್ತದೆ, ನನ್ನ ಪ್ರದೇಶದಲ್ಲಿರತಕ್ಕ ಮಂಡಲ್ ಪಂಚಾಯತ್ ಪ್ರಧಾನರುಗಳಿಗೆ ಮಿನರಲ್ ರೈಟ್ಸ್ ಟ್ಯಾಕ್ಸ್ ವಸೂಲು ಮಾಡುವುದಕ್ಕೆ ಸರಕಾರ ಅನುಮತಿ ಕೊಡುತ್ತಿಲ್ಲ, ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳಿ ಎಂದು ಹೇಳಿದರು. ನಾನು ಇದರ ಬಗ್ಗೆ ಕೇಳಿದಾಗ ಸರಕಾರದವರು, ಇದರ ಮೇಲೆ ಹೈಕೋರ್ಟಿನಲ್ಲಿ ಸ್ಟೇ ಇದೆ ಎಂದೂ, ಅದು ವೆಕೇಟ್ ಆಗಬೇಕೆಂದೂ ಹೇಳಿದರು. ಆದರೆ ಹೈಕೋರ್ಟ್ ಸ್ಟೇಗೂ ಇವರ ಉತ್ತರಕ್ಕೂ ಸಂಬಂಧ ಇಲ್ಲ ಎಂದು ಆಮೇಲೆ ನನಗೆ ಗೊತ್ತಾಯಿತು, ಆಮೇಲೆ ಈ ವಿಚಾರ ಮೂಲೆಗೆ ಸೇರಿಹೋಯಿತು. ಇವತ್ತು ಪುನಃ ಏತಕ್ಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ. ಈ ಮಿನರಲ್ ರೈಟ್ಸ್ ಟ್ಯಾಕ್ಸನ್ನು ಮಂಡಲ್ ಪಂಚಾಯತ್‌ಗಳಿಗೆ ಕೊಡುವುದರ ಬಗ್ಗೆ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಆಕ್ಟ್‌ನಲ್ಲಿ ಒಂದು ಪ್ರಾವಿಜನ್ ಏನು ಸೇರಿಸಿದ್ದೀರಿ, ಅದರ ಬಗ್ಗೆ ನೀವೇ ಸರಕಾರಕ್ಕೆ ಶಿಫಾರಸ್ಸು ಮಾಡಿ, ಈಕಾಯಿದೆ ಒಳಗಿರತಕ್ಕಂಥ ಕಾಲಮ್ಮನ್ನು ತೆಗೆಸಿಹಾಕಿಸಿದರೆ ಹೋದರೆ ಏನೂ ಇಲ್ಲ, ಒಂದು ಕಡೆ ನೀವೇ ಕಾನೂನು ಮಾಡುತ್ತೀರಿ, ಇನ್ನೊಂದು ಕಡೆ ನೀವೇ ಅದನ್ನು ಮುರಿಯುತ್ತೀರಿ, ಎರಡೂ ಕೆಲಸ ನೀವೇ ಮಾಡುತ್ತೀರಿ. ಇದು ಆಗಬಾರದು ಎಂದು ತಮ್ಮ ಮುಖಾಂತರ ಸರಕಾರದವರನ್ನು ಕೇಳಿಕೊಳ್ಳುತ್ತೇನೆ.

ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯಲ್ಲಿ ಅಂಡರ್‌ಗ್ರೌಂಡ್ ವಾಟರ್ ಡಿಪಾರ್ಟ್‌ಮೆಂಟ್ ಬಹಳ ಮುಖ್ಯವಾದುದು. ಇಡೀ ಜನಾಂಗದ ಮುಂದಿನ ಭವಿಷ್ಯವನ್ನು ನಿರ್ಣಯ ಮಾಡತಕ್ಕ ಇಲಾಖೆ ಇದಾಗಿದೆ. ಇದು ಬಹಳ ಪ್ರಾಮುಖ್ಯವಾದ ಇಲಾಖೆ ಎಂದು ನಾನಾದರೂ ಭಾವಿಸಿದ್ದೇನೆ. ನಮ್ಮಲ್ಲಿ ಹಲವಾರು ಸ್ಕೀಮ್ಸ್ ಇವೆ. ನೂರುಬಾವಿ ಯೋಜನೆ ಇದೆ, ವಿಶೇಷ ಘಟಕ ಯೋಜನೆಗೆ ಸೇರಿದ ಕಾರ್ಯಕ್ರಮಗಳು ಇವೆ. ಈ ಕಾರ್ಯಕ್ರಮಗಳೆಲ್ಲವಕ್ಕೂ ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್‌ನ ಅಂತರ್‌ಜಲ ವಿಭಾಗದವರು ಅಸಿಸ್ಟ್ ಮಾಡಬೇಕು, ಸರ್ವೆ ಮಾಡಬೇಕು, ಪಾಯಿಂಟ್ ತೋರಿಸಬೇಕು. ರಾಜ್ಯದಲ್ಲಿ ಯಾವ ಯಾವ ಭಾಗದಲ್ಲಿ ಅಂತರ್‌ಜಲ ಯಾವ ಮಟ್ಟದಲ್ಲಿದೆ ಏನು ಎಂಬ ಬಗ್ಗೆ ಬೇರೆ ಬೇರೆ ರೀತಿಯ ಸರ್ವೆಗಳನ್ನು ಮಾಡಿ ಸರಕಾರಕ್ಕೆ ಆಗಿಂದಾಗ್ಗೆ ವರದಿ ಸಲ್ಲಿಸ ಬೇಕಾಗುತ್ತದೆ. ಗೌರಿಬಿದನೂರು, ಶಿಡ್ಲಘಟ್ಟ ಮುಂತಾದ ಕೆಲವು ಪ್ರದೇಶಗಳಲ್ಲಿ ನೀರಿನ ಅಂದರೆ ಅಂತರ್‌ಜಲದ ಮಟ್ಟ ಕಡಿಮೆಯಾಗಿದೆ. ಕೆಳಕ್ಕೆ ಹೋಗಿದೆ ಎಂದು ತಾವು ತಮ್ಮ ವರದಿಯಲ್ಲಿ ಹೇಳಿದ್ದೀರಿ ಇದರ ಬಗ್ಗೆ ಸರ್ವೆ ಆಗಿದೆ ಈ ಜಿಯೋ ಫಿಸಿಕಲ್ ಸರ್ವೆ ಅಲ್ಲದೆ, ಅಡ್ವಾನ್ಸ್ ರೀತಿಯಲ್ಲಿ ಸೆಟಲೈಟ್ ಸರ್ವೆ ಮಾಡತಕ್ಕ ಪದ್ಧತಿಯೂ ನಮ್ಮ ದೇಶದಲ್ಲಿ ಜಾರಿಗೆ ಬಂದಿದೆ. ಸೆಟಲೈಟ್ ಮೂಲಕ ಅಂತರ್‌ಜಲದ ಮಟ್ಟ ಎಲ್ಲಿದೆ ಎಂದು ಹೇಳುವಷ್ಟು ಮಟ್ಟಕ್ಕೆ ನಾವು ಬಂದಿದ್ದೇವೆ. ಭೂಮಿಯಲ್ಲಿ ಎಲ್ಲಿ ನೀರಿನ ಮಟ್ಟ ಒಳಗಡೆ ತೀರಾ ಕಡಿಮೆಯಾಗುತ್ತಾ ಹೋಗುತ್ತಿದೆ ಆ ಪ್ರದೇಶಗಳಲ್ಲಿ ಪರ್ಕೊಲೇಷನ್ ಟ್ಯಾಂಕ್ಸ್ ನಿರ್ಮಾಣ ಮಾಡಿ, ಅಂತರ್‌ಜಲ ಮಟ್ಟವನ್ನು ಹೆಚ್ಚು ಮಾಡುವುದಕ್ಕೆ ಯೋಜನೆ ಹಾಕಿಕೊಂಡಿರುವುದಾಗಿ ತಾವು ಹೇಳಿದ್ದೀರಿ. ಆದರೆ ಆ ಯೋಜನೆಯನ್ನು ಕಾರ್ಯಗತ ಮಾಡುತ್ತಿದ್ದೀರಾ ಎಂಬ ಬಗ್ಗೆ ಅನುಮಾನ ಇದೆ. ಕರ್ನಾಟಕದಲ್ಲಿ ಅಂತರ್‌ಜಲ ಮಟ್ಟ ತೀರಾ ಕೆಳಕ್ಕೆ ಹೋಗಿದೆ ಎಂಬ ವಿಚಾರ ಪಾರ್ಲಿಮೆಂಟ್‌ನಲ್ಲೂ ಕೂಡಾ ಚರ್ಚೆ ಯಾಗಿದೆ ಎಂಬುದು ತಮಗೂ ಗೊತ್ತಿದೆ. ಕಳೆದ ಸೆಷನ್‌ನಲ್ಲಿ ಇದು ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಿದೆ. ಭೂಮಿಯ ಒಳಗಿನ ನೀರಿನ ಮಟ್ಟ ಕೆಳಗೆ ಹೋಗಿರತಕ್ಕಂಥ ರಾಜ್ಯಗಳಪಟ್ಟಿಯಲ್ಲಿ ಕರ್ನಾಟಕವೂ ಸೇರಿದೆ. ಕೆಲವು ಪ್ರದೇಶಗಳಲ್ಲಿ ಈ ಸಮಸ್ಯೆ ಇದೆ. ಅಂತಹ ಕಡೆ ಬೋರ್‌ವೆಲ್ ಹಾಕುವುದಕ್ಕಾಗೀ, ಬಾವಿಗಳನ್ನು ತೋಡುವುದಕ್ಕಾಗಲೀ ಸರಕಾರದ ಪರವಾನಗಿ ಬೇಕು ಸರಕಾರದ ಪರವಾನಗಿ ಇಲ್ಲದೆ ಅದನ್ನು ಮಾಡಬಾರದೆಂಬ ಒಂದು ಕಾನೂನನ್ನು ತೆಗೆದು ಕೊಂಡು ಬರುತ್ತೇವೆಂದು ತಾವು ಹೇಳಿದಿರಿ. ಈ ಮಾತನ್ನು ಹೇಳಿ ಆರು ತಿಂಗಳ ಮೇಲಾಗಿರಬೇಕು. ನಾನು ಪತ್ರಿಕೆಯಲ್ಲಿ ಓದಿದೆ, ಅದೇ ಮಾತನ್ನು ಈ ವರದಿಯಲ್ಲೂ ಹೇಳಿದ್ದೀರಿ. ಇದರಲ್ಲಿ ಒಂದೇ ಒಂದು ಪದ, ಆಕ್ಟೀವ್ ಕನ್ಸಿಡರೇಷನ್ ಎಂಬ ಶಬ್ಧ ಜಾಸ್ತಿ ಇದೆ ಮೊದಲು ಡಲ್ ಕನ್ಸಿಡರೇಷನ್‌ನಲ್ಲಿ ಇತ್ತು ಎಂದು ಕಾಣುತ್ತದೆ, ಈಗ ಆಕ್ಟೀವ್ ಕನ್ಸಿಡರೇಷನ್‌ನಲ್ಲಿ ಇರಬಹುದು ಇದನ್ನು ಎಷ್ಟು ದಿನಗಳ ಒಳಗೆ ಇಂಪ್ಲಿಮೆಂಟ್ ಮಾಡುತ್ತೀರಿ. ಒಂದು ವೇಳೆ ತಾವು ಈ ಕಾನೂನನ್ನು ತೆಗೆದುಕೊಂಡು ಬಂದರೆ ಕೆಲವು ಪ್ರದೇಶಗಳಲ್ಲಿ ಒಂದು ಬಾವಿ ತೆಗೆಯಬೇಕೆಂದರೆ ಒಂದು ಬೋರ್‌ವೆಲ್ ಹಾಕಬೇಕಾದರೆ ಸರಕಾರದ ಮಟ್ಟದವರೆಗೆ ಬಂದು ಪರವಾನಿಗೆ ಪಡೆಯಲು ಬೇಕಾಗುತ್ತದೆ. ಎಂದರೆ ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕಾಗಿದೆ. ಕಾನೂನು ತರುವುದಕ್ಕೆ ನಾನು ವಿರೋಧ ಮಾಡುತ್ತಿಲ್ಲ. ಕಾನೂನು ಬಂದಾಗ ಅದರ ಬಗ್ಗೆ

ಚರ್ಚೆ ಮಾಡೋಣ. ಅಂತರ್‌ಜಲ ಮಟ್ಟ ಕಡಿಮೆ ಇರುವ ಕಡೆ ಪರ್ಕೊಲೇಷನ್ ಟ್ಯಾಂಕ್ಸ್ ನಿರ್ಮಾಣ ಮಾಡಿ. ಅಂತರ್‌ಜಲ ಮಟ್ಟವನ್ನು ಹೆಚ್ಚಿಸಬೇಕೆಂಬ ಯೋಜನೆಗೆ ಹೆಚ್ಚು ಹಣವನ್ನು ಖರ್ಚು ಮಾಡಿ. ನಿಮ್ಮ ಇಲಾಖೆ ಸರಕಾರಕ್ಕೆ ಹೆಚ್ಚು ಕಂದಾಯವನ್ನು ಕೊಡತಕ್ಕ ದೊಡ್ಡ ಇಲಾಖೆ. ಜನರಿಂದ ಸರಕಾರಕ್ಕೆ ಹಣ ವಸೂಲು ಮಾಡಿಕೊಡುವುದಷ್ಟೇ ಕೆಲಸ ಆಗಬಾರದು. ಅವರ ಉಪಯೋಗ ಸಹ ಆಗಬೇಕು. ಈ ಅಂತರ್‌ಜಲದ ಬಗ್ಗೆ ಹೆಚ್ಚಿಗೆ ಏನನ್ನು ಹೇಳುವುದಕ್ಕೆ ಹೋಗದೆ ಗಣಿ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಹೇಳುತ್ತೇನೆ. ಹಿಂದೆ ಕೇಂದ್ರ ಸರ್ಕಾರದಿಂದ ಗ್ರ್ಯಾಂಟ್‌ನಿಂದ ಗಣಿಗಳ ಹತ್ತಿರವಿರುವ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ರೋಡ್ ಡೆವಲಪ್‌ಮೆಂಟ್ ಫಂಡ್ ಅಂತ ಅಥವಾ ರೋಡ್ ಡೆವಲಪ್‌ಮೆಂಟ್ ಸೆಸ್ ಎಂದು ಕೊಡುತ್ತಿದ್ದರು. ಈ ಗ್ರ್ಯಾಂಟ್‌ನ್ನು ಕೇಂದ್ರ ಸರ್ಕಾರದವರು ಕಳೆದ ವರ್ಷದಿಂದ ಕೊಡುತ್ತಿಲ್ಲವೆಂದು ಕೇಳಿದ್ದೇನೆ. ನಮ್ಮ ಪ್ರದೇಶದಲ್ಲಿರತಕ್ಕಂಥ ಗಣಿ ಪ್ರದೇಶಗಳಲ್ಲಿ ಬಹಳ ಸಮಸ್ಯೆಯಾಗಿದೆ. ಯಾವ ಗಣಿಗೆ ಹೋಗಬೇಕಾದರೂ ಸರಿಯಾದ ರಸ್ತೆಗಳು ಇಲ್ಲ. ಆದ್ದರಿಂದ ಈ ರಸ್ತೆಗಳನ್ನು ಅಭಿವೃದ್ಧಿಗೊಳಿಸಲು ಸರ್ಕಾರದವರು ಇದುವರೆವಿಗೂ ಯಾವುದೇ ಒಂದು ಪ್ರಾವಿಜನ್ ಸಹ ಮಾಡಿರುವುದಿಲ್ಲ. ತಮಗೆಲ್ಲಾ ಗೊತ್ತಿರುವ ಪ್ರಕಾರ ನಮ್ಮ ಬಳ್ಳಾರಿ ಜಿಲ್ಲೆಯಿಂದ ಒಂದು ವರ್ಷಕ್ಕೆ ನನಗೆ ಗೊತ್ತಿರುವ ಹಾಗೆ ೪-೫ ಕೋಟಿ ರೂಪಾಯಿಗಳ ರಾಜಸ್ವವನ್ನು ರಾಯಲ್ಟಿ ರೂಪದಲ್ಲಿ ಕೊಡುತ್ತಿದ್ದೇವೆ. ಈ ಹಣದಲ್ಲಿ ಶೇಕಡ ೨೫-೩೦ ಪರ್ಸೆಂಟ್ ಹಣವನ್ನು ಈ ಗಣಿ ಪ್ರದೇಶದಲ್ಲಿರುವ ರಸ್ತೆಗಳ ರಿಪೇರಿ ಮಾಡುವ ಸಲುವಾಗಿ ನಿಗದಿ ಮಾಡಿ ಎಂದು ನಾನು ಕಳೆದ ವರ್ಷ ಮಾನ್ಯ ದೇಶ್‌ಮುಖ್ ರವರಿದ್ದಾಗಲೇ ಕೇಳಿದೆ ಆಗ ಅವರು ಈಗ ಆಗುವುದಿಲ್ಲವೆಂದು ಹೇಳಿದರು ಮುಂದೆ ಕನ್ಸಿಡರ್ ಮಾಡೋಣವೆಂದು ಹೇಳಿದರು. ಈಗಲೂ ನಾನು ಕೇಳಿಕೊಳ್ಳುತ್ತೇನೆ ಯಾವ ಯಾವ ಗಣಿ ಪ್ರದೇಶದ ರಸ್ತೆಗಳು ಇವೆಯೋ ಆ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಒಂದಿಷ್ಟು ಹಣ ಖರ್ಚು ಮಾಡ ಬೇಕು. ತಮಗೆ ಗೊತ್ತಿರಬಹುದು. ಮಾನ್ಯ ಅಧ್ಯಕ್ಷರೇ ಸಾಮಾನ್ಯವಾಗಿ ರಾಜ್ಯದಲ್ಲಿ ನಡೆಯುತಕ್ಕಂಥ ಆಕ್ಸಿಡೆಂಟ್‌ಗಳಲ್ಲಿ ನಮ್ಮ ಸಂಡೂರು ತಾಲ್ಲೂಕನ್ನು ತುಲನೆ ಮಾಡಿ ನೋಡಿದರೆ ಆ ತಾಲ್ಲೂಕಿನಲ್ಲಿಯೇ ಆಕ್ಸಿಡೆಂಟ್ಸ್ ಜಾಸ್ತಿಯಾಗಿವೆ ಎಂದು ಹೇಳಬಹುದು. ಅಲ್ಲಿ ಗಣಿ ಪ್ರದೇಶಕ್ಕೆ ಹೋಗಲು ಸರಿಯಾದ ರಸ್ತೆಗಳು ಇಲ್ಲ ಗಣಿ ಪ್ರದೇಶಕ್ಕೆ ಹೋಗಲು ಸರಿಯಾದ ರಸ್ತೆಗಳನ್ನು ಮಾಡಿಕೊಡಬೇಕೆಂದು ನಾನು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಇನ್ನು ಯುವಜನ ಮತ್ತು ಕ್ರೀಡಾ ಇಲಾಖೆಗಳ ಬಗ್ಗೆ ಪ್ರಸ್ತಾಪ ಮಾಡುವುದಾದರೆ ನಮ್ಮ ದೇಶದಲ್ಲಿ ದುರಾದೃಷ್ಟವಶಾತ್ ಈ ಕ್ರೀಡಾ ಇಲಾಖೆಯನ್ನು ಒಂದು ಪ್ರತ್ಯೇಕ ಇಲಾಖೆ ಎಂದು ಇದುವರೆವಿಗೂ ಕೇಂದ್ರ ಸರ್ಕಾರಗಳು ಪರಿಗಣಿಸಿಲ್ಲ. ರಾಜ್ಯ ಸರಕಾರಗಳು ಪರಿಗಣಿಸಿಲ್ಲ ಈ ಕ್ರೀಡಾ ಇಲಾಖೆ ಯನ್ನು ಯುವಜನ ಇಲಾಖೆ ಜೊತೆಗೂ ಅಥವಾ ಬೇರೆ ಯಾವುದಾದರೊಂದು ಇಲಾಖೆಗೆ ಜೋಡಿಸಿ ಕೆಲಸ ಮಾಡಿ ಎಂದು ಹೇಳುತ್ತಾರೆ. ಈ ಇಲಾಖೆಗೆ ಸರಿಯಾದ ಹಣಕಾಸು ಸಹ ಒದಗಿಸಿಕೊಡುವುದಿಲ್ಲ ನಮಗೆ ಸ್ವತಂತ್ರ್ಯ ಬಂದು ಸುಮಾರು ನಲವತ್ತು ವರ್ಷಗಳಾದರೂ ಸಹ ತಾಲ್ಲೂಕಿಗೆ ಒಂದು ಕ್ರೀಡಾ ಮೈದಾನವನ್ನು ಒದಗಿಸಿಕೊಡಲು ಆಗಲಿಲ್ಲ. ಸುಮಾರು ನಲವತ್ತು ವರ್ಷಗಳೇ ಕಳೆದು ಹೋದವು, ಕೇಂದ್ರ ಸರ್ಕಾರವೇ ಆಗಲಿ, ರಾಜ್ಯ ಸರ್ಕಾರಗಳೇ ಆಗಲಿ ತಾಲ್ಲೂಕಿಗೊಂದು ಕ್ರೀಡಾ ಮೈದಾನವನ್ನು ಕೊಡಲಾಗಿಲ. ಇದು ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ ಬೇರೆ ಬೇರೆ ರಾಜ್ಯಗಳಲ್ಲೂ ಸಹ ಇಲ್ಲವೆಂದು ನನಗನಿಸುತ್ತದೆ. ಈ ಕೆಲಸ ಇನ್ ಜನರಲ್ ಎಲ್ಲೂ ಆಗಿಲ್ಲ. ಮನುಷ್ಯನ ಜೀವನದಲ್ಲಿ ಕ್ರೀಡೆ ಬಹಳ ಅಗತ್ಯವಾಗಿ ಬೇಕಾಗಿದೆ, ಮನುಷ್ಯ ಆರೋಗ್ಯವಂತನಾಗಿ ಇರಬೇಕಾದರೆ ತಾನು ಮಾಡತಕ್ಕಂಥ ಊಟ ಸರಿಯಾಗಿ ಜೀರ್ಣವಾಗಿ ರಕ್ತ ಚಲನೆ ಸರಿಯಾಗಿ ಆಗಬೇಕಾದರೆ ನಾನಾ ರೀತಿಯ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಬೇಕಾದುದು ಅಗತ್ಯ ಇಂತ ಪರಿಸ್ಥಿತಿಯಲ್ಲಿ ತಾವು ಗ್ರಾಮಾಂತರ ಪ್ರದೇಶಗಳಿಗೆ ಮುಖ್ಯವಾಗಿ ಕೊಡತಕ್ಕಂಥ ಹಣ ಏನಿದೆ ಇದನ್ನು ಹೆಚ್ಚು ಮಾಡಬೇಕು ಈ ಬಗ್ಗೆ ನಮ್ಮ ಆಪಾದನೆ ಏನಿದೆ ಎಂದರೆ ಈ ಯುವಜನ ಮತ್ತು ಕ್ರೀಡಾ ಇಲಾಖೆಗಳಿಗೆ ಕೊಟ್ಟಂತಹ ಕೋಟ್ಯಾಂತರ ರೂಪಾಯಿಗಳ ಹಣದಲ್ಲಿ ಶೇಕಡ ೬೦ರಷ್ಟು ನಗರ ಪ್ರದೇಶ ಗಳಲ್ಲಿ ಮಾತ್ರ ಖರ್ಚಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಖರ್ಚಾಗುವುದಿಲ್ಲ, ಇದರ ಜೊತೆಗೆ ಸರ್ಕಾರ ಒಂದು ಯೋಜನೆ ಮಾಡಿದೆ. ಅದೇನೆಂದರೆ ಗ್ರಾಮಾಂತರ ಪ್ರದೇಶಗಳ ಕ್ರೀಡಾ ಚಟುವಟಿಕೆ ಗಳೆಂದು ತಮ್ಮ ತಾಲ್ಲೂಕಿನಲ್ಲೂ ಮಾಡಿರಬಹುದು ಅಧ್ಯಕ್ಷರೇ, ಅಲ್ಲಿ ಯುವಜನ ಮತ್ತು ಕ್ರೀಡಾ ಇಲಾಖೆಗೆ ಸಂಬಂಧ ಪಟ್ಟ ಒಬ್ಬ ಆಫೀಸರ್ ಅಲ್ಲಿರುತ್ತಾರೆ ಆತ ಅಲ್ಲಿ ತಾಲ್ಲೂಕು ಲೆವೆಲ್ ಆಫೀಸರ್

ಆತನಿಗೆ ಒಂದು ನಯಾಪೈಸೆ ಕೆಲಸವಿರುವುದಿಲ್ಲ, ಅಲ್ಲಿರುವಂತಹವರೆಲ್ಲರೂ ಮುದುಕರು, ವಯಸ್ಸಾಗಿರತಕ್ಕಂಥವರು ಅವರಿಗೆ ಕ್ರೀಡೆಗಳ ಬಗ್ಗೆ ಆಸಕ್ತಿಯೇ ಇರುವುದಿಲ್ಲ. ಇಂತಹ ಯೂತ್ ಆಫೀಸರ್ಸ್ ಅಲ್ಲಿರುತ್ತಾರೆ, ಅವರು ಒಂದು ಟೂರ್ನಮೆಂಟ್ ಕಂಡೆಕ್ಟ್ ಮಾಡುತ್ತಾರೆ. ಯಾರೋ ತಮಗೆ ಬೇಕಾದವರನ್ನು ಸೇರಿಸಿಕೊಂಡು ಮಾಡಿದೆವು ಎಂದು ಹೇಳುತ್ತಾರೆ ಅಲ್ಲಿ ಟೂರ್ನಮೆಂಟ್ ಮಾಡಿರುವುದೇ ಇಲ್ಲ ತಾವು ಕೊಡತಕ್ಕಂಥ ಎರಡು ಮೂರು ಸಾವಿರ ರೂಪಾಯಿಗಳಲ್ಲಿ ಅವನಿಗಷ್ಟು ಇವನಿಗಷ್ಟು ಎಂದು ಹಂಚಿಕೊಳ್ಳುತ್ತಾರೆ ಮತ್ತೊಂದು ಕಡೆ ಏನು ಮಾಡುತ್ತಾರೆಂದರೆ ಯಾವುದೋ ಒಂದು ಆರ್ಗನೈಜೇಷನ್ ತೆಗೆದುಕೊಂಡು ಅವರ [illegible] ಪ್ರೋಗ್ರಾಂ ಕಂಡೆಕ್ಟ್ ಮಾಡಿದ್ದೇವೆಂದು ಬೋಗಸ್ ಮಾಡಿಸಿಕೊಂಡು ಅವರಿಗಷ್ಟು ಇವರಿಗಷ್ಟು ಹಂಚಿಕೊಳ್ಳುವುದು ಇದು ಬಿಟ್ಟರೆ ಬೇರೇನು ಕೆಲಸವಾಗುತ್ತಿಲ್ಲ. ಆದ್ದರಿಂದ ನಾನು ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಬಗ್ಗೆ ತಾವು ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಿ ತಾಲ್ಲೂಕಿಗೊಂದು ಮೈದಾನ ಕೊಟ್ಟು ಅಲ್ಲಿರತಕ್ಕಂಥ ಯುವಕರಿಗೆ ಕ್ರೀಡಾ ಚಟುವಟಿಕೆಗಳಿಗೆ ಅನುಕೂಲ ಮಾಡಿಕೊಡಬೇಕು ಮತ್ತು ಜಿಮ್ನಾಜಿಯಂ ಮನೆ ಕೊಡಬೇಕು, ಅಲ್ಲಿರತಕ್ಕಂಥ ಯಾವುದಾದರೂ ಒಂದು ಆರ್ಗನೈಜೇಶನ್‌ಗೆ ವಹಿಸಿ ಅವರಿಗೊಂದು ೧೦ ಸಾವಿರ ರೂಪಾಯಿ ಸಹಾಯ ಮಾಡಿದರೆ ಅವರೇ ಆ ಜಿಮ್ನಾಜಿಯಂ ನೋಡಿಕೊಳ್ಳುತ್ತಾರೆ ಈ ರೀತಿ ಹೋಬಳಿಗೊಂದು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ತಾಲ್ಲೂಕು ಕೇಂದ್ರದಲ್ಲಿರತಕ್ಕಂಥ ಯೂತ್ ಆಫೀಸರ್ಸ್ ಜೊತೆಗೆ ಇಬ್ಬರು ಅಸಿಸ್ಟೆಂಟ್ಸ್ ಕೊಡಬೇಕು ಆಗ ಅವರು ಕ್ರೀಡೆಗಳನ್ನು ನಡೆಸಿಕೊಂಡು ಹೋಗಲು ಸಾಧ್ಯವಾಗುತ್ತದೆ ಮತ್ತು ಹೋಬಳಿಗೊಂದು ವ್ಯಾಯಾಮ ಶಾಲೆಗಳನ್ನು ಸರ್ಕಾರದವರು ಕಟ್ಟಿಸಿಕೊಡಬೇಕು ಅವರಿಗೆ ೪೦-೫೦ ಅಡಿ ಮನೆ ಕಟ್ಟಿಸಿಕೊಟ್ಟರೆ ಮತ್ತು ಒಂದು ಅಥವಾ ಎರಡು ಸಾವಿರ ರೂಪಾಯಿ ಸಹಾಯಧನ ಕೊಟ್ಟರೆ ಅಲ್ಲಿರತಕ್ಕಂಥ ಯಾವುದಾದರೊಂದು ಖಾಸಗಿ ಆರ್ಗನೈಜೇಶನ್‌ಗೆ ವಹಿಸಿ ತಿಂಗಳಿಗೆ ನೂರು ಇನ್ನೂರು ರೂಪಾಯಿಗಳನ್ನು ಕೊಟ್ಟರೆ ಅವರೇ ನಡೆಸಿಕೊಂಡು ಹೋಗುತ್ತಾರೆ. ಈ ರೀತಿ ಮಾಡಿದಾಗ ಮಾತ್ರ ಯುವಜನ ಮತ್ತು ಕ್ರೀಡಾ ಇಲಾಖೆ ಮೇಲೆ ಜನರಿಗೆ ನಂಬಿಕೆ ಬರುತ್ತದೆ. ಇಲ್ಲದೇ ಹೋದರೆ, ಈ ಇಲಾಖೆ ಬಗ್ಗೆ ಮತ್ತು ಈ ಬೇಡಿಕೆ ಈ ಮನೆಯಲ್ಲಿ ಬಂದಾಗ ಮಾತ್ರ ಗೊತ್ತಾಗುತ್ತದೆ ಎಲ್ಲರೂ ಇನ್‌ಫ್ಲುಯೆನ್ಸ್ ತೆಗೆದುಕೊಂಡು ಬಂದು ಕ್ರೀಡೆಗಳಲ್ಲಿ ಭಾಗವಹಿಸುವುದಕ್ಕಾಗುವುದಿಲ್ಲ, ನಿಜವಾಗಿ ಟ್ಯಾಲೆಂಟ್ ಇರುವವರಿಗೆ ಇನ್‌ಫ್ಲುಯೆನ್ಸ್ ಇಲ್ಲದೆ ಅವರು ಕ್ರೀಡೆಗಳಲ್ಲಿ ಭಾಗವಹಿಸುವುದಕ್ಕೆ ಆಗದ ರೀತಿಯಲ್ಲಿ ಪರಿಸ್ಥಿತಿ ನಿರ್ಮಾಣವಾಗಿದೆ. ಹಳ್ಳಿಗಾಡು ಪ್ರದೇಶಗಳಲ್ಲಿರತಕ್ಕ ಹುಡುಗರಿಗೆ ಹೆಚ್ಚಿನ ಪ್ರೋತ್ಸಾಹವನ್ನು ಸರ್ಕಾರ ಕೊಡಬೇಕು. ನಾನು ಏಷ್ಯಾಡ್‌ಗೆ ಹೋಗಿದ್ದೆ. ರಾಜ್ಯ ಸರ್ಕಾರವೇ ನನ್ನನ್ನು ಅಲ್ಲಿಗೆ ಕಳುಹಿಸಿಕೊಟ್ಟಿತ್ತು ಅಲ್ಲಿ ನಮ್ಮ ಕ್ರೀಡಾಪಟುಗಳನ್ನು ನೋಡಿದಾಗ ನಮಗೆ ನಾಚಿಕೆ ಆಯಿತು.

ಶ್ರೀ ಎಂ.ಎಸ್. ಪಾಟೀಲ್.—ಇವರನ್ನು ನೋಡಿ ಅಲ್ಲಿರುವವರು ನಾಚಿಕೊಂಡರೋ ಹೇಗೆ ?

ಶ್ರೀ ಯು. ಭೂಪತಿ.—ನಾನು ನೋಡಿದ ವಿಚಾರವನ್ನು ಹೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಎಂ.ಎಸ್. ಪಾಟೀಲರನ್ನು ಕಳುಹಿಸಲಿಲ್ಲವೆಂದು ಅವರು ಆ ರೀತಿ ಹೇಳುತ್ತಿದ್ದಾರೆ.

ಶ್ರೀ ಪಂಪಾಪತಿ.—ಅವರನ್ನು ಕಳುಹಿಸಿದ್ದರೆ ಚೆನ್ನಾಗಿರುತ್ತಿತ್ತು. ಒಳ್ಳೇ ಪೈಲ್ವಾನ್ ತರಹ ಇದ್ದಾರೆ.

ಶ್ರೀ ಯು. ಭೂಪತಿ.—ಅಲ್ಲಿಗೆ ಪಂಜಾಬಿನಿಂದ ಸೈಕ್ಲಿಂಗ್ ಸ್ಪರ್ಧೆಗೆ ಕೆಲವರು ಬಂದಿದ್ದರು. ನಾನು ಬಿಜಾಪುರದ ಕಡೆಯ ಹುಡುಗರು ಸೈಕ್ಲಿಂಗ್ ಮಾಡುವುದನ್ನು ನೋಡಿದ್ದೇನೆ. ಮಾನ್ಯ ಅಧ್ಯಕ್ಷರೇ, ಅವರುಗಳಿಗೆ ಯಾರೂ ಟ್ರೈನಿಂಗ್ ಕೊಟ್ಟಿಲ್ಲ. ಸ್ವತಃ ಅವರು ಸೈಕಲ್‌ನ್ನು ಕಲಿತಿರುತ್ತಾರೆ. ಬಿಜಾಪುರದ ಹುಡುಗರನ್ನು ಸೈಕ್ಲಿಂಗ್ ಸ್ಪರ್ಧೆಯಲ್ಲಿ ಯಾರು ಮೀರಿಸುವುದಕ್ಕೆ ಆಗುವುದಿಲ್ಲ. ದುರದೃಷ್ಟವಶಾತ್ ಬಿಜಾಪುರದ ಹುಡುಗರು ರಾಜ್ಯ ಮಟ್ಟದ, ರಾಷ್ಟ್ರಮಟ್ಟದ ಮತ್ತು ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಸೆಲೆಕ್ಟ್ ಆಗುವುದಕ್ಕೆ ಸಾಧ್ಯವಿಲ್ಲ ಏಕೆಂದರೆ ಅವರಿಗೆ ರಾಜಕೀಯ ಪ್ರಭಾವ ಇರುವುದಿಲ್ಲ. ಈ ವಿಷಯ ಮಾನ್ಯ ಮಂತ್ರಿಯವರಿಗೂ ಗೊತ್ತಿದೆ ಮಾನ್ಯ ಮಂತ್ರಿಯವರೂ ಸಹ ಆ ಕಡೆಯವರೇ ಆಗಿರುವುದರಿಂದ ಅವರಿಗೆ ಚೆನ್ನಾಗಿ ಇದು ಗೊತ್ತಿದೆ. ನಮ್ಮ ರಾಜ್ಯದಲ್ಲಿ ಮೊದಲಿನಿಂದಲೂ ಗ್ರಾಮಾಂತರ ಪ್ರದೇಶಗಳ ಹುಡುಗರಿಗೆ ಕ್ರೀಡೆಗಳಲ್ಲಿ ಪ್ರೋತ್ಸಾಹವನ್ನು ಸರ್ಕಾರ ಕೊಡುತ್ತಿಲ್ಲ

ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಪ್ರತಿಭಾವಂತ ಯುವಕರನ್ನು ಗುರುತಿಸಿ ಅವರಿಗೆ ಸರಿಯಾದ ತರಬೇತಿಯನ್ನು ಕೊಡುವುದು ಬಹಳ ಮುಖ್ಯ. ಪಟ್ಟಣ ಪ್ರದೇಶಗಳಲ್ಲಿರುವ ಯುವಕರಿಗೆ ಮಾತ್ರ ಕ್ರಿಕೇಟ್, ಫುಟ್‌ಬಾಲ್, ವಾಲಿಬಾಲ್ ಏಕೆ ಕಲಿಸುತ್ತೀರಿ ? ಗ್ರಾಮಾಂತರ ಪ್ರದೇಶಗಳಲ್ಲಿರುವ ಯುವಕರಿಗೂ ಕ್ರಿಕೇಟ್, ಫುಟ್‌ಬಾಲ್, ವಾಲಿಬಾಲ್‌ಗಳ ಕ್ರೀಡೆಗಳನ್ನು ಏಕೆ ಕಲಿಸುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ ? ಗ್ರಾಮಾಂತರ ಪ್ರದೇಶಗಳಲ್ಲಿರುವ ಯುವಕರಿಗೂ ಎಲ್ಲ ಬಗೆಯ ಕ್ರೀಡೆಗಳನ್ನು ಕಲಿಸಿ ಕೊಡುವುದಕ್ಕೆ ಸರ್ಕಾರ ಪ್ರೋತ್ಸಾಹ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆಮೇಲೆ, ವೈಮಾನಿಕ ತರಬೇತಿಯನ್ನು ಸರ್ಕಾರ ಏನು ಕೊಡುತ್ತಿದೆಯೋ ಅದರ ಬಗ್ಗೆ ಹೆಚ್ಚು ಪ್ರಚಾರ ಇಲ್ಲ. ಬೆಂಗಳೂರಿನ ಸುತ್ತಮುತ್ತಲಿರುವ ಜನರಿಗೆ ಮಾತ್ರ ಅದರ ಬಗ್ಗೆ ಗೊತ್ತಿದೆಯೋ ಹೊರತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಯುವಕರಿಗೆ ಅದರ ಬಗ್ಗೆ ಮಾಹಿತಿ ಇಲ್ಲ. ಇದರ ಬಗ್ಗೆ ಹೆಚ್ಚು ಪ್ರಚಾರ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆಮೇಲೆ, ಎನ್.ಸಿ.ಸಿ., ಇದು ರಾಜ್ಯದಲ್ಲಿ ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ಸ್ಕೌಟ್ ಅಂಡ್ ಗೈಡ್ಸ್ ಬಹಳ ಉತ್ತಮವಾಗಿ ಶಿಸ್ತಿನಿಂದ ಕೆಲಸ ಮಾಡಿಕೊಂಡು ಬರುತ್ತಿವೆ. ಇವುಗಳಿಗೆ ಸರ್ಕಾರ ಕೊಡುವ ಗ್ರ್ಯಾಂಟ್‌ನ್ನು ಯಾವುದೇ ಕಾರಣಕ್ಕೂ ಕಡಿಮೆ ಮಾಡದೇ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಸೇವಾದಳ ಕೂಡ ನಮ್ಮ ರಾಜ್ಯದಲ್ಲಿ ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ಕೆಲವು ದಿವಸಗಳ ಹಿಂದೆ ಸೇವಾದಳದವರು ಹೊಸಪೇಟೆಯಲ್ಲಿ ಒಂದು ಸಮ್ಮೇಳನವನ್ನು ಮಾಡಿದ್ದರು. ಆ ಸಮ್ಮೇಳನದಲ್ಲಿ, ನಮ್ಮ ಸಂಸ್ಥೆಗೆ ಸರ್ಕಾರ ಸರಿಯಾಗಿ ಅನುದಾನ ಕೊಡುತ್ತಿಲ್ಲವೆಂದು ಹೇಳುತ್ತಿದ್ದರು. ಈ ಸೇವಾದಳದಲ್ಲಿ ೫೦ ವರ್ಷದವರು ೬೦ ವರ್ಷದವರು ೭೦ ವರ್ಷದವರೆಲ್ಲಾ ಬಹಳ ಉತ್ಸಾಹದಿಂದ ಭಾಗವಹಿಸಿದ್ದರು. ಅವರು ಅಷ್ಟು ಉತ್ಸಾಹದಿಂದ ಭಾಗವಹಿಸಿರುವುದನ್ನು ನೋಡಿ ಅವರಿಗೆ ಸಹಾಯ ಮಾಡಬೇಕೆಂದು ನನಗೆ ಅನಿಸಿತು. ಆದರೆ, ನಮ್ಮ ಕೈಯಲ್ಲಿ ಏನೂ ಸಹಾಯ ಮಾಡುವುದಕ್ಕಾಗುವುದಿಲ್ಲ. ನಾವು ನಿಮ್ಮನ್ನೇ ಅದರ ಬಗ್ಗೆ ಸಹಾಯ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಇದನ್ನು ಮಾನ್ಯ ಮಂತ್ರಿಯವರು ಗಮನದಲ್ಲಿಟ್ಟುಕೊಂಡು ಸೇವಾದಳಗಳಿಗೆ ಸಹಾಯ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಸಭಾಧ್ಯಕ್ಷರೇ, ನಾನು ಇವತ್ತಿನ ದಿವಸ ಮೈನ್ಸ್ ಅಂಡ್ ಜಿಯಾಲಜಿ ಬಗ್ಗೆ ಮಾತನಾಡದೇ ಕೇವಲ ಯುವ ಜನ ಸೇವಾ ಕಾರ್ಯ ಹೇಗೆ ನಡೆದಿದೆ ಮತ್ತು ಸರ್ಕಾರ ಎಷ್ಟರಮಟ್ಟಿಗೆ ಈ ಬಗ್ಗೆ ಆಸ್ಥೆ ವಹಿಸಿದೆ ಎಂಬ ಬಗ್ಗೆ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಈ ಇಲಾಖೆಯ ಮಾನ್ಯ ಮಂತ್ರಿಯವರು ಹೊಸದಾಗಿ ಈ ಖಾತೆಯನ್ನು ತೆಗೆದುಕೊಂಡಿರುವುದರಿಂದ ಅದರ ಬಗ್ಗೆ ನಾನು ಏನೂ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಆದರೆ ಮಾನ್ಯ ಮುಖ್ಯ ಮಂತ್ರಿಯವರು ಈ ಖಾತೆಯನ್ನು ಇವರಿಗೆ ವಹಿಸಿಕೊಡುವಾಗ ಸ್ವಲ್ಪ ಹೆಚ್ಚು ಹಣವನ್ನು ವಿಾಸಲಾಗಿರಿಸಿದ್ದಿದ್ದರೆ ಸ್ವಲ್ಪ ನೆಟ್ಟಗಾಗುತ್ತಿತ್ತು. ಇವತ್ತು ವಿಚಾರ ಮಾಡೋಣ. ಕರ್ನಾಟಕದಲ್ಲಿ ಸುಮಾರು ನಾಲ್ಕೂವರೆ ಕೋಟಿ ಜನಸಂಖ್ಯೆ ಇದೆ. ಈ ಜನಸಂಖ್ಯೆಯಲ್ಲಿ ಸುಮಾರು ಎರಡು ಕೋಟಿಗಳಷ್ಟು ಜನರು ಯುವಕರಿದ್ದಾರೆ. ಇಷ್ಟು ಸಂಖ್ಯೆಯಲ್ಲಿರತಕ್ಕಂಥ ಯುವಜನರ ಬಗ್ಗೆ, ಅವರ ಕಲ್ಯಾಣದ ಬಗ್ಗೆ ನಿಮ್ಮ ಜನತಾ ಸರ್ಕಾರದವರು ತೆಗೆದಿಟ್ಟಂಥ ಹಣ ಎಷ್ಟಿದೆ ಅಂದರೆ, ನೀವು ನಮಗೆ ಒದಗಿಸಿದ ಪುಸ್ತಕದಲ್ಲಿ ಮೂರನೇ ಪೇಜ್‌ನ್ನು ನೋಡಿದಾಗ ಪ್ಲಾನ್ ಮತ್ತು ನಾನ್ ಪ್ಲಾನಿಗೆ ಎಷ್ಟು ಹಣ ಒದಗಿಸಿದ್ದೀರಿ ಎಂದು ತಿಳಿಯುತ್ತದೆ. ಇದರ ಪ್ರಕಾರ ನೀವು ಒದಗಿಸಿರುವ ಹಣವನ್ನು ಲೆಕ್ಕ ಹಾಕಿದರೆ ಸುಮಾರು ೫೦ ಪೈಸೆಯಷ್ಟು ಕೂಡ ತಲಾವಾರು ಬೀಳುವುದಿಲ್ಲ. ಹೀಗೆ, ಈ ರೀತಿಯಲ್ಲಿ ಹಣವನ್ನು ಒದಗಿಸಿದ್ದಾದಲ್ಲಿ, ಯಾರನ್ನೂ ಕೂಡ ಈ ಕ್ರೀಡಾ ವಿಚಾರದಲ್ಲಿ ಟ್ರೈನಿಂಗ್ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಬಹುದು. ನಾನು ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ, ನಿಮಗೆ ನಿಜವಾಗಿ ಈ ಯುವಜನರ ಬಗ್ಗೆ, ಹಾಗೂ ಕ್ರೀಡೆಗಳ ಬಗ್ಗೆ ಆಸ್ಥೆ ಇದ್ದಿದ್ದರೆ ಹೀಗೆ ಮಾಡುತ್ತಿದ್ದೀರಾ? ನೀವು ಇಲಾಖೆಯ ಅಧಿಕಾರಿಗಳನ್ನು ಟ್ರೈನಿಂಗ್ ಸಲುವಾಗಿ ಕಳುಹಿಸುತ್ತಿರುತ್ತೀರಿ. ಅವರು ಸಾಮಾನ್ಯವಾಗಿ ವಯಸ್ಸಾದವರು ಇರುತ್ತಾರೆ. ಅವರು ಟ್ರೈನಿಂಗ್ ಪಡೆದು ಬಂದಮೇಲೆ ರಿಟೈರ್ಡ್ ಆಗುತ್ತಾರೆ. ಅವರಿಂದ ಯಾವ ಪ್ರಯೋಜನ ಪಡೆದ ಹಾಗೆ ಆಗುತ್ತದೆ ? ಹಣವನ್ನು ಖರ್ಚು ಮಾಡಿದರೂ ಕೂಡ ಅದರಿಂದ ಪ್ರಯೋಜನ ಇಲ್ಲದ ಹಾಗೆ ಆಗುತ್ತದೆ. ಇಂತಹ ಟ್ರೈನಿಂಗ್ ಕೊಟ್ಟಮೇಲೆ ಅದರಿಂದ ಸದುಪಯೋಗ ಆಗಬೇಕು. ಆದುದರಿಂದ ಇನ್ನು ಮುಂದೆ ಇಂತಹ ರೀತಿಯಲ್ಲಿ

ಆಗದ ಹಾಗೆ ನಿಗಾವಹಿಸಬೇಕು. ವಯಸ್ಸಾದವರನ್ನು ಇನ್ನು ಮುಂದೆ ಕೆಲವು ವರ್ಷಗಳ ಕಾಲ ಕಳುಹಿಸುವುದಿಲ್ಲ ಎಂದು ಒಂದು ನಿರ್ಣಯಕ್ಕೆ ಬರಬೇಕು. ಹೀಗೆ ನಿಮಗೆ ಯುವ ಜನರ ಕಲ್ಯಾಣಕ್ಕಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ ಅಂದರೆ ಇಂತಹ ಒಂದು ಇಲಾಖೆಯಾದರೂ ಏತಕ್ಕಾಗಿ ಬೇಕು. ಪ್ರತ್ಯೇಕವಾಗಿ ಅದಕ್ಕಾಗಿ ಒಂದು ಇಲಾಖೆಯನ್ನು ಏತಕ್ಕೆ ರಚನೆ ಮಾಡಿದ್ದೀರಿ. ಸೆಕ್ರೆಟರಿ ಜಾಯಿಂಟ್ ಸೆಕ್ರೆಟರಿ, ಅಂಡರ್ ಸೆಕ್ರೆಟರಿ, ಎಂಬುದಾಗಿ ಎಲ್ಲಾ ರೀತಿಯ ಸಿಬ್ಬಂದಿ ವರ್ಗವನ್ನು ರಚನೆ ಮಾಡಿಕೊಂಡಿದ್ದೀರಿ. ಅದಕ್ಕಾಗಿ ಮಂತ್ರಿಯವರು ಕೂಡಾ ಇದ್ದಾರೆ. ಆದರೆ ಸಾಧಿಸುವ ಕಾರ್ಯಗಳು ಏನು ಎಂದು ನೋಡುವುದಿಲ್ಲ. ಇಲಾಖೆಯ ಅಧಿಕಾರಿ ಮಾತ್ರವಲ್ಲದೇ ಡಿ.ಸಿ.ಯವರ ಶಿಫಾರಸ್ಸು ಕೂಡ ಬೇಕಾಗುತ್ತದೆ. ಹೀಗೆ ಒಂದು ಕೆಲಸ ಈ ಇಲಾಖೆಯಲ್ಲಿ ಆಗಬೇಕಾದರೆ ಡಿ.ಸಿ.ಯವರ ಶಿಫಾರಸ್ಸಿಗೆ ಕಳುಹಿಸಬೇಕಾಗುತ್ತದೆ. ಅಲ್ಲಿಂದ ಅದು ಶಿಫಾರಸ್ಸು ಆಗಿ ಬರಬೇಕಾದರೆ, ಒಬ್ಬ ಎಂ.ಎಲ್.ಎ ಯ ಕಾಲಾವಧಿಯು ಮುಗಿದು ಹೋಗುವಂಥ ಸಂದರ್ಭಗಳು ಹೆಚ್ಚು. ಆ ಎಂ.ಎಲ್.ಎ ಯವರು ಹೋದ ನಂತರ ಅವರು ಕಳುಹಿಸಿದ ಬಗ್ಗೆ ಶಿಫಾರಸ್ಸು ಬರುವಂಥ ಪರಿಸ್ಥಿತಿ ಇದೆ. ಇಂಥ ಒಂದು ಪರಿಸ್ಥಿತಿಯು ಹೋಗದಿದ್ದರೆ ನಿಮ್ಮಿಂದ ಯಾವುದೇ ತರಹದ ಕೆಲಸವನ್ನು ನಾವು ಅಪೇಕ್ಷೆ ಮಾಡುವಂತಿಲ್ಲ ಎಂದು ಹೇಳಬೇಕಾಗುತ್ತದೆ.

ಇನ್ನು ಸರಕಾರದವರು ಯಾವಾಗಲೂ ನಮಗೆ ಕೇಂದ್ರ ಸರಕಾರದವರು ಸಹಾಯ ಮಾಡುತ್ತಿಲ್ಲ ಎಂದು ಹೇಳುತ್ತಿರುತ್ತಾರೆ. ದೇಶದಲ್ಲಿನ ಯುವ ಜನರ ಕಲ್ಯಾಣಕ್ಕಾಗಿ ಯುವಕರೇ ಆದಂಥ ನಮ್ಮ ಪ್ರಧಾನಿಯವರು ಹೇರಳವಾಗಿ ಹಣವನ್ನು ಕೊಡುವುದಕ್ಕೆ ತಯಾರಾಗಿದ್ದಾರೆ. ನಮ್ಮವರೇ ಆದಂಥ ಕೇಂದ್ರ ಯುವಜನ ಮತ್ತು ಕ್ರೀಡಾ ಮಂತ್ರಿಯವರಾದಂಥ ಶ್ರೀಮತಿ ಮಾರ್ಗರೇಟ್ ಆಳ್ವರವರು ಇದ್ದಾರೆ. ಅವರಿಂದ ನೀವು ಯಾವ ರೀತಿಯಾದಂಥ ಲಾಭವನ್ನು ಇದು ತನಕ ಪಡೆದುಕೊಂಡಿದ್ದೀರಿ ? ಸೆಂಟ್ರಲ್ ಸ್ಕೀಮ್ ಆಗಿರಲಿ, ಅಥವಾ ಇನ್ಯಾವುದೇ ಇರಲಿ ಅವರು ಕೊಟ್ಟ ಹಣವನ್ನು ಖರ್ಚು ಮಾಡಲಾರದಷ್ಟು ಒಂದು ತರಹದ ದುಸ್ಥಿತಿಯು ನಿಮ್ಮಲ್ಲಿದೆ. ನಿಮ್ಮಲ್ಲಿ ಯುವಜನ ಇಲಾಖೆಯ ಸೆಕ್ರೆಟರಿಯವರು ಏನಿದ್ದಾರೆ. ಅವರ ಬಗ್ಗೆ ಫೈನಾನ್ಸ್ ಸೆಕ್ರೆಟರಿಯವರು ಮುತುವರ್ಜಿಯನ್ನು ವಹಿಸುವುದಿಲ್ಲ. ಕೇಂದ್ರ ಸರಕಾರದವರಿಂದ ಬಂದಂಥ ಹಣವನ್ನು ಸಹಿತ ನೀವು ಸೂಕ್ತ ರೀತಿಯಲ್ಲಿ ಬಳಸುವಂಥ, ಖರ್ಚು ಮಾಡುವಂತಹ ಒಂದು ಸ್ಥಿತಿಯಲ್ಲಿ ಇಲ್ಲದಿದ್ದರೆ ನಿಮ್ಮಿಂದ ಯಾವ ತರಹದಲ್ಲಿ ಯುವಜನರ ಕಲ್ಯಾಣ ಮಾಡುವುದಕ್ಕೆ ಸಾಧ್ಯ ? ಮಾನ್ಯ ರಮೇಶ್ ಜಿಗಜಿಣಗಿಯವರ ಹತ್ತಿರ ಆ ಖಾತೆಯನ್ನು ಈಗ ಕೊಟ್ಟಿದ್ದಾರೆ. ಅವರಿಗೆ ಕೊಡುವ ಬದಲು ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಕೊಡಬೇಕಾಗಿತ್ತು ಎಂದು ಕಾಣುತ್ತದೆ, ಅವರು ಸ್ವಲ್ಪ ವಯಸ್ಸಾದವರು,......

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ನನಗೆ ಒಂದು ಸಂತೋಷ ಏನೆಂದರೆ ಮಾನ್ಯ ಕೆ. ಎಚ್. ಪಾಟೀಲ್‌ರವರಲ್ಲಿ ಇನ್ನೂ ಉತ್ಸಾಹ ತುಂಬಿತುಳುಕುತ್ತಾ ಇದೆ. ಅವರು ಬಹಳ ಸುಶ್ರಾವ್ಯವಾಗಿ ಮಾತನಾಡುತ್ತಾ ಇದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಹೌದು, ಯಾರಿಗೆ ಮನಸ್ಸಿನಲ್ಲಿ ಅತ್ಯುತ್ಸಾಹ ಇರುತ್ತದೋ ಅವರು ಯುವಕರು ಎಂದು ಹೇಳಬಹುದು. ಕೆ. ಎಚ್. ಪಾಟೀಲರು ಮಾಡಿದಂಥ ಕೆಲಸವನ್ನು ಬೇರೆ ಯಾರಾದರೂ ಮಾಡಿದ್ದಾರೆಯೋ ಎಂದು ಕೇಳುತ್ತೇನೆ. ?

ಇನ್ನು ಕೇಂದ್ರ ಸರ್ಕಾರದವರು ಅನೇಕ ಯೋಜನೆಗಳನ್ನು ಹಾಕಿದ್ದಾರೆ. ಸ್ಪೋರ್ಟ್ಸ್ ಸಾಮಾನುಗಳನ್ನು ಖರೀದಿ ಮಾಡಲಿಕ್ಕೆ, ಕ್ರೀಡೆ ಇತ್ಯಾದಿಗಳನ್ನು ವ್ಯವಸ್ಥೆ ಮಾಡಿಕೊಳ್ಳಲು ಬೇಕಾಗುವ ಸಲಕರಣೆಗಳಿಗಾಗಿ ಹಣವನ್ನು ಕೊಡುತ್ತಾ ಇದ್ದಾರೆ. ವರ್ಕಿಂಗ್ ವಿಮೆನ್ಸ್ ಹಾಸ್ಟೆಲ್‌ಗಳನ್ನು ಕಟ್ಟಿಸಿಕೊಳ್ಳಲು ಹಣವನ್ನು ಕೊಡುತ್ತಾ ಇದ್ದಾರೆ. ಕ್ರೀಡಾ ಪಟುಗಳಿಗೆ ಹಣವನ್ನು ಕೊಡುತ್ತಾ ಇದ್ದಾರೆ. ಹೀಗೆ ನಾನಾ ರೀತಿಯಲ್ಲಿ ಹಣವನ್ನು ಕೊಡುತ್ತಿರುವ ಸಂದರ್ಭಗಳಲ್ಲಿ ನೀವು ಯಾವ ಯಾವ ಕಾರಣಕ್ಕಾಗಿ ಹಣವನ್ನು ಈ ಸಲುವಾಗಿ ಪಡೆದುಕೊಂಡಿದ್ದೀರಿ ? ನೀವು ನಮ್ಮ ಕ್ಷೇತ್ರಕ್ಕೆ ಬೇಕಾದರೆ ಕ್ರೀಡಾಂಗಣವನ್ನು ಮಾಡಿಕೊಡುವುದು ಬೇಡ. ಮಾನ್ಯ ಖರ್ಗೆಯವರ ಕ್ಷೇತ್ರಕ್ಕೆ ಬೇಕಾದರೂ ಮಾಡಿಕೊಡುವುದು ಬೇಡ. ಆದರೆ ಬಿಜಾಪುರಕ್ಕೆ ಮಾಡಿಕೊಟ್ಟಿದ್ದೀರಾ ? ನಮ್ಮ ಗದಗ ತಾಲ್ಲೂಕಿನ ಹುಲಕೋಟಿಗೆ ಕೇಂದ್ರ ಸರಕಾರದವರು ಕ್ರೀಡಾಂಗಣಕ್ಕೆ ಕೊಟ್ಟ ಹಣವನ್ನು ಕೂಡ ನೀವು ರಿಲೀಸ್ ಮಾಡಲಿಲ್ಲ. ಅದೇ ಕೆಲಸ

ವನ್ನು ಇನ್ನಾರಾದರೂ ಮಾಡಿದ್ದರೆ ಹಣದ ದುರುಪಯೋಗ ಮಾಡಿದ್ದಾರೆ ಎಂದು ಅಪಾದನೆಗಳನ್ನು ಮಾಡುತ್ತಿದ್ದೀರಿ. ಆದರೆ ನಿಮ್ಮ ಕಾಲದಲ್ಲಿ ಕೇಂದ್ರ ಸರಕಾರದವರು ಕೊಟ್ಟಂಥ ಹಣವನ್ನು ನಮಗೆ ಕೊಡಲಿಕ್ಕೆ, ಖರ್ಚು ಮಾಡಲಿಕ್ಕೆ ನಿಮಗೆ ಏತಕ್ಕೆ ಸಾಧ್ಯವಾಗಲಿಲ್ಲ ?

ಇವತ್ತಿನ ದಿವಸ ಸಣ್ಣ ಕೆಲಸಗಳನ್ನು ಮಾಡುವುದಕ್ಕೆ ಸಹ ನಿಮಗೆ ಆಗುತ್ತಿಲ್ಲ. ವರ್ಕಿಂಗ್ ವಿಮೆನ್ ಹಾಸ್ಟೆಲ್‌ಗಾಗಿ ಕೇಂದ್ರ ಸರ್ಕಾರ ಎಷ್ಟೊಂದು ಹಣ ಕೊಡುತ್ತಿದ್ದರೂ ಅದನ್ನು ತೆಗೆದುಕೊಳ್ಳುವ ಸಾಮರ್ಥ್ಯ ನಿಮ್ಮಲ್ಲಿಲ್ಲ. ಅವರು ನಿಮ್ಮಲ್ಲಿ ಹಾಸ್ಟೆಲ್ಸ್‌ಗೆ ಯಾರೂ ಸಹಾಯ ತೆಗೆದುಕೊಳ್ಳುವವರಿಲ್ಲವೇ ಎಂದು ಪ್ರಶ್ನೆ ಮಾಡುತ್ತಿದ್ದಾರೆ. ಈ ಹಾಸ್ಟೆಲ್‌ಗಳಿಗಾಗಿ ೭೫ ಪರ್ಸೆಂಟ್ ಹಣವನ್ನು ಕೇಂದ್ರ ಸರ್ಕಾರ ಕೊಡುತ್ತದೆ, ಅದರಲ್ಲಿ ಬಿಲ್ಡಿಂಗ್, ಜಮೀನು, ಓಪನಿಂಗ್ ನೆರವನ್ನು ಸೇರಿಸಿ ಮಾಡಬಹುದು. ನೀವು ಎಷ್ಟಕ್ಕೆ ಇದನ್ನು ಬಳಸಿಕೊಂಡಿದ್ದೀರಿ ಹೇಳಿ ? ನಿಮ್ಮ ಸೇನೆ ಅಂದರೆ ಆಫೀಸರ್ಸ್ ಇದ್ದಾರಲ್ಲ, ಅವರೇ ಹೋಗಿ ಮಾಡಿಸಿಕೊಂಡು ಬರುವ ಶಾಣ್ಯ ಇಲ್ಲದಿದ್ದರೂ ಪರವಾಗಿಲ್ಲ, ಕೇಂದ್ರ ಕೊಡುವುದನ್ನು ಉಪಯೋಗಿಸಿಕೊಳ್ಳಲೂ ನಿಮ್ಮ ಕೈಲಿ ಆಗುತ್ತಿಲ್ಲ. ನಿಮ್ಮ ಕಾರ್ಯವಿಧಾನವನ್ನು ಬದಲಾಯಿಸಿಕೊಳ್ಳಿ ಇಲ್ಲದಿದ್ದರೆ ಅದಕ್ಷತೆ ಎಂಬ ಗೂಬೆ ನಿಮ್ಮ ತಲೆ ಮೇಲೆ ಕೂತೀತು.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—ವರ್ಕಿಂಗ್ ವಿಮೆನ್ ಹಾಸ್ಟೆಲ್ಸ್ ವ್ಯವಹಾರ ವಿಮೆನ್ ಅಂಡ್ ಚಿಲ್ಡ್ರನ್ ವೆಲ್‌ಫೇರ್ ಇಲಾಖೆಗೆ ಬರುತ್ತದೆ. ತಾವು ಹೇಳಿದಂತೆ ೭೫ ಪರ್ಸೆಂಟ್ ಕೇಂದ್ರದಿಂದಲೂ ೧೨.೫ ಪರ್ಸೆಂಟ್ ವಾಲಂಟರಿ ಆರ್ಗನೈಜೇಷನ್ಸ್‌ನಿಂದಲೂ ೧೨.೫ ಪರ್ಸೆಂಟ್ ರಾಜ್ಯದಿಂದಲೂ ಹೊಂದಿಸಿಕೊಂಡು ಮಾಡಬೇಕು. ಈಗಾಗಲೇ ನಮ್ಮಲ್ಲಿ ೨೬ ಅಂಥಾ ಹಾಸ್ಟೆಲ್‌ಗಳು ಕೆಲಸ ಮಾಡುತ್ತಿವೆ.

ಶ್ರೀ ಕೆ. ಹೆಚ್. ಪಾಟೀಲ್.—ಅದನ್ನೆಲ್ಲಾ ಏಕೆ ಹೇಳುತ್ತೀರಿ ಸ್ವಾಮಿ, ಅವರು ಬಿಡುಗಡೆ ಮಾಡಿರುವ ಹಣವನ್ನು ನೀವು ಬಳಸಿಕೊಳ್ಳುವ ಪ್ರಯತ್ನವನ್ನೇ ಮಾಡುತ್ತಿಲ್ಲವಲ್ಲ.

ಶ್ರೀ ಜಿ. ಬಸವಣ್ಣಪ್ಪ.—ಯಾವುದಾರೂ ಇನ್‌ಸ್ಟೆನ್ಸ್ ಇದ್ದರೆ ಹೇಳಿ

ಶ್ರೀ ಕೆ. ಹೆಚ್. ಪಾಟೀಲ್.—ಆಯಿತು, ಇಲ್ಲ ಬೇಡ ಬಿಡಿ, ತಾನೇ ಅಧ್ಯಕ್ಷನಾಗಿರುವ ಸಂಸ್ಥೆ ಬಗ್ಗೆ ಇಂಥಾ ಕಡೆ ಮಾತಾಡಬಾರದೆಂಬ ಸಂಪ್ರದಾಯ ಇದೆ. ನಿಮಗೆ ಆಮೇಲೆ ತಿಳಿಸುತ್ತೇನೆ. ಮಾರ್ಚಿಯಲ್ಲಿ ಹಣ ರಿಲೀಸ್ ಆಗಿದ್ದರೂ ಅದನ್ನು ಪಡೆಯಲು ಇನ್ನೂ ನಿಮ್ಮ ಕೈಲಿ ಆಗಿಲ್ಲ. ನಿಮ್ಮ ಡೈರೆಕ್ಟರ್ ಅವರನ್ನು ಕೇಳಿದರೆ ಸಾರ್, ಅದು ಸೆಕ್ರೆಟರಿಯವರ ಹತ್ತಿರ ಇದೆ ಎನ್ನುತ್ತಾರೆ. ಕೇಂದ್ರದವರು ತಾಲ್ಲೂಕಿಗೊಂದು ಕ್ರೀಡಾಂಗಣ ಕೊಡುವಾಗ ನೀವು ಎಷ್ಟು ಪ್ರಪೋಸಲ್ಸ್ ಕಳಿಸಿದ್ದೀರಿ ಹೇಳಿ ? ಗದಗ್ ಮುನಿಸಿಪಾಲಿಟಿಯವರು ಅವರ ಪಾಲಿನ ಹಣ ಕೊಡಲು ಸಿದ್ಧರಿದ್ದಾರೆ ಐದು ವರ್ಷಗಳಿಂದ ಅವರು ಬೇಡಿದರೂ ಕೂಡ ಅವರ ಬೇಡಿಕೆ ಈಡೇರುತ್ತಿಲ್ಲ, ಇದಕ್ಕೆ ಯಾರು ಜವಾಬ್ದಾರರು ? ಅನಂತರ ಹುಲಕೋಟಿ ಗ್ರಾಮದಲ್ಲಿ ಎಲ್ಲ ಸಿದ್ಧವಾಗಿದ್ದರೂ ರಾಜ್ಯ ಸರ್ಕಾರ ತನ್ನ ಪಾಲಿನ ಕೆಲಸ ಮಾಡಿಲ್ಲವಲ್ಲ? ನಿಮ್ಮ ಸೆಕ್ರೆಟರಿಯನ್ನು ಕರೆಸಿ ಕೇಳಿ, ನಾನು ಹೇಳುತ್ತಿರುವುದೆಲ್ಲ ನಿಜವೋ ಸುಳ್ಳೋ ಎಂದು. ದೇವರ ವರಕೊಟ್ಟರೂ ಪೂಜಾರಿ ವರ ಕೊಡುತ್ತಿಲ್ಲ, ಹೀಗೇ ಮುಂದುವರಿದರೆ ನಿಮ್ಮ ಮೇಲೆ ದೊಡ್ಡ ಅಪಾದನೆ ಮಾಡುವ ಕಾಲ ಬಂದೀತು. ನಾಳೆಯ ದಿವಸವೇ ನೀವು ಇದನ್ನೆಲ್ಲ ನೋಡಿ, ಎಲ್ಲೆಲ್ಲಿ ಸರ್ಕಾರ ನಿಷ್ಕ್ರಿಯವಾಗಿದೆಯೋ ಅಲ್ಲೆಲ್ಲ ಕೆಲಸ ಆಗಬೇಕು. ಈ ವರದಿಯಲ್ಲಿ ತಾನೇ ಏನಿದೆ ? ಬರೀ ಅಲ್ಲಿ ಇಲ್ಲಿ ಒಂದಷ್ಟು ಊಹಾಪೋಹಗಳನ್ನು ಮಾಡಲಾಗಿದೆಯೇ ಹೊರತು ಇಷ್ಟು ವರ್ಷದಲ್ಲಿ ಇಂತಿಂಥ ಯೋಜನೆಗಳನ್ನು ಮುಗಿಸಲಾಗುವುದು ಎಂದು ಸ್ಪಷ್ಟವಾಗಿ ಹೇಳಿಲ್ಲ. ರಾಜ್ಯದಲ್ಲಿ ಎಷ್ಟು ಕ್ರೀಡಾಂಗಣಗಳು ಬೇಕು. ಎಷ್ಟಕ್ಕೆ ಪ್ರಪೋಸಲ್ಸ್ ಬಂದಿದೆ ಎಂಬ ಬಗ್ಗೆ ವಿವರಗಳು ಇದ್ದರೆ ಚೆನ್ನಾಗಿರುತ್ತಿತ್ತು. ಬರೀ ನೀವು ಕೆಲವು ಪುಸ್ತಕಗಳಿಂದ ಆರಿಸಿ ಈ ವರದಿ ತಯಾರಿಸಿದ್ದೀರಿ ಅಷ್ಟೇ, ಸೆಂಟ್ರಲ್ ಸ್ಕೀಮ್‌ನಲ್ಲಿ ಯಾವ್ಯಾವು ಲಭ್ಯವಿವೆ ಎಂದು ಹೇಳಿದರೆ ಆಯಿತಾ ?

೩-೦೦ ಪಿ. ಎಂ.

ಎಷ್ಟು ಜನ ಯುವಕರನ್ನು ಈ ಕೆಲಸಕ್ಕೆ ಪ್ರಚೋದಿಸಿದ್ದೀರಿ, ಎಷ್ಟು ಸಂಸ್ಥೆಗಳನ್ನು ಪ್ರಾರಂಭ ಮಾಡಿದ್ದೀರಿ ಪ್ರತಿಯೊಂದು ಸಂಸ್ಥೆಯಲ್ಲಿ ಎಷ್ಟು ಜನ ಯುವಕರಿದ್ದಾರೆ ಅವರಿಗೆ ಲೈಬ್ರರಿಗಳ ವ್ಯವಸ್ಥೆಯನ್ನು ಮಾಡಿದ್ದೀರಾ ? ಎಷ್ಟು ಆಟದ ಬಯಲುಗಳನ್ನು ನಿರ್ಮಾಣ ಮಾಡಿದ್ದೀರಿ. ಅವರು ಆರ್ಥಿ

ಹಣ ಕೊಟ್ಟು ನೀವು ಅರ್ಧ ಹಣ ಕೊಡುವ ಸ್ಕೀಮ್‌ಗಳು ಎಷ್ಟಿವೆ, ಈ ರೀತಿಯ ಎಷ್ಟು ಸ್ಕೀಮ್‌ಗಳನ್ನು ತಯಾರು ಮಾಡಿದ್ದೀರಿ ? ಕೇಂದ್ರದವರು ಹೊಸ ಸ್ಕೀಮ್‌ಗಳನ್ನು ಮಾಡದಿದ್ದರೆ ನೀವು ಮಾಡಬಾರದೆಂದೇನೂ ನಿಯಮ ಇಲ್ಲ, ಅಂತಹ ಸ್ಕೀಮ್‌ಗಳನ್ನು ಮಾಡಿ. ಹಿರಿಯರಿಗೆ ಅಂದರೆ ೬೦ ವರ್ಷ ವಯಸ್ಸಾದವರಿಗೆ ಭತ್ಯ ಕೊಡುತ್ತೀರಿ, ಆದರೆ ನಮ್ಮ ದೇಶದ ಭಾವಿ ಭವಿಷ್ಯವನ್ನು ಬದಲಾವಣೆ ಮಾಡುವಂತಹ ಯುವಕರ ಸಲುವಾಗಿ ಯಾವ ಸ್ಕೀಮ್‌ಗಳನ್ನು ಮಾಡಿದ್ದೀರಿ ? ಒಂದು ಕೋಟಿ ಹಣವನ್ನು ಇಟ್ಟು ೨ ಕೋಟಿ ಜನರಿಗೆ ಕೊಡುವ ಅಂದರೆ ಒಬ್ಬೊಬ್ಬರಿಗೆ ೫೦ ಪೈಸೆ ಕೊಟ್ಟರೆ ಅವರಿಗೆ ಯಾವ ರೀತಿಯ ಪ್ರಯೋಜನ ಸಿಗುತ್ತದೆ ? ಈ ಸ್ಕೀಮ್ ಅನ್ನು ಹೇಗೆ ಸರಿಯಾದ ರೀತಿಯಲ್ಲಿ ಜಾರಿಗೆ ತರುತ್ತೀರಿ ? ನಾನು ಮಾನ್ಯ ಜಿಗಜಿಣಗಿಯವರಿಗೆ ಹೇಳುವುದು ಇಷ್ಟೇ. ನಿಮ್ಮ ಫ್ಯಾರಾಫರ್ನಾಲಿಯ ಬಹಳ ದೊಡ್ಡದಾಗಿದೆ. ರೆವಿನ್ಯೂ ಇಲಾಖೆಯನ್ನು ನೋಡಿ ಅದನ್ನು ಅನುಕರಣೆ ಮಾಡುತ್ತಿದ್ದೀರಿ. ನಿಮ್ಮಲ್ಲಿ ಎಷ್ಟು ಮಂದಿ ಜಾಯಿಂಟ್ ಡೈರೆಕ್ಟರ್‍ಸ್ ಡೈರೆಕ್ಟರ್‍ಸ್ ಡೆಪ್ಯುಟಿ ಡೈರೆಕ್ಟರ್‍ಸ್ ಹಾಗೂ ಅಂಡರ್ ಸೆಕ್ರೆಟರಿಗಳು ಇದ್ದಾರೆ. ಅವರು ಒಂದೊಂದು ಹೊಸ ಸ್ಕೀಮನ್ನು ಜಾರಿಗೆ ತರಬೇಕಾದರೆ ಅವರ ಕೆರಗಳು ಸವೆದು ಹೋಗುತ್ತವೆ, ಆ ಸ್ಥಿತಿಗೆ ತಂದಿದ್ದೀರಿ, ಡಿ. ಸಿ. ಕೆಳಗೆ ಮತ್ತೊಬ್ಬರು ಅವರ ಕೆಳಗೆ ಮಗದೊಬ್ಬರು ಇರುತ್ತಾರೆ. ನಂತರ ಜಿಲ್ಲಾ ಪರಿಷತ್ತಿಗೆ ಇಂತಹ ಸ್ಕೀಮ್‌ಗಳನ್ನು ಕೊಟ್ಟಿದ್ದೇವೆಂದು ಹೇಳುತ್ತೀರಿ, ಹಣವಿಲ್ಲದೆ ಅವರು ತಾನೇ ಏನು ಮಾಡುತ್ತಾರೆ ? ಇಂತಹ ಬೋಗಸ್ ಅನ್ನು ಏಕೆ ಮಾಡುತ್ತೀರಿ ಒಂದು ಕೋಟಿ ಹಣ ನಿಮ್ಮಲ್ಲಿ ಇಲ್ಲ. ಅವನು ಅಲ್ಲಿಗೆ ಹೋಗಿ ದೊಡ್ಡ ಬುಲೆಟೀನ್ ಅನ್ನು ಕಾಗದ ಪೆಟ್ಟಿಗೆಯನ್ನು ಹೊತ್ತುಕೊಂಡು ಇಲ್ಲಿಗೆ ಬರುವುದರೊಳಗೆ ಅವನ ಸಮಯವೆಲ್ಲಾ ಮುಗಿದು ಹೋಗುತ್ತದೆ. ನಂತರ ಸಮಯ ಮೀರಿರುವುದರಿಂದ ಇದನ್ನು ಮುಂದಿನ ವರ್ಷಕ್ಕೆ ಅಂದರೆ ಹೊಸದಾಗಿ ಪ್ರಪೋಸಲ್ ಅನ್ನು ಕಳಿಸಿ ಎಂದು ಬರೆಯುತ್ತಾರೆ. ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಲಕ್ಷ್ಮೀಸಾಗರ್‌ರವರಿಗೆ ತೊಂದರೆ ಕೊಡಬೇಕೆಂದು ನನ್ನ ಇಚ್ಛೆಯಿಲ್ಲ. ಸರಕಾರದಲ್ಲಿ ದುಡ್ಡು ಇಲ್ಲದಿದ್ದರೆ ಹೊಸ ಸ್ಕೀಮ್‌ಗಳನ್ನು ತೆಗೆದುಕೊಳ್ಳಬೇಡಿ, ಆದರೆ ಕೇಂದ್ರ ಸರಕಾರದಿಂದ ಏನು ಹಣ ಬರುತ್ತದೆ, ಅದಕ್ಕೆ ರೆಕಮೆಂಡೆಡ್ ಮಾಡಿ ಕಳಿಸಿ ಅದನ್ನು ಕೊಡಿ, ನಂತರ ಮರು ದಿವಸ ರೀ-ಇಂಬರ್ಸ್ ಆಗುತ್ತದೆ. ಕೇಂದ್ರ ಸರಕಾರದವರು ನೀಡುವಂತಹ ಹಣವನ್ನು ಸರಿಯಾಗಿ ಉಪಯೋಗಿಸಿಕೊಳ್ಳಿ. ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ನಿಮ್ಮ ಕೈಯ್ಯಲ್ಲಿ ಆಗುತ್ತಿಲ್ಲ, ಆ ಹಣವನ್ನು ನಿಮ್ಮ ಮೂಲಕ ಕೊಡಬೇಕೆಂದು ಸ್ಕೀಮ್ ಇರುವುದರಿಂದ ನಿಮ್ಮ ಮುಖಾಂತರ ಏನು ಅವರು ಹಣವನ್ನು ಕೊಡುತ್ತಾರೆ ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಆಟದ ಬಯಲು ಇದ್ದರೆ ಆಟದ ಸಲಕರಣೆಯಿಲ್ಲ. ಇದರ ಬಗ್ಗೆ ಪ್ರೋತ್ಸಾಹ, ಪರಿಹಾರ ಕೊಡುವುದು ಸರಕಾರದ ಆದ್ಯ ಕರ್ತವ್ಯ. ಇಂಥಾದ್ದಕ್ಕೆ ಸಹಾಯ ಮಾಡದಿದ್ದರೆ ಯುವಕರಿಗೆ ಅನುಕೂಲವಾಗುವುದಿಲ್ಲ. ಯುವ ಜನ ಖಾತೆಯ ಉದ್ದೇಶ ಸಫಲವಾಗುವುದಿಲ್ಲ. ಈ ಇಲಾಖೆಯ ಉದ್ದೇಶ ಸಫಲವಾಗಲಿಕ್ಕೆ ತಾವು ಹೆಚ್ಚಿನ ಮುತುವರ್ಜಿ ವಹಿಸಿ ಈ ಬಜೆಟ್ ಅಧಿವೇಶನ ಮುಗಿಯುವುದರೊಳಗೆ ಇನ್ನೊಮ್ಮೆ ಇದನ್ನು ರಿವೈಸ್ ಮಾಡುವಂತಹ ಕಾಲ ಬರಲಿ ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಮಾತನಾಡಿ ಇದಕ್ಕೆ ಹೆಚ್ಚು ಹಣವನ್ನು ನೀಡಿ ಪ್ರೋತ್ಸಾಹಿಸಬೇಕೆಂದು ಹೇಳುತ್ತಾ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ ಮೊದಲನೆಯದಾಗಿ ನಾನು ಈ ಜಿಯಾಲಜಿಕಲ್ ಇಲಾಖೆಯ ಬಗ್ಗೆ ಸ್ವಲ್ಪ ಮಾತನಾಡುತ್ತೇನೆ. ಹೈಡ್ರೋ ಫಿಸಿಕಲ್ ಸರ್ವೆ ಬಗ್ಗೆ ನಾನು ಜಾಸ್ತಿ ಎಂಫಸೈಸ್ ಮಾಡಬೇಕೆಂದಿದ್ದೇನೆ. ನಮ್ಮ ರಾಜ್ಯದಲ್ಲಿ ೮ ಜಿಲ್ಲೆಗಳನ್ನು ಕಪ್ಪು ಪ್ರದೇಶವೆಂದು ತೀರ್ಮಾನ ಮಾಡಿದ್ದು ಅದರಲ್ಲಿ ಮುಖ್ಯವಾಗಿ ಬೆಂಗಳೂರು, ತುಮಕೂರು, ಬೆಳಗಾಂನ ಇಂಡಿ ಪ್ರದೇಶವನ್ನು ಕಪ್ಪು ಪ್ರದೇಶವೆಂದು ತೀರ್ಮಾನ ಮಾಡಿದ್ದಾರೆ ಕಪ್ಪು, ಗ್ರೇ, ವೈಟ್ ಏರಿಯಾ ಎಂದು ಮಾಡಿದ್ದಾರೆ. ಕೋಲಾರ ಜಿಲ್ಲೆಯ ೯ ತಾಲ್ಲೂಕುಗಳನ್ನು ಕಪ್ಪು, ಗ್ರೇ ಎಂದು ತೀರ್ಮಾನ ಮಾಡಿದ್ದಾರೆ. ಬೆಂಗಳೂರು ಜಿಲ್ಲೆಯ ಹೊಸಕೋಟೆ, ನೆಲಮಂಗಲ ಮುಂತಾದ ಕೆಲವು ತಾಲ್ಲೂಕುಗಳನ್ನು ಕಪ್ಪು ಪ್ರದೇಶಗಳೆಂದು ತೀರ್ಮಾನ ಮಾಡಿದ್ದಾರೆ ಬೆಂಗಳೂರಿನಲ್ಲಿನ ಕೆಲವು ತಾಲ್ಲೂಕುಗಳನ್ನು ಕೂಡ ಗ್ರೇ ಎಂದು ತೀರ್ಮಾನ ಮಾಡಿದ್ದಾರೆ. ೮ ಜಿಲ್ಲೆಗಳಲ್ಲಿ ಈ ೩ ಕೆಟಗರಿಯನ್ನು ಏನು ಮಾಡಿದ್ದಾರೆ, ಇದಕ್ಕೇನು ಬೇಸಿಸ್ ಇದೆಯೋ ನನಗೆ ಗೊತ್ತಿಲ್ಲ. ನಬಾರ್ಡ್‌ನವರು ಡೈರೆಕ್ಷನ್ ಏನು ಕೊಟ್ಟಿದ್ದಾರೆ ಅದನ್ನನುಸರಿಸಿ ಈ ಜಿಲ್ಲೆಗಳಲ್ಲಿನ ಇಂತಿಂತಹ ತಾಲ್ಲೂಕುಗಳಲ್ಲಿ ಬಾವಿ

ತೆಗೆಯಲು ಮತ್ತು ಬಾವಿಗಳನ್ನು ಆಳ ಮಾಡಲು ಲೋನ್ ಕೊಡಬಾರದೆಂದು ತೀರ್ಮಾನ ಮಾಡಿದ್ದಾರೆ. ಪಿಎಲ್‌ಡಿ ಬ್ಯಾಂಕ್‌ನವರಾಗಲೀ, ಷೆಡ್ಯೂಲ್ ಬ್ಯಾಂಕ್‌ನವರಾಗಲೀ ಇಲ್ಲವೇ ಸರಕಾರದವರು ಜಾರಿಗೆ ತಂದಿರತಕ್ಕ ೧೦೦ ವೆಲ್ಸ್ ಸ್ಕೀಮ್‌ಗಳಲ್ಲಾಗಲೀ ಲೋನ್ ಕೊಡಬಾರದೆಂದು ತೀರ್ಮಾನ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಒಂದನ್ನು ಗಮನಿಸಬೇಕು. ಏನೆಂದರೆ ಕೋಲಾರ ಜಿಲ್ಲೆಯಲ್ಲಿ ಬಡವರು ಯಾರು ಸಾಲಕ್ಕಾಗಿ ಹೋಗುತ್ತಾರೆ ಅವರಿಗೆ ಮಾತ್ರ ಈ ಕಾನೂನು ಅಪ್ಲೈ ಆಗುತ್ತದೆ.

ಆದ್ದರಿಂದ ನಾನು ಇವರಿಂದ ಸ್ಪಷ್ಟವಾಗಿ ಕೇಳಿಕೊಳ್ಳುವುದೇನೆಂದರೆ ಬಾವಿಗಳಿಗೆ ಲೈಸೆನ್ಸ್ ಇಂಟ್ರಡ್ಯೂಸ್ ಮಾಡಬೇಡಿ. ಏಕೆಂದರೆ ರೈತರೇ ನಿಮ್ಮ ಮೇಲೆ ತಿರುಗಿ ಬೀಳುತ್ತಾರೆ. ಆ ಕೆಲಸ ನೀವು ಮಾಡುವುದು ಬೇಡ. ಆದರೆ ಆ ಬಡವರಿಗೆ ಶಕ್ತಿ ಇಲ್ಲದೇ ಇದ್ದರೆ ಬಾವಿ ತೆಗೆಯಬೇಕು ಎಂದು ಹೇಳಿದರೆ ಪಿ.ಎಲ್.ಡಿ. ಬ್ಯಾಂಕುಗಳಲ್ಲಿ ಗಂಗಾಕಲ್ಯಾಣ ಯೋಜನೆಯಲ್ಲಿ ಕೇಳಿದರೆ ಅದು ಕಪ್ಪುಪ್ರದೇಶ ವಾಗುತ್ತದೆ. ಅದೇ ಸ್ಥಿತಿವಂತರು ದುಡ್ಡು ಖರ್ಚು ಮಾಡುವಂಥವರು ಬಾವಿಯನ್ನು ತೆಗೆಯುತ್ತಿದ್ದರೆ ೧೫೦–೨೦೦ ಅಡಿ ತೆಗೆದರೂ ಐದು ಸಾವಿರ ಹತ್ತು ಸಾವಿರ ಗ್ಯಾಲನ್ ನೀರು ಬರುತ್ತದೆ. ಇದನ್ನು ಬೇಕಾದರೆ ವಿಚಾರಣೆ ಮಾಡಲಿ. ಅದರಲ್ಲಿ ಫೇಲೂರೇ ಇರಲಿಲ್ಲ. ಐದು ಪರ್‌ಸೆಂಟ್ ಫೇಲೂರು ಇರಬಹುದು. ಅದಕ್ಕೆ ಈಗ ನಾನು ಕೇಳುವುದು ಕೊಳವೆ ಬಾವಿ ತೆಗೆದರೆ ಸಕ್ಸಸ್ ಆಗುತ್ತದೆ. ನೂರು ಬಾವಿಗಳ ಸ್ಕೀಮ್, ಗಂಗಾಕಲ್ಯಾಣ ಸ್ಕೀಮ್ ಇದು ಪೂರ್ತಿ ಇರುವುದೇ ಎಸ್.ಸಿ ಮತ್ತು ಎಸ್.ಟಿ.ಯವರಿಗೆ ಮಾತ್ರ. ಆದರೆ ಬಡವರು ಈ ಸಾಲಗಳನ್ನು ಕೇಳುವುದಕ್ಕೆ ಹೋಗುವುದು, ಅವರಿಗೆ ಮಾತ್ರ ಈ ಅನ್ಯಾಯ ಏತಕ್ಕೆ ? ಇದನ್ನು ನೀವು ಬದಲಿಸಿ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಇನ್‌ಸಾಟ್ ಸರ್ವೆಗೆ ಆರ್ಡರ್ ಮಾಡಿದ್ದೇವೆ ಎಂದು. ಆ ಸರ್ವೆ ಆಗಿ ಡಿಟೈಲ್ ಆಗಿ ರಿಪೋರ್ಟ್ ಬಂದ ಮೇಲೆ ಮಾಡುತ್ತೇವೆ ಎಂದು ಹೇಳಿದರು. ಅದು ಆಗಿದೆ. ನನಗೆ ತಿಳಿದಮಟ್ಟಿಗೆ ಬೇಕಾದಷ್ಟು ನೀರು ಅಂದರೆ ಅಲ್ಲಿ ಅಂತರಜಲ ಇದೆ. ಆದರೆ ತಾಲ್ಲೂಕುಗಳಲ್ಲೆಲ್ಲಾ ಒಂದು ಯೂನಿಟ್ ಎಂದು ಮಾಡಿಬಿಟ್ಟಿದ್ದಾರೆ.

ಶ್ರೀ ಎಂ, ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಕೋರಂ ಇಲ್ಲ ಎಂದು ಹೇಳಿದರೆ there is no meaning. 27 ಮಂತ್ರಿಗಳೂ ಕೂಡಿ ಎಂದು ಹೇಳಿ.

ಒಬ್ಬ ಮಾನ್ಯ ಸದಸ್ಯರು.—ಇಂಥ ಒಂದು ಪ್ರಾಮುಖ್ಯವಾದ ಬೇಡಿಕೆ ಚರ್ಚೆಯ ಕಾಲದಲ್ಲಿ....

ಶ್ರೀ ಆರ್. ವೆಂಕಟರಾಮಯ್ಯ.—ಯಾರು ಯಾವ ಜನರು ಇಲ್ಲ. ಇದ್ದರೂ ಇರುವುದಿಲ್ಲ ಬಿಡಿ

ಛೇರ್ಮನ್.—ಡಿಸ್‌ಕಷನ್ ಕಂಟಿನ್ಯೂ ಮಾಡಿ.

ಶ್ರೀ ಬಿ. ಸ್ವಾಮಿರಾವ್.—ಚೀಫ್‌ವಿಪ್ ಎಂದು ಇದ್ದಾರೆ. ಅವರಿಗೆ ಕಾರ್. ಸಿಬ್ಬಂದಿ ಎಲ್ಲವನ್ನೂ ಕೊಟ್ಟಿದ್ದಾರೆ, ಅವರು ಏನು ಮಾಡುತ್ತಿದ್ದಾರೆ. ಅವರು ಒಬ್ಬರು ಮಂತ್ರಿ ಹುದ್ದೆಯ ಸ್ಥಾನ ಮಾನಗಳನ್ನು ಪಡೆದಿದ್ದಾರೆ. ಈಗ ಅವರು ಎಲ್ಲಿ ಹೋಗಿದ್ದಾರೆ ?

ಶ್ರೀ ಬಿ. ಎಂ. ಇದಿನಬ್ಬ.—ಯುವಜನ ಬೇಡಿಕೆ ಬಹಳ ಪ್ರಾಮುಖ್ಯವಾದದ್ದು. ಇದಕ್ಕೇ ಕೋರಂ ಇಲ್ಲ. ಆಡಳಿತ ಪಕ್ಷದಲ್ಲಿ ಮುಖ್ಯಸ್ಥರೇ ಇಲ್ಲ. ಮುಖ್ಯಸ್ಥರು ಎಂದರೆ ವಿಪ್ ಅವರೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಕನಿಷ್ಟಪಕ್ಷ ೨೭ ಮಂತ್ರಿಗಳಲ್ಲಿ ೫ ಮಂತ್ರಿಗಳಾದರೂ ಇದ್ದರೆ ನಾವು ಹತ್ತು ಅವರು ಹತ್ತು–ಹದಿನೈದು ಮತ್ತು ನೀವು ಸೇರಿದರೆ ಸಭೆ ನಡೆಸಬಹುದು.

ಶ್ರೀ ಆರ್. ವೆಂಕಟರಾಮಯ್ಯ.—ಈಗ ಒಂದು ತಾಲ್ಲೂಕನ್ನೇ ಯೂನಿಟ್ ಎಂದು ಮಾಡಿದ್ದಾರೆ. ಅದನ್ನು ತಪ್ಪಿಸಬೇಕು. ಈಗಲಾದರೂ ನಾನು ಅನೇಕಸಾರಿ ಮೂರು ವರ್ಷಗಳಿಂದ ಹೇಳುತ್ತಿದ್ದೇನೆ. ಅದು ಅರ್ಥವಾಗುತ್ತಾ ಇರಲಿಲ್ಲ. ಮಾನ್ಯ ಜಿಗಜಿಣಗಿಯವರ ತಾಲ್ಲೂಕಿನಲ್ಲೂ ಇದೇ ಗತಿಯಾಗಿದೆ. ಈಗ ನಿಮಗೆ ನಮ್ಮ ಕಷ್ಟ ಅರ್ಥವಾಗುತ್ತದೆ. ಜಿಗಜಿಣಗಿಯವರು ಯೋಜನೆ ಮಾಡಿ ತಾಲ್ಲೂಕು ಯೂನಿಟ್ ಮಾಡುವುದು ಬೇಡ. ಯಾವ ಹಳ್ಳಿಯಲ್ಲಿ ಸಿಗುವುದಿಲ್ಲವೋ ಅಂಥ ಕಡೆಯಲ್ಲಿ ಒಂದು ಯೂನಿಟ್ ಎಂದು ಮಾಡಲಿ. ಆ ಹಳ್ಳಿಯಲ್ಲಿ ನೀರು ಇಲ್ಲ, ಅದಕ್ಕೋಸ್ಕರವಾಗಿ ಇದನ್ನು ಡಿಕ್ಲೇರ್ ಮಾಡಿದ್ದೇವೆ ಎಂದು ಮಾಡಲಿ. ಈಗ ಇನ್‌ಸಾಟ್ ಸರ್ವೆ ಎಂದು ಬಂದಿದೆ ಎಂದು ತಾವು ಹೇಳಿದಿರಿ. ವ್ಯಾಲಿ ಎಂದು ತೆಗೆದುಕೊಂಡಿದ್ದೀರಿ. ಕೆಲವು ವ್ಯಾಲಿಗಳಲ್ಲಿ ಬೇಕಾದಷ್ಟು ನೀರು ಇದೆ ಎಂದು ರಿಪೋರ್ಟ್ ಬಂದಿದೆ. ಕೋಲಾರ್ ವಾ ಲಿ ಎಂದು ಒಂದು ಇದೆ. ಬೇಕಾದಷ್ಟು ನೀರು ಇದೆ, ಎಂದು ಬಂದಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ವ್ಯಾಲಿಯಲ್ಲಿ ಬೇಕಾದಷ್ಟು ನೀರು ಬಂದಿದೆ ಎನ್ನುವುದನ್ನು ವೆಂಕಟರಾಮಯ್ಯನವರು ನೋಡಿದ್ದಾರೆಯೋ ? ನೋಡಿದ್ದರೆ ಯಾವ ಸೂಚನೆ ಪ್ರಕಾರ ನೀರು ಎಲ್ಲೆಲ್ಲಿ ಇದೆ, ಅಂಥ ಅದರಲ್ಲಿ ತೋರಿಸಿದ್ದಾರಾ ? ಅವರು ಇದೆ ಎಂದು ಹೇಳಿದಾದ ಮೇಲೆ ಫೋಟೋಗ್ರಾಫಿಕ್ ಫಿಲಂ ಅದು. ಇದು ಭೂಮಿ ಮೇಲೆ ಎಲ್ಲಿ ಬರುತ್ತದೆ. ಅದನ್ನು ಕಂಡುಹಿಡಿಯುವುದು ಒಂದು ದೊಡ್ಡ ಸಮಸ್ಯೆ ಇದು ಒಂದು. ಎರಡನೆಯದು ನೀರು ಎಷ್ಟು ಆಳದಲ್ಲಿ ಇದೆ ಅದನ್ನು ಕಂಡುಹಿಡಿಯುವುದೂ ಮತ್ತೂ ಕಷ್ಟ. ಮತ್ತು ಇವತ್ತು ಸಾಮಾನ್ಯವಾಗಿ ನೀರು ಇದ್ದರೆ ಅಂಥ ಕಡೆ ಇದೆ ಎಂದು ಹೇಳಿದ್ದಾರೆಯೋ ಹೊರತು ಬಾವಿ ತೋಡಿದ ತಕ್ಷಣ ನೀರು ಸಿಗುತ್ತದೆ ಎಂದು ಇನ್‌ಸಾಟ್ ಪಿಕ್ಚರ್‌ನಲ್ಲಿ ಗೊತ್ತಾಗುವುದಿಲ್ಲ. ಸನ್ಮಾನ್ಯ ವೆಂಕಟರಾಮಯ್ಯನವರು ಈ ಮಾಹಿತಿಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ತಮ್ಮ ಅಭಿಪ್ರಾಯಗಳನ್ನು ಸೂಚಿಸಬೇಕು ಎಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ನಾವು ವಂದನೆಯನ್ನು ಸಲ್ಲಿಸಬೇಕಾಗಿದೆ. ಏಕೆಂದರೆ ನೀರು ಇದೆ ಎಂದು ಅವರೇ ಒಪ್ಪಿಕೊಳ್ಳುತ್ತಾರೆ, ಆದರೆ ಎಲ್ಲಿದೆ ಎಂಬ ಬಗ್ಗೆ ವಿವರ ಇಲ್ಲ ಎನ್ನುತ್ತಾರೆ. ನಾನು ಕೇಳಿಕೊಳ್ಳುವುದು ಏನೆಂದರೆ ಮಾನ್ಯ ಲಕ್ಷ್ಮೀಸಾಗರ್‌ರವರು ನಮ್ಮ ತಾಲ್ಲೂಕಿಗೆ ಬರಲಿ. ದಿನವೂ ನೂರು ಕೊಳವೆ ಬಾವಿಗಳನ್ನು ತೆಗೆಯುತ್ತಾರೆ. ಒಂದು ನೂರು ಕೊಳವೆ ಬಾವಿಗಳೂ ಸಕ್ಸಸ್ ಆಗಿದೆ, ಬಡವರಿಗೆ ಮಾತ್ರ ನೀರು ಸಿಕ್ಕುವುದಿಲ್ಲ. ನಬಾರ್ಡ್‌ನ ಯಾರೋ ಮಹಾನುಭಾವರು ಹೇಳಿಬಿಟ್ಟರು, ಬಹುಶಃ ಅವರು ಬೇರೆ ಪ್ರಪಂಚದಲ್ಲಿ ಓಡಾಡುತ್ತಿರಬಹುದು, ಅವರಿಗೆ ನೀರು ಕಾಣಿಸುವುದಿಲ್ಲ. ನಬಾರ್ಡ್‌ನವರ ಪ್ರಪಂಚ ಬೇರೆ ಎಂದು ಕಾಣುತ್ತದೆ. ಲೋನ್ ಕೊಡುವುದರಲ್ಲಿ ರಿಸ್ಟ್ರಿಕ್ಷನ್ ಮಾಡಬೇಕು. ಅದಕ್ಕೆ ಯಾವುದೋ ಒಂದು ರಿಸ್ಟ್ರಿಕ್ಷನ್ ಹಾಕಿ ರೈತರನ್ನು ಹಾಗೂ ಬಡವರನ್ನು ಹಾಳು ಮಾಡುತ್ತಾರೆ. ಸರ್‌ಪ್ಲಸ್ ವೆಲ್ಸ್ ಫೇಲ್ ಆಗಿದೆ. ಬೋರ್ ವೆಲ್ಸ್ ಅಂತೂ ಸಕಸ್ ಆಗಿದೆ ಎಂದು ನನಗೆ ಗೊತ್ತು. ಈಗಲೂ ಕೂಡ ಮಾನ್ಯ ಲಕ್ಷ್ಮೀಸಾಗರ್‌ರವರೇ ಹೋಗಿ ನೋಡಲಿ. ಏಕೆಂದರೆ ನಮಗೆ ಅದರ ಬಗ್ಗೆ ಗೊತ್ತಾಗುವುದಿಲ್ಲ. ಮಾನ್ಯ ಲಕ್ಷ್ಮೀಸಾಗರ್‌ರವರು ಮಾಹಿತಿ ತೆಗೆಸಿ ಇಟ್ಟಿದ್ದಾರೆ. ನನಗೆ ಯಾರೋ ಜಿಯಾಲಜಿಸ್ಟ್ ಕೊಟ್ಟ ರಿಪೋರ್ಟ್ ಬಂದಿದೆ ಎಂದು ಹೇಳಿದರು. ನನಗೆ ಪರ್ಸನಲ್ ಆಗಿ ಅದು ಗೊತ್ತಾಗುವುದಿಲ್ಲ. ಜೊತೆಗೆ ಇದು ಬಹಳ ಟೆಕ್ನಿಕಲ್ ವಿಷಯ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದುದರಿಂದ ಮಾನ್ಯ ಲಕ್ಷ್ಮೀಸಾಗರ್‌ರವರು ನನಗೆ ಸಹಾಯ ಮಾಡಿದರೆ ಅವರಿಗೆ ಪುಣ್ಯ ಬರುತ್ತದೆ, ನಾವು ಅವರಿಗೆ ಪುನಃ ಥ್ಯಾಂಕ್ಸ್ ಹೇಳುತ್ತೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಪುಣ್ಯ ಸಂಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಪುಣ್ಯ ಆಕಾಶದಿಂದ ಮಳೆ ಬಿದ್ದ ಹಾಗೆ ತನ್ನಷ್ಟಕ್ಕೆ ತಾನೇ ಬೀಳುವುದಿಲ್ಲ. ಅದಕ್ಕೋಸ್ಕರ ಅದು ಎಲ್ಲಿದೆ ಎಂದು ಪ್ರಯತ್ನ ಮಾಡಿ, ಕೇಳಿ, ತಿಳಿದುಕೊಂಡು, ಅಭ್ಯಾಸ ಮಾಡಿ, ಅದರ ಆಧಾರದಿಂದ ಬಂದ ತಿಳಿವಳಿಕೆ ಆಧಾರದ ಮೇಲೆ ಸರ್ಕಾರಕ್ಕೆ ಅವರು ತಮ್ಮ ಅಮೂಲ್ಯ ಸಲಹೆಯನ್ನು ಕೊಟ್ಟರೆ ನಾವು ಅವರಿಗೆ ಅಭಾರಿ ಆಗಿರುತ್ತೇವೆ.

ಶ್ರೀ ಕೆ.ಹೆಚ್. ಪಾಟೀಲ್.—ಈ ಕಮ್ಯುನಿಸ್ಟ್‌ನವರ ಪಾಪ–ಪುಣ್ಯದ ಥಿಯರಿ ನನಗೆ ತಿಳಿಯಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಪುಣ್ಯ ಸಂಪಾದನೆ ಮಾಡಿಕೊಳ್ಳತಕ್ಕಂಥಾದ್ದರ ಫಲ.

ಶ್ರೀ ಆರ್. ವೆಂಕಟರಾಮಯ್ಯ.—ಅವರಿಗೆ ಪುಣ್ಯ ಬೇಕಾಗಿಲ್ಲ, ಅವರು ಪ್ರಾಕ್ಟಿಕಲ್ ಆಸ್ಪೆಕ್ಟ್‌ಗೆ ಬರಲಿ, ನಮ್ಮ ಜೊತೆ ದೇವನಹಳ್ಳಿಗೆ ಬಂದು ನೋಡಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಇವರು ಪುಣ್ಯ ಬಿಟ್ಟರು, ದೇವನಹಳ್ಳಿಗೆ ಬಂದರು, ಹೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ನೀವು ಪರ್ಸನಲ್ ಆಗಿ ಹೋಗಿ ಅಥವಾ ರಮೇಶ್ ಜಿಗಜಿಣಗಿ ಅವರು ಹೋಗಲಿ. ಅವರು ಬಲವಾಗಿದ್ದಾರೆ, ಒಳ್ಳೆ ಇಲಾಖೆಯನ್ನು ಅವರಿಗೆ ಕೊಟ್ಟಿದ್ದೀರಿ, ಜೊತೆಗೆ ಕಲ್ಲು ಇದ್ದ ಹಾಗೆ ಇದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ವೆಂಕಟರಾಮಯ್ಯನವರು ಹೇಳುವ ಥೀಸಿಸ್ ಏನೆಂದರೆ ಮುಖ್ಯವಾಗಿ ಹಣ ಇರುವವರು ಆಳವಾಗಿ ಬೋರ್‌ವೆಲ್ ಹಾಕಿ ನೀರನ್ನು ಪಡೆಯುತ್ತಿದ್ದಾರೆ ನಬಾರ್ಡ್‌ನವರ ಮಾತು ಕೇಳಿಕೊಂಡು ಹತ್ತಿರ ಹತ್ತಿರ ಬಾವಿಗಳನ್ನು ತೋಡಬಾರದು, ಆ ರೀತಿ

ತೋಡುವುದಕ್ಕೆ ರೂಪಾಯಿ ಕೊಡುವುದಿಲ್ಲ ಎಂದು ಹೇಳಿಬಿಟ್ಟರೆ ಬಡವರಿಗೆ ತೊಂದರೆ ಆಗುತ್ತದೆ ಹೊರತು ರೂಪಾಯಿ ಖರ್ಚು ಮಾಡಿ ಉದ್ದವಾದಂತಹ, ಆಳವಾದಂತಹ ಬಾವಿ ತೋಡುವುದಕ್ಕೆ ಆಗುತ್ತಿಲ್ಲ, ಇಷ್ಟು ಹೇಳಲಿ ಸಾಕು. ನೀವು ಇನ್‌ಸ್ಟಿಟ್‌ಗೆ ಹೋಗಬೇಕಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಅದಕ್ಕೋಸ್ಕರ ನಾನು ಹೇಳುವುದು ಏನೆಂದರೆ ತಾವು ಕೂಡ ತಮ್ಮ ಗುಡ್ ಆಫೀಸಸ್ ಅನ್ನು ಯುಟಿಲೈಸ್ ಮಾಡಿಕೊಂಡು ನೀರು ಎಲ್ಲಿ ಇದೆ ಎಂದು ತಿಳಿದುಕೊಳ್ಳಿ. ದಯವಿಟ್ಟು ನಬಾರ್ಡ್‌ನವರು ಏನು ರಿಸ್ಟ್ರಿಕ್ಷನ್ ಹಾಕಿದ್ದಾರೆ, ಪ್ರಾಕ್ಟಿಕಲ್ ಆಗಿ ನ್ಯಾಯ ಅಲ್ಲ. ನೀರು ಬೇಕಾದಷ್ಟು ಇದೆ. ಬಡವರಿಗೆ ಸ್ಕೀಮ್‌ಗಳು ಏನಿವೆ, ಅಂದರೆ ಲೋನ್ ಕೊಡಬೇಕೆಂದು ಇದೆ, ಕೊಡಲಿ ಸ್ವಾಮಿ. ನಾನು ಇನ್ನೂ ಒಂದು ಸಜೆಷನ್ ಕೊಡುತ್ತೇನೆ. ಆಂಧ್ರದಲ್ಲಿ ೫೦ ಪರ್ಸೆಂಟ್ ಸಬ್ಸಿಡಿಯನ್ನು ಕೊಡುತ್ತಾರೆ, ಅಲ್ಲಿ ಎರಡು ವಿಧ ಇದೆ. ಡಿಪಾಸಿಟ್ ಮಾಡಿದ ಮೇಲೆ ಬಾವಿ ಫೇಲ್ ಆದರೆ ಪೂರ್ತಿಯಾಗಿ ಅದರ ಖರ್ಚುಗಳನ್ನು ಸರ್ಕಾರ ವಹಿಸಿಕೊಳ್ಳುತ್ತದೆ. ಇಪ್ಪತ್ತು ಜನ ಕೂಡಿ ಬಂದರೆ ಅವರೇ ಒಂದು ಬಾವಿಯನ್ನು ಅಗೆಸಿಕೊಡುತ್ತಾರೆ, ಅಗೆಸಿ ಸಕ್ಸಸ್ ಆದರೆ ಒಂದು ಬೆಳೆಗೆ ೬೦ ರೂಪಾಯಿ ಛಾರ್ಜ್ ಮಾಡುತ್ತಾರೆ, ಇಂತಹವುಗಳು ಆಂಧ್ರದಲ್ಲಿ ವಿಪರೀತವಾಗಿ ಸಕಸ್ ಆಗಿವೆ. ನಮ್ಮ ಗಂಗಾ ಕಲ್ಯಾಣ ಯೋಜನೆಯಲ್ಲಿ ಎರಡು ಕ್ಯಾಟಗರಿ, ಅಂದರೆ ೬೫/೩೫,೮೫/೧೫ ಎಂದು ಮಾಡಿದ್ದಾರೆ. ಎಸ್‌ಸಿಗೆ ಇಷ್ಟು, ಎಸ್.ಟಿ.ಗೆ ಇಷ್ಟು ಇರಬೇಕು ಎಂದು ಮಾಡಿದ್ದಾರೆ. ಅದನ್ನಾದರೂ ದಯವಿಟ್ಟು ಮಾಡಲಿ. ಬಡವರಿಗೆ ಜಮೀನು ಇರುವುದೇ ಸ್ವಲ್ಪ. ಕಡಿಮೆ ಇರುವ ಜಮೀನಿಗೆ ನೀರು ಕೊಡದೇ ಇದ್ದರೆ ಬೆಳೆ ಬೆಳೆಯುವುದಕ್ಕೆ ಆಗುವುದಿಲ್ಲ. ಈ ಬಗ್ಗೆ ಒಂದು ಸರಿಯಾದ ಯೋಜನೆಯನ್ನು ಮಾಡಿ ಎಂದು ಸಜೆಷನ್ ಕೊಡುತ್ತೇನೆ. ಸುಮ್ಮನೇ ಇದನ್ನು ಮೂರು ವರ್ಷದಿಂದ ಹೇಳುತ್ತಿದ್ದೇನೆ, ಅವರು ಕೇಳುತ್ತಾ ಇದ್ದಾರೆ. ಈ ಬಗ್ಗೆ ಪೊಲಿಟಿಕಲ್ ವಿಲ್ ಇಲ್ಲ ಎಂದು ಕಾಣುತ್ತದೆ. ಮಾನ್ಯ ಜಿಗಜಣಗಿಯವರು ಬಡ ಕುಟುಂಬದಿಂದ ಬಂದವರು. ಈಗ ಅವರನ್ನು ಬಡವರು ಎಂದು ಹೇಳುವುದಕ್ಕಾಗುವುದಿಲ್ಲ, ಅವರು ನಮ್ಮವರು, ಬಡವರು, ನಮ್ಮ ಜಾತಿಯವರು ಇದ್ದಾರೆ ಎಂದು ಸ್ವಲ್ಪ ಕಾಳಜಿ ವಹಿಸಿ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ನಮ್ಮ ಲಕ್ಷ್ಮೀಸಾಗರ್‌ರವರ ಸಹಾಯ ತೆಗೆದುಕೊಂಡು ನಬಾರ್ಡ್‌ನವರನ್ನು ಒಪ್ಪಿಸಲಿ. ಇದನ್ನು ಮಾಡಿದರೆ ಬಡವರಿಗೆ ಸಹಾಯ ಮಾಡಿದ ಹಾಗೆ ಆಗುತ್ತದೆ ಎಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರ ಸಹಾಯ ನಮ್ಮ ಸರ್ಕಾರಕ್ಕೆ ಬೇಕಾಗಿದೆ. ಅದೇನೆಂದರೆ, ಈಗ ನಮ್ಮಲ್ಲಿ ಅಂತರ್‌ಜಲ ಸಾಕಷ್ಟು ಇಲ್ಲ. ಅದು ಬಹಳ ಸೀಮಿತ ಪ್ರಮಾಣದಲ್ಲಿದೆ. ನಮಗೆ ಬೇಕಾಗುವಷ್ಟು ನೀರು ಅಲ್ಲಿ ಇಲ್ಲ. ಯುಕಲಾಜಿಕಲ್ ಬ್ಯಾಲೆನ್ಸ್ ಅಂದರೆ ಪ್ರಾಕೃತಿಕ ಸಮತೋಲನವನ್ನು ಕಾಪಾಡಿಕೊಂಡು ಬರುವ ಕೆಲಸಕ್ಕೆ ನಾವು ಎಷ್ಟು ಅಂತರ್ ಜಲವನ್ನು ಬಳಸಿಕೊಂಡರೆ ನಮಗೆ ಹಾನಿಯಾಗುವುದಿಲ್ಲವೆಂಬುದನ್ನು ನಿರ್ಧಾರ ಮಾಡುವವರು ಯಾರು? ಒಂದು ನೀರಾವರಿ ಬಾವಿಗೂ ಮತ್ತು ಇನ್ನೊಂದು ನೀರಾವರಿ ಬಾವಿಗೂ ಇಷ್ಟೇ ಅಂತರವಿರಬೇಕು, ಅವೆರಡರ ನಡುವೆ ಮತ್ತೊಂದು ಬಾವಿ ತೋಡಬಾರದೆಂದು ತಜ್ಞರು ಹೇಳುವ ಮಾತನ್ನು ನಾವು ಕೇಳಬೇಕೇ ಅಥವಾ ಭೂಮಿಯಲ್ಲಿರುವ ಎಲ್ಲ ನೀರನ್ನು ಸಹ ನಾವು ಉಪಯೋಗಿಸಿಕೊಂಡು ಪ್ರಾಕೃತಿಕ ಸಮತೋಲನವನ್ನು ಹಾಳು ಮಾಡಿ ನಮ್ಮ ದಕ್ಷಿಣ ಭಾರತವನ್ನು ಮರುಭೂಮಿಯನ್ನಾಗಿ ಮಾಡಬೇಕೇ? ಇದರಲ್ಲಿ ಮಾನ್ಯ ಸದಸ್ಯರು ಯಾವುದನ್ನು ಒಪ್ಪಿಕೊಳ್ಳುತ್ತಾರೆ? ಏಕೆಂದರೆ, ಇದು ಬಹಳ ಪ್ರಾಮುಖ್ಯವಾದ ಅಂಶ. The natural resources including water are not inexhaustible. The ground water is the water which has its origin in the natural spring. The water is not prepared or manufactured within the womb of the earth. It is after all the water which has fallen from the sky and which has percolated into the recesses of the earth's crust. Now, there is limitation. If you take out more and more water......

MR. CHAIRMAN.—Sri Venkataramiah is urging the government to give water to the poor and not about the technicalities

SRI A. LAKSHMISAGAR.—Let him say so. We are not preventing the poor people from digging wells.

MR. CHAIRMAN.—That is his way of argument

SRI A. LAKSHMISAGAR.—I want him to help us as to what are the parameters within which borewells could be dugged or drilled. Should we take the advantage of availability of ground water and try all the water from the earth and make no water available in the womb of the earth ? What will be its result on the ecological balance ? It is a serious situation we have landed into. That aspect of the matter should also be adhered to by Sri Venkataramaiah.

ಶ್ರೀ ಸಿ ಎಂ. ಉದಾಸಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವೆಂಕಟರಾಮಯ್ಯನವರು ಹೇಳುವುದರಲ್ಲಿ ಅರ್ಥವಿದೆ. ಅಂತರ್ಜಲದ ನೀರನ್ನು ಉಪಯೋಗ ಮಾಡುವ ಬಗ್ಗೆ ಎರಡು ಕೊಳವೆ ಬಾವಿಗಳ ನಡುವೆ ಇಷ್ಟೇ ಅಂತರವಿರಬೇಕೆಂದು ಅಂದರೆ ಕೊನೆಯ ಪಕ್ಷ ೮೦೦ ಅಡಿಗಳ ಅಂತರವಾದರೂ ಇರಬೇಕೆಂದು ಸಾಲ ಮಂಜೂರು ಮಾಡುವಂತಹ ಸಂಸ್ಥೆಗಳು ಷರತ್ತನ್ನು ಹಾಕುತ್ತವೆ. ಆದರೆ ಸ್ವಂತ ಹಣದಿಂದ ಬಾವಿ ತೆಗೆಸುವವರು ಈ ನಿಯಮವನ್ನು ಪಾಲನೆ ಮಾಡುವುದಿಲ್ಲ. ೨೦೦-೩೦೦ ಅಡಿಗಳ ಅಂತರದಲ್ಲಿಯೇ ಬಾವಿಗಳನ್ನು ತೆಗೆಸುತ್ತಾರೆ. ಇಂತಹವರಿಗೆ ಯಾವ ನಿಯಂತ್ರಣವೂ ಇರುವುದಿಲ್ಲ. ಇಂತಹವರಿಗೂ ಸಹ ಈ ಅಂತರದ ನಿಯಮವನ್ನು ಪಾಲಿಸಬೇಕೆಂಬ ಷರತ್ತನ್ನು ವಿಧಿಸಬೇಕು. ಇಲ್ಲದಿದ್ದರೆ ಹಣಕಾಸಿನ ಅನುಕೂಲವಿದ್ದವರು ೨೦೦-೩೦೦ ಅಡಿಗಳ ಅಂತರದಲ್ಲಿಯೇ ಬಾವಿಗಳನ್ನು ತೆಗೆಸುತಾರೆ. ಇಂತಹವರಿಗೆ ಈಗ ಯಾವ ನಿರ್ಬಂಧವೂ ಇಲ್ಲವಾಗಿದೆ. ಇದು ಸರಿಯಲ್ಲ, ಹಣವಿದ್ದವರಿಗೆ ಒಂದು ಕಾನೂನು, ಸಾಲ ಮಾಡುವವರಿಗೆ ಮತ್ತೊಂದು ಕಾನೂನು ಮಾಡುವುದು ಸರಿಯಲ್ಲ. ಎಲ್ಲರಿಗೂ ಒಂದೇ ಕಾನೂನು ಎಂದು ಘೋಷಣೆ ಮಾಡಬೇಕು. ಇದರ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಈಗಿನ ನಿಯಮಗಳ ಪ್ರಕಾರ ಬಡವರಿಗೆ ಅನುಕೂಲವಾಗುತ್ತಿಲ್ಲ. ಕೇವಲ ಶ್ರೀಮಂತರಿಗೆ ಮಾತ್ರ ಅನುಕೂಲವಾಗುತ್ತಿದೆ ಎಂಬ ಅಭಿಪ್ರಾಯವನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ಈಗಾಗಲೇ ಸರ್ಕಾರ ಗಂಭೀರವಾಗಿ ಯೋಚನೆ ಮಾಡಿ ಅಂಡರ್ ಗ್ರೌಂಡ್ ವಾಟರ್‌ನ್ನು ಉಪಯೋಗ ಮಾಡುವ ಬಗ್ಗೆ ಒಂದು ಲೆಜಿಸ್ಲೇಷನ್ ಅನ್ನು ತರಬೇಕೆಂದು ಸರ್ಕಾರ ಈಗಾಗಲೇ ತೀರ್ಮಾನ ಮಾಡಿದೆ. ಈ ವಿಷಯ ಈಗಾಗಲೇ ಕ್ಯಾಬಿನೆಟ್ ಸಬ್-ಕಮಿಟಿ ಮುಂದಿದೆ. ಈ ಅಧಿವೇಶನ ಮುಗಿಯುವುದರೊಳಗಾಗಿ ಇದನ್ನು ಈ ಮನೆಯ ಮುಂದೆ ತರುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಆ ಕೆಲಸ ಮೊದಲು ಮಾಡಿ. ಆದರೆ ಬಾವಿಗಳನ್ನು ತೆಗೆಯುವವರು ಲೈಸನ್ಸ್ ಪಡೆಯಬೇಕು ಎಂಬ ಕಾನೂನನ್ನು ಮಾತ್ರ ತರಬೇಡಿ. ಅಂತಹ ಕಾನೂನನ್ನು ತಂದರೆ ಬಾವಿ ತೆಗೆಸುವವರು ಲೈಸನ್ಸ್ ಪಡೆಯಲು ಎರಡು ಸಾವಿರ ರೂಪಾಯಿಗಳ ಲಂಚ ಕೊಡಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ರಿಸ್ಟ್ರಿಕ್ಷನ್ ಹಾಕುವುದಕ್ಕೆ ಹೋಗಬೇಡಿ. ನೀವು ಬಡವರನ್ನು ಹಾಳುಮಾಡುವುದಕ್ಕೆ ಹೋಗಬೇಡಿ. ಈ ಬಗ್ಗೆ ಮಾನ್ಯ ಉದಾಸಿ ಅವರು ಬಹಳ ಚೆನ್ನಾಗಿ ಸ್ಪಷ್ಟಪಡಿಸಿದ್ದಾರೆ. ಅಲ್ಲಿಗೂ ಇದನ್ನು ತಾವು ಅರ್ಥಮಾಡಿಕೊಳ್ಳದೆ ಇದ್ದರೆ ಹೇಗೆ ? ತಾವು ಬೇರೆಯವರ ಕಷ್ಟವನ್ನು ಅರ್ಥಮಾಡಿಕೊಳ್ಳಬೇಕು. ಇನ್ನು ಹತ್ತು ವರ್ಷ ಹೋದರೆ ಬಡವರ ಜಮೀನಿಗೆ ನೀರೇ ಸಿಕ್ಕುವುದಿಲ್ಲ. ಅಂಡರ್‌ಗ್ರೌಂಡ್ ವಾಟರ್ ಬಗ್ಗೆ ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿದರು. ಸರ್ವೆ ಆಗಿದೆ, ಜೊತೆಗೆ ಸ್ಯಾಂಪಲ್ ಸರ್ವೆ ಆಗಿದೆ. ಕೆಲವು ತಾಲ್ಲೂಕುಗಳಲ್ಲಿ ವಿವರವಾದ ಸರ್ವೆಯಾಗಿದೆ. ತಾಲ್ಲೂಕು ಯೂನಿಟ್ ಬೇಡ, ವ್ಯಾಲಿ ಒಂದು ಯೂನಿಟ್ ಮಾಡಿ, ಇಲ್ಲದೇ ಇದ್ದರೆ ಹಳ್ಳಿ ಒಂದು ಯೂನಿಟ್ ಮಾಡಿ. ಎಸ್.ಸಿ., ಎಸ್.ಟಿ ಜನರಿಗೆ ಆದರೆ ಗಂಗಾ ಕಲ್ಯಾಣ ಯೋಜನೆ ಇದೆ. ಆದರ ಬಗ್ಗೆ ಎಕ್ಸೆಂಪ್‌ಷನ್ ಕೊಡಿ. ಬಡವರು ಬಾವಿ ತೆಗೆಸುವುದಕ್ಕೆ ಸಾಧ್ಯವೇ ? ನಾನು ಆಂಧ್ರದ ಉದಾಹರಣೆ ಹೇಳಿದೆ. ಆಂಧ್ರದಲ್ಲಿ ಎಕ್ಸೆಂಪ್‌ಷನ್ ಕೊಟ್ಟಿದ್ದಾರೆ. ಇಲ್ಲಿ ಮಾಡಲು ನಬಾರ್ಡ್‌ನವರು

ಲೋನ್ ಕೊಡುವುದಿಲ್ಲ ಎಂದು ಭಯ ತಮಗೆ ಇರಬಹುದು. ಸರಿಯಾಗಿ ಅವರನ್ನು ಗೈಡ್ ಮಾಡ ಬೇಕು, ಅವರು ಕರ್ನಾಟಕಕ್ಕೆ ಲೋನ್ ಕೊಡಬೇಡಿ ಎಂದು ಆರ್ಡರ್ ಮಾಡುತ್ತಾರೆ. ಈಗ ೮ ಜಿಲ್ಲೆಯಾಗಿದೆ, ಇನ್ನು ೧೧ ಜಿಲ್ಲೆಯಾಗಿಬಿಟ್ಟರೆ ನಬಾರ್ಡ್‌ಗೆ ಏನೂ ಕೆಲಸ ಇರುವುದಿಲ್ಲ. ರೈತರಿಗೆ ಸಾಲ ಸಿಕ್ಕುವುದಿಲ್ಲ. ಆಗ ಬಡವರ ಗತಿ ಏನಾಗುತ್ತದೆ ಎಂದು ಯೋಚನೆಮಾಡಿ. ಬಡವರ ಬಗ್ಗೆ ಸ್ವಲ್ಪ ಯೋಚನೆ ಮಾಡಿ, ಬಡವರ ಬಗ್ಗೆ ಮಾನವೀಯತೆಯ ದೃಷ್ಟಿಯಿಟ್ಟುಕೊಳ್ಳಬೇಕು. ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿದಹಾಗೆ, ದೂರದೃಷ್ಟಿ ಅಂದರೆ ಮುಂದೆ ೧೦೦ ವರ್ಷಗಳಲ್ಲಿ ಏನೇನು ಆಗುತ್ತದೋ ಗೊತ್ತಿಲ್ಲ. ಮರಳುಗಾಡು ಆಗುತ್ತದೆಂದು ಹೇಳಿದರು. ೧೦೦ ವರ್ಷಗಳ ಒಳಗಾಗಿ ಇರುವ ಬಡವರು ಹಾಳಾಗುವುದು ಬೇಡ, ಬಡವರಿಗೆ ನೀರು ಸಿಕ್ಕಲಿ, ಅದಕ್ಕೆ ಅವಕಾಶ ಕೊಡಿ ಎಂದು ಮನವಿಮಾಡಿಕೊಳ್ಳುತ್ತೇನೆ. ಇನ್ನು ಕ್ಯಾಬಿನೆಟ್ ಸಬ್ ಕಮಿಟಿ ಏನಿದೆ ಅವಕ್ಕೆ ಸರಿಯಾಗಿ ಗೈಡ್ ಮಾಡಿ, ಅವರು ಬಡವರ ಬಗ್ಗೆ ಹೆಚ್ಚು ಕಾಳಜಿ ವಹಿಸಲಿ ಎಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ, ಜಿಯಾಲಜಿಸ್ಟನ್ನು ಸ್ವಲ್ಪ ಜಾಸ್ತಿ ಅಪಾಯಿಂಟ್ ಮಾಡಿ. ಏಕೆಂದರೆ ಕೆಲವು ಕಡೆ ಇಬ್ಬರು, ಮೂವರು ಇದ್ದಾರೆ ಕೆಲವು ತಾಲ್ಲೂಕಿನಲ್ಲಿ ಫೇಲ್ಡ್ ವೆಲ್ಸ್ ಇದೆ. ಬಂಡೆ ಇರುವ ಬಾವಿಗಳಿವೆ. ಇಂಥಾದ್ದು ೨೦೦, ೩೦೦ ಇವೆ. ೫ ವರ್ಷವಾದರೂ ಒಂದು ಸರ್ಟಿಫಿಕೇಟ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ತಾಲ್ಲೂಕಿಗೆ ಜಿಯಾ ಲಜಿಸ್ಟನ್ನು ಅಪಾಯಿಂಟ್ ಮಾಡಿ ಜಿಯಾಲಜಿಕಲ್ ಡಿಪಾರ್ಟ್‌ಮೆಂಟನ್ನು ಬೆಳಸಿ, ಇದರಿಂದ ರೈತರಿಗೆ ಉಪಯೋಗವಾಗುತ್ತದೆ. ಇಬ್ಬರು ಮೂವರು ಜಿಯಾಲಜಿಸ್ಟನ್ನು ಒಂದು ಜಿಲ್ಲೆಗೆ ಇಟ್ಟುಕೊಂಡರೆ ಅವರು ಎಲ್ಲ ಕಡೆಗೂ ಬರುವುದಕ್ಕಾಗುವುದಿಲ್ಲ. ಆದ್ದರಿಂದ ಜಿಯಾಲಜಿಸ್ಟನ್ನು ಹೆಚ್ಚು ಹೆಚ್ಚು ನೇಮಕ ಮಾಡುವುದರ ಮೂಲಕ ಈ ಡಿಪಾರ್ಟ್‌ಮೆಂಟನ್ನು ಸ್ಟ್ರೆಂತೆನ್‌ಮಾಡಿ ಎಂದು ಮನವಿಮಾಡಿಕೊಳ್ಳುತ್ತೇನೆ. ಇನ್ನು ಮೂರನೆಯದಾಗಿ, ನಮ್ಮ ರಾಜ್ಯದಲ್ಲಿ ಆರ್ನಮೆಂಟಲ್ ಸ್ಟೋನ್ಸ್ ಮತ್ತು ಬ್ಲಾಕ್ ಸ್ಟೋನ್ಸ್ ಹೆಚ್ಚು ಇದೆ. ಅದು ಎಕ್ಸ್‌ಪ್ಲಾಯಿಟೇಷನ್ ಆಗುತ್ತದೆ ಎನ್ನುವುದು ತಮಗೆ ಗೊತ್ತಿದೆ. ಮುಖ್ಯವಾಗಿ ಮಂಗಳೂರಿನವರಿಗೆ ಚೆನ್ನಾಗಿ ಗೊತ್ತಿದೆ, ಹಾರ್ಬರ್‌ನಲ್ಲಿ ೨೦೦-೩೦೦ ಕೋಟಿ ರೂಪಾಯಿಗಳಷ್ಟು ಬೆಲೆಬಾಳುವ ಕಲ್ಲುಗಳಿವೆ ಎಂದು ಅಂದುಕೊಂಡಿದ್ದೇನೆ. ಇದು ಒಂದೊಂದನ್ನೂ ನೋಡಿದರೆ ಸಂತೋಷವಾಗುತ್ತದೆ. ಅದನ್ನು ಎಕ್ಸ್‌ಪ್ಲೈಟ್ ಮಾಡಿ ಜಪಾನಿಗೆ ಕಳಿಸುತ್ತಾರೆ. ಇದರಿಂದ ಬರುವ ಲಾಭವನ್ನು ಇಲ್ಲಿ ಕೊಟ್ಟಿದ್ದಾರೆ. ಇವರ ಲೆಕ್ಕದ ಪ್ರಕಾರ ೩ ಕೋಟಿ ಸರ್ಕಾರಕ್ಕೆ ಬರುತ್ತದೆ. 'The Department has collected revenue from the major and minor minerals a sum of Rs. 677 lakhs during 1987-88 and a sum of Rs. 627.12 lakhs upto end of December 1987' ಇವರು ನ್ಯಾಯವಾಗಿ ನಡೆದುಕೊಂಡು, ಇದರಲ್ಲಿ ಅಧಿಕಾರಿಗಳು ನಿಷ್ಠರಾಗಿದ್ದರೆ, ಎಕ್ಸ್‌ಪ್ಲೈಟ್ ಮಾಡುವವರ ಹತ್ತಿರ ರೆವಿನ್ಯೂ ನ್ಯಾಯವಾಗಿ ಕಲೆಕ್ಟ್ ಮಾಡಿದರೆ ೧೦೦ ಕೋಟಿ ವಸೂಲು ಮಾಡಬಹುದು. ಈ ಸರ್ಕಾರದಲ್ಲಿ ಯಾವಾಗಲೂ ಚೆಕ್ ಬೌನ್ಸ್ ಆಗುತ್ತದೆ ಎಂದು ಹೇಳುತ್ತಾರೆ. ಇಂಥಾದ್ದನ್ನು ರೆಗ್ಯು ಲೇಟ್ ಮಾಡಿದರೆ ೬೭೭ ಲಕ್ಷ ಅಲ್ಲ, ೧೦೦ ಕೋಟಿ ಬರುತ್ತದೆ. ಈ ಬಗ್ಗೆ ಅವರು ಯೋಚನೆ ಮಾಡ ಬೇಕು. ಕಪ್ಪು ಕಲ್ಲು ವ್ಯವಹಾರದಲ್ಲಿ ನಂಜನಗೂಡು-ಮೈಸೂರಿನಲ್ಲಿ ಯಾರೋ ಅಸಿಸ್ಟೆಂಟ್ ಕಮಿಷನರ್ ಪ್ರಿವೆಂಟ್ ಮಾಡಿದರು ಎಂದು ಅವರನ್ನು ಟ್ರಾನ್ಸ್‌ಫರ್ ಮಾಡಿದರು. ಈಗಲೂ ಕೂಡ ದಯವಿಟ್ಟು ಸ್ವಲ್ಪ ಸ್ಟ್ರಿಕ್ಟಾಗಿ ಎನ್‌ಫೋರ್ಸ್ ಮಾಡಿದರೆ ಸರ್ಕಾರದ ಆರ್ಥಿಕ ಪರಿಸ್ಥಿತಿ ಸ್ವಲ್ಪ ಸರಿಹೋಗುತ್ತದೆ. ಇದರಲ್ಲಿ ಎಕ್ಸ್‌ಪ್ಲಾಯಿಟೇಷನ್ ಒಂದು ರೀತಿ ಅಲ್ಲ ನಾನಾ ರೀತಿಯಿಂದ ಆಗುತ್ತಿದೆ, ಲೂಟಿ ಮಾಡುತ್ತಾ ಇದ್ದಾರೆ, ಅದನ್ನು ತಪ್ಪಿಸಬೇಕು ಎಂದು ನಾನು ಮನವಿ ಮಾಡುತ್ತೇನೆ.

ಇನ್ನು ಎರಡನೆಯದಾಗಿ ನಮ್ಮ ಕ್ರೀಡೆಗಳ ಬಗ್ಗೆ ಯುವ ಶಕ್ತಿಯನ್ನು ನಾವು ಯಾವರೀತಿ ಉಪಯೋಗಿಸಿಕೊಳ್ಳುತ್ತಿದ್ದೇವೆಂಬ ಬಗ್ಗೆ ಮಾನ್ಯ ಸದಸ್ಯರಾದ ಕೆ. ಹೆಚ್. ಪಾಟೀಲ್‌ರವರು ಬಹಳ ಚೆನ್ನಾಗಿ ಹೇಳಿದ್ದಾರೆ, ಈ ಬಗ್ಗೆ ಇವರು ಕೊಟ್ಟಿರತಕ್ಕ ಅಂಕಿಸಂಖ್ಯೆಗಳ ಪ್ರಕಾರ ನೋಡಿದರೆ ೧೯೮೭-೮೮ನೇ ಸಾಲಿಗೆ ಅಂದಾಜು ವೆಚ್ಚ ೩೦೨.೨೦ ಲಕ್ಷ ರೂಪಾಯಿಗಳು ಇದರಲ್ಲಿ ಖರ್ಚಾಗಿರತಕ್ಕದ್ದು ೧೯೦.೪೦ ಲಕ್ಷ ರೂಪಾಯಿಗಳು, ಅಂದರೆ ೩ ಕೋಟಿ ರೂ.ನಲ್ಲಿ ಸುಮಾರು ೨ ಕೋಟಿ ಖರ್ಚಾಗಿದೆ- ಇದರಲ್ಲೂ ಕೂಡ ಬಹಳ ಕಡಿಮೆಯಾಗಿದೆ. ಇದರಗ ಸಿಬ್ಬಂದಿಯ ಸಂಬಳಕ್ಕೆ ಸುಮಾರು ೬೦-೭೦ ಪರ್ಸೆಂಟ್ ಹಣ ಹೋಗುತ್ತದೆ, ಇನ್ನುಳಿದ ೩೦-೪೦ ಪರ್ಸೆಂಟ್ ಹಣವನ್ನು ಯುವಜನ ಸೇವೆಗಾಗಿ

ಖರ್ಚಾಗುತ್ತಿದೆ. ಮಾನ್ಯ ಕೆ.ಹೆಚ್. ಪಾಟೀಲ್‌ರವರು ಹೇಳಿದ ಪ್ರಕಾರ ಅರ್ಧದಷ್ಟು ಅಂದರೆ ೮ ಆಣೆಯಷ್ಟು ಅವರಿಗೆ ಸಿಕ್ಕಬಹುದು. ಆದರೂ ಕೂಡ ಈ ಇಲಾಖೆಗೆ ಏನು ೩ ಕೋಟಿ ರೂಪಾಯಿಗಳನ್ನು ಕ್ರೀಡೆಗೋಸ್ಕರ ಕೊಟ್ಟಿದ್ದೀರಿ, ಇದು ಬಹಳ ಕಡಿಮೆ. ಇಷ್ಟು ಕಡಿಮೆ ಹಣದಲ್ಲಿ ಯಾವರೀತಿ ಈ ಯುವಜನರನ್ನು ಉದ್ಧಾರ ಮಾಡುವುದಕ್ಕಾಗುತ್ತದೆಂಬುದನ್ನು ತಾವೇ ಯೋಚನೆ ಮಾಡಬೇಕು. ಈ ಹಣದಲ್ಲಿ ಸುಮಾರು ಮುಕ್ಕಾಲು ಭಾಗ ಹಣ ಈ ಬೆಂಗಳೂರಿನಲ್ಲಿಯೇ ಖರ್ಚಾಗುತ್ತದೆ ಎಲ್ಲೋ ಒಂದೊಂದುಸಾರಿ ಅದೃಷ್ಟ ಖುಲಾಯಿಸಿದಾಗ ಮಂಗಳೂರಿಗೋ, ಕೋಲಾರಕ್ಕೋ ಖರ್ಚುಮಾಡಬಹುದು. ತಾಲ್ಲೂಕು ಮಟ್ಟಕ್ಕೆ ಈ ಯುವಜನ ಸೇವಾ ಇಲಾಖೆಯ ಕಾರ್ಯಕ್ರಮಗಳು ಇನ್ನೂ ಬಂದಿಲ್ಲ. ಗ್ರಾಮೀಣ ಮಟ್ಟದಲ್ಲಂತೂ ರಾಜ್ಯದಲ್ಲಿ ಯುವಜನಸೇವ ಇಲಾಖೆ ಎಂಬುದು ಒಂದಿದೆ ಎನ್ನತಕ್ಕ ವಿಚಾರವೇ ಜನತೆಗೆ ಗೊತ್ತಿಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಮ್ಮ ತಾಲ್ಲೂಕಿನಲ್ಲಿ ಒಂದು ಸ್ಟೇಡಿಯಂನ್ನು ನಿರ್ಮಾಣ ಮಾಡಿಸಬೇಕೆಂದು ಬಹಳ ದಿವಸದಿಂದ ಪ್ರಯತ್ನ ಮಾಡುತ್ತಿದ್ದೇನೆ. ನಮಗೆ ಒಂದು ಸ್ಟೇಡಿಯಂನ್ನು ಕಟ್ಟಿಸಿಕೊಡಿ ಎಂದು ನಾನು ಒಂದು ಅರ್ಜಿಯನ್ನು ಬರೆದರೆ ಅದಕ್ಕೆ ನನಗೆ ಒಂದು ಎಂಡಾರ್ಸ್‌ಮೆಂಟ್ ಬರುತ್ತದೆ. ಅದು ಏನಪ್ಪಾ ಎಂದರೆ, ನಿಮ್ಮ ಅರ್ಜಿಯನ್ನು ಸ್ವೀಕರಿಸಿದೆ. ಇದನ್ನು ಸೂಕ್ತ ರೀತಿಯಲ್ಲಿ ಪರಿಗಣಿಸಲಾಗುತ್ತದೆ. ಎಂದು ನಾನು ಅರ್ಜಿಗಳನ್ನು ಬರೆದೂ ಬರೆದೂ ಬೇಜಾರಾಗಿ ಇನ್ನುಮುಂದೆ ನಾನು ಅರ್ಜಿಯನ್ನು ಬರೆಯುವುದೂ ಬೇಡ. ಇವರು ಅದನ್ನು ಸೂಕ್ತರೀತಿಯಲ್ಲಿ ಪರಿಗಣಿಸುತ್ತೇವೆಂದು ಎಂಡಾರ್ಸ್‌ಮೆಂಟ್ ಕಳಿಸುವುದೂ ಬೇಡ ಅಂತ ನಾನು ಇತ್ತೀಚೆಗೆ ಸುಮ್ಮನಾಗಿಬಿಟ್ಟಿದ್ದೇನೆ. ಕೆ.ಜಿ.ಎಫ್. ಬಹಳ ದೊಡ್ಡ ಊರು ಅಲ್ಲಿ ಒಂದು ಸ್ಟೇಡಿಯಂನ್ನು......

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಇದನ್ನೆಲ್ಲಾ ನೋಡಿದಮೇಲಾದರೂ ಇವರ ಸಹವಾಸವನ್ನು ಬಿಡಿ. ನಮ್ಮ ಕಡೆ ಬನ್ನಿ.

ಶ್ರೀ ಆರ್. ವೆಂಕಟರಾಮಯ್ಯ.—ನೀವೂ ಕೂಡ ಅಧಿಕಾರದಲ್ಲಿ ಸುಮಾರು ೨೫–೩೦ ವರ್ಷ ಇದ್ದೀರಿ. ನೀವು ಅಧಿಕಾರದಲ್ಲಿದ್ದಾಗಲಾದರೂ ನಮಗೆ ಒಂದು ಸ್ಟೇಡಿಯಂನ್ನು ಮಾಡಿಕೊಟ್ಟಿದ್ದರೆ ನಾವು ನಿಮ್ಮ ಕಡೆ ಬರಬಹುದಿತ್ತು. ಆ ಸ್ಟೇಡಿಯಂನ ಮುಂದೆ ಮಾನ್ಯ ಖರ್ಗೆಯವರ ಒಂದು ಪ್ರತಿಮೆಯನ್ನೇ ನಿಲ್ಲಿಸುತ್ತಿದ್ದೆವು.

ಶ್ರೀ ಲಕ್ಷ್ಮೀನರಸಿಂಹಯ್ಯ.—ನಾವು ಕೆಲಸವನ್ನು ಮಾಡಬಹುದೆಂಬ ಭರವಸೆಯಾದರೂ ಇದೆ ಆದರೆ ಈ ಕಾಂಗ್ರೆಸ್‌ನವರು ಏನೂ ಮಾಡುವುದಿಲ್ಲ ಅಂತ ಮಾನ್ಯ ಸದಸ್ಯರಿಗೆ ಗ್ಯಾರಂಟಿಯಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ತಾಲ್ಲೂಕು ಮಟ್ಟದಲ್ಲಿ ಕ್ರೀಡಾ ಕೇಂದ್ರಗಳನ್ನು ಸರ್ಕಾರದವರು ತೆರೆಯಬೇಕು. ಇಲ್ಲಿ ಏನು ತಾವು ೩ ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ ಇದು ಬಹಳ ಕಡಿಮೆ. ಇನ್ನೊಂದು ಮಾತನ್ನು ಹೇಳುವುದಾದರೆ ಇತ್ತೀಚೆಗೆ ಕ್ರಿಕೆಟ್ ಆಟಕ್ಕೆ ಬಹಳ ಪ್ರೋತ್ಸಾಹ ಇದೆ. ಎಲ್ಲಿ ನೋಡಿದರೂ ಕ್ರಿಕೆಟ್ ಆಟವನ್ನು ಆಡುತ್ತಿರುತ್ತಾರೆ. ಬರ್ನಾಡ್ ಷಾರವರು ಹೇಳಿದಂತೆ ೧೧ ಜನ ದಡ್ಡರು ಆಡುತ್ತಿರುತ್ತಾರೆ, ಸಾವಿರಾರು ಜನ ಅದನ್ನು ಕುಳಿತು ನೋಡುತ್ತಿರುತ್ತಾರೆ ಈ ಕ್ರಿಕೆಟ್ ಏನಾದರೂ ಇನ್ನೂ ಹೆಚ್ಚಿನ ಪ್ರೋತ್ಸಾಹ ಸಿಕ್ಕಿದರೆ ಆಫೀಸಿನಲ್ಲೂ ಕೆಲಸ ಇಲ್ಲ, ಮನೆಯಲ್ಲೂ ಕೆಲಸ ಇಲ್ಲ. ಒಂದು ರೀತಿಯಲ್ಲಿ ಪಬ್ಲಿಕ್ ಹಾಲಿಡೆ ಡಿಕ್ಲೇರ್ ಮಾಡಿದಂತಾಗುತ್ತದೆ. ಸ್ವಾಮಿ. ಇದು ಅಂಥ ದೊಡ್ಡ ಆಟವೇನೂ ಅಲ್ಲ, ಜನರ ಶಕ್ತಿಯನ್ನು ಹೆಚ್ಚಿಸುವಂಥ ಆರೋಗ್ಯ ದೃಷ್ಟಿಯಿಂದ ಬಹಳ ಉತ್ತಮವಾದ ಫುಟ್‌ಬಾಲ್, ವಾಲಿಬಾಲ್ ಮುಂತಾದ ಆಟಗಳಿವೆ. ಇವುಗಳಿಗೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ಕೊಡಬೇಕು, ನಾವು ಬೆಂಗಳೂರಿನಿಂದ ನಮ್ಮ ಊರಿಗೆ ಹೋಗಬೇಕಾದರೆ ದಾರಿಯಲ್ಲಿ ಅಂದರೆ ಬೆಂಗಳೂರು ನಗರದಲ್ಲಿ ಒಂದು ಫುಟ್‌ಬಾಲ್ ಸ್ಟೇಡಿಯಂ ಇದೆ. ಅದರ ಕೆಲಸ ಪೂರ್ಣವಾಗಿ ಆಗಿಲ್ಲ, ಅಲ್ಲಿ ಮರಗಿಡಗಳು ಬೆಳೆದು ಒಂದುರೀತಿಯ ಅರಣ್ಯದಂತೆ ಕಾಣುತ್ತದೆ. ಒಂದು ಭಾಗದಲ್ಲಿ ಗುಡಿಸಲುಗಳು ಬಂದು ಒಂದು ಸ್ಲಂ ಬೆಳೆದಿದೆ. ಇನ್ನು ೩ ಕಡೆ ಸ್ಲಂ ಡೆವಲಪ್ ಆದರೆ ಈ ಸ್ಟೇಡಿಯಂ ಪೂರ್ತಿಯಾಗಿ ನಿಮ್ಮ ಕೈ ಬಿಡುತ್ತದೆ, ಅಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ಸುಮಾರು ೫೦೦ ಜನ ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಾರೆ. ಈ ಸ್ಟೇಡಿಯಂನ ಕೆಲಸವನ್ನು ಅರ್ಧಂಬರ್ಧ ಮಾಡಿ ಹಾಗೆಯೇ ಬಿಟ್ಟಿದ್ದಾರೆ. ದಯವಿಟ್ಟು ಇದನ್ನು ಪೂರ್ತಿಮಾಡಿ. ಫುಟ್‌ಬಾಲ್ ಆಟ ಆರೋಗ್ಯದ ದೃಷ್ಟಿಯಿಂದ ಬಹಳ ಉತ್ತಮವಾದ ಆಟ. ಹಳ್ಳಿಗಳಲ್ಲಿ ಇವತ್ತೂ ಕೂಡ ಕಬಡ್ಡಿ, ಕೊಕ್ಕೋ,

ಫುಟ್‌ಬಾಲ್ ಇಂಥ ಆಟಗಳನ್ನು ಆಡುತ್ತಿದ್ದಾರೆ. ನೀವು ಇಂಥ ಆಟಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ನೀವು ಹೇಳುತ್ತಿರುವ ಈ ಸ್ಟೇಡಿಯಂನ ಕಟ್ಟಡಕ್ಕಾಗಿ ಈಗ ೧೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ನೀವು ಏನು ೧೬ ಲಕ್ಷ ರೂಪಾಯಿ ಖರ್ಚುಮಾಡುತ್ತಿದ್ದೀರಿ. ಅದು ಸ್ವಾಹ ಆಗುತ್ತಿದೆ. ಕಟ್ಟಡದ ಕಂಬಿಗಳೆಲ್ಲಾ ಬಿಟ್ಟುಕೊಂಡಿವೆ. ಅಲ್ಲಿ ಹೋಗಿಬರುವವರಿಗೆ ಅವು ಸಲಾಂ ಮಾಡುತ್ತಿವೆ ತಾವು ಯುವಜನ ಖಾತೆಯ ಮಂತ್ರಿಗಳಾದ್ದೀರಿ. ದಯವಿಟ್ಟು ಒಂದುಸಾರಿ ಆ ಸ್ಟೇಡಿಯಂನ್ನು ಹೋಗಿ ನೋಡಿಕೊಂಡು ಬನ್ನಿ. ಆಗ ತಪ್ಪುಗೇ ಗೊತ್ತಾಗುತ್ತದೆ.

೩–೩೦ ಪಿ. ಎಂ.

ಅಲ್ಲಿನ ಕಂಬಿಗಳೆಲ್ಲಾ ಬಾಗಿಕೊಂಡಿವೆ. ಬನ್ನಿ ಎಂದು ನಮಸ್ಕಾರ ಮಾಡುವಂತಿದೆ. ಆದ್ದರಿಂದ ದಯವಿಟ್ಟು ಆ ಫುಟ್‌ಬಾಲ್ ಸ್ಟೇಡಿಯಂಗೆ ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಗ್ರಾಮಾಂತರ ಕ್ರೀಡೆಗಳಿಗೆ ಹೆಚ್ಚಿನ ಒಂದು ಪ್ರೋತ್ಸಾಹವನ್ನು ಕೊಡಬೇಕು. ಮೊದಲು ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡಾಕೂಟಗಳನ್ನು ನಡೆಸುವುದಾದರೆ ಸ್ವಲ್ಪ ಹಣವನ್ನು ಸರ್ಕಾರದಿಂದ ಸಬ್‌ಸಿಡಿ ರೂಪದಲ್ಲಿ ಕೊಡುತ್ತಿದ್ದರು. ಇಲ್ಲಿ ಅದನ್ನು ನಿಲ್ಲಿಸಿಬಿಟ್ಟಿದ್ದಾರೆ. ದೊಡ್ಡದಾಗಿ ಕ್ರೀಡೆಗಳನ್ನು ನಡೆಸುವುದಾದರೆ, ವಾಲಿಬಾಲ್, ಫುಟ್‌ಬಾಲ್, ಕಬ್ಬಡಿಗೆ ಸಬ್ಸಿಡಿ ಕೊಡುತ್ತಿದ್ದರು. ಅದನ್ನು ಈಗ ಮತ್ತೆ ಕೊಡಬೇಕೆಂದು ಕೋರಿಕೊಳ್ಳುತ್ತೇನೆ. ಹಳ್ಳಿಗಾಡುಗಳಲ್ಲಿ ಮನರಂಜನ ಕಾರ್ಯಕ್ರಮಗಳೆಂದು ಒಂದು ವ್ಯವಸ್ಥೆ ಇತ್ತು. ಅದು ಈಗಲೂ ನಡೆಯುತ್ತದೆ ಮತ್ತು ಚೆನ್ನಾಗಿಯೂ ಇರುತ್ತದೆ. ನಾಟಕಗಳನ್ನು ಎಲ್ಲ ವರ್ಗಗಳ ಜನರು ಸೇರಿ ಮಾಡುತ್ತಾರೆ. ಒಂದು ಡ್ರಾಮ ಆಡಬೇಕಾದರೆ ಎರಡು ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಅವರಿಗೆ ಎನ್‌ಕರೇಜ್‌ಮೆಂಟ್ ಕೊಡಲು ಕನಿಷ್ಟ ಪಕ್ಷ ೨೫೦ ರೂಪಾಯಿಗಳ ಸಹಾಯಧನವನ್ನು ಕೊಟ್ಟಲ್ಲಿ ಅದಕ್ಕೆ ಒಂದು ಎನ್‌ಕರೇಜ್‌ಮೆಂಟ್ ಕೊಟ್ಟಂತಾಗುತ್ತದೆ. ಎರಡು ತಿಂಗಳಲ್ಲಿಯೇ ಕಲಿತು ನಾಟಕಮಾಡುತ್ತಾರೆ. ಇದರಿಂದ ಏನಾಗುತ್ತದೆಂದರೆ ಎಲ್ಲ ವರ್ಗದವರು ಒಂದು ಕಡೆ ಸೇರುತ್ತಾರೆ. ಹಳ್ಳಿಗಳಲ್ಲಿ ನಡೆಯುತಕ್ಕಂಥ ವಾಜ್ಯಗಳು ತಂಟೆ ತಕರಾರುಗಳು ಇದರಿಂದ ಕಡಿಮೆಯಾಗಲು ಅವಕಾಶವಾಗುತ್ತದೆ. ಅದಕ್ಕೋಸ್ಕರವಾಗಿಯಾದರೂ ಇವುಗಳಿಗೆ ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳುವುದು. ನಾನು ನಮ್ಮ ತಾಲ್ಲೂಕಿನಲ್ಲಿ ನಡೆದ ಒಂದು ಡ್ರಾಮಾಕ್ಕೆ ಹೋಗಿದ್ದೆ. ಅಥಣಿ, ಸವದತ್ತಿ ಗ್ರಾಮಕ್ಕೆ ಹೋಗಿದ್ದೆ. ನಾವು ಭಾಷಣ ಮಾಡಲು ಹೋದ ಸಮಯದಲ್ಲಿ ಅವರು ಅಂದರೆ ದುರ್ಯೋಧನ, ದುಶ್ಯಾಸನ, ಧರ್ಮರಾಯ ಈ ಪಾರ್ಟುಗಳನ್ನು ಮಾಡಿರುವವರು ಒಂದು ಕಡೆ ಕುಳಿತು ಬೀಡಿ ಕುಡಿಯುತ್ತಿದ್ದರು. ಬಹಳ ತಮಾಷೆಯಾಗಿತ್ತು. ಎಲ್ಲರೂ ಒಂದುಕಡೆ ಕುಳಿತುಕೊಂಡಿದ್ದರಿಂದ ಒಂದು ರೀತಿ ಸಂತೋಷವೂ ಆಯಿತು. ನಾಟಕಮಾಡುತ್ತಾರೆಂದರೆ ಸಾವಿರಾರು ಜನರು ಒಂದು ಕಡೆ ಸೇರುತ್ತಾರೆ. ನಮ್ಮ ಕೋಲಾರದಲ್ಲಿ ನಾಟಕಮಾಡುತ್ತಾರೆಂದರೆ ಸುಮಾರು ೫ ಸಾವಿರ ಜನರು ಸೇರುತ್ತಾರೆ. ಆದ್ದರಿಂದ ೩ ಸಾವಿರದಿಂದ ೫ ಸಾವಿರ ರೂಪಾಯಿಗಳವರೆಗೂ ಖರ್ಚು ಮಾಡುವ ಈ ಡ್ರಾಮಗಳಿಗೆ ಐದು ನೂರು ರೂಪಾಯಿಗಳ ಪ್ರೋತ್ಸಾಹ ಧನವನ್ನು ಕೊಟ್ಟರೆ ಈ ಒಂದು ಕಲೆಗೆ ಪ್ರೋತ್ಸಾಹವನ್ನು ಕೊಟ್ಟಂತಾಗುತ್ತದೆ. ಇದರಿಂದ ಹಳ್ಳಿಗಳಲ್ಲಿ ಪಾರ್ಟಿಗಳು ಇರುವುದಿಲ್ಲ. ಪಾರ್ಟಿಗಳನ್ನು ಮರೆಯುತ್ತಾರೆ. ಎಲ್ಲ ಸೇರಿ ನಾಟಕಮಾಡುತ್ತಾರೆ. ದಯವಿಟ್ಟು ಯುವಜನ ಸೇವೆ ಎಂದು ಏನು ಹೇಳುತ್ತೀರಿ, ಈ ಯುವಜನ ಸೇವೆಗೆ ಹೆಚ್ಚಿನ ಕಾಳಜಿಯನ್ನು ವಹಿಸಿ ಹಳ್ಳಿಗಾಡುಗಳಲ್ಲಿರುವ ಯುವಜನರನ್ನು ಗಮನಿಸಿ ಹಳ್ಳಿಗರ ಆಟಪಾಠ ಮತ್ತು ಸಂಸ್ಕೃತಿಗೆ ಪ್ರೋತ್ಸಾಹ ಕೊಡುತ್ತೀರೆಂದು ನಂಬಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಜಿ. ನಂಜಯ್ಯನ ಮಠ್ (ಗುಳೇದಗುಡ್ಡ).—ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಮಂಡಿಸಿರುವಂಥ ಸಾರ್ವಜನಿಕ ಸೇವಾ ಮತ್ತು ಕ್ರೀಡೆ ಹಾಗೂ ಗಣಿ ಮತ್ತು ಭೂ ವಿಜ್ಞಾನಕ್ಕೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ಮಾತನಾಡುತ್ತಾ ಯುವಜನ ಮತ್ತು ಕ್ರೀಡಾ ಇಲಾಖೆಗೆ ನಿಗದಿಪಡಿಸಿರುವಂತೆ ಹಣ ನೋಡಿದಾಗ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ಅರ್ಧದಷ್ಟು ಇರುವಂಥ ರಾಜ್ಯದ

ಯುವಜನರಿಗೆ ಕೊಟ್ಟಿರುವ ಹಣವನ್ನು ನೋಡಿದರೆ ಎಷ್ಟೊಂದು ಪ್ರೋತ್ಸಾಹ, ಪುರಸ್ಕಾರ ಕ್ರೀಡೆಗೆ ಕೊಟ್ಟಿದ್ದಾರೆ ಎನ್ನುವುದು ಇಲ್ಲಿ ವಿನಿಯೋಗ ಮಾಡಿರುವ ಹಣಕಾಸು ನಿಂದಲೇ ಅರ್ಥವಾಗುತ್ತದೆ ಎನ್ನುವಮಾತನ್ನು ಇಲ್ಲಿ ಪ್ರಾರಂಭಿಸುತ್ತಾ ಇದನ್ನು ವಿರೋಧಿಸಿ ತಮ್ಮ ಮೂಲಕವಾಗಿ ಸರ್ಕಾರಕ್ಕೆ ಲವು ವಿಚಾರಗಳನ್ನು ಸೂಚಿಸಲು ಪ್ರಯತ್ನಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಪ್ರಜಾಪ್ರಭುತ್ವದಲ್ಲಿ ಹಲವಾರು ಒಳ್ಳೆಯ ವಿಷಯಗಳನ್ನು, ಹಲವಾರು ಒಳ್ಳೆಯ ಸೂಚನೆಗಳನ್ನು, ಹಲವಾರು ಒಳ್ಳೆಯ ಪ್ರತಿಕ್ರಿಯೆಯನ್ನು ಉಂಟುಮಾಡವಂಥದ್ದು ಇರುತ್ತದೆ ಆ ಪದ್ಧತಿಯನ್ನು ಅನುಸರಿಸುವಂಥ ಸಂದರ್ಭ ಬಂದಾಗ ಒತ್ತಾಯ ಪೂರ್ವಕವಾಗಿಯಾದರೂ ಆ ಒಂದು ಪದ್ಧತಿಯನ್ನು ಅನುಸರಿಸಿದರೆ ಅದರ ಹಿನ್ನೆಲೆಯಲ್ಲಿರತಕ್ಕಂಥ ಒಂದು ಉತ್ಕರ್ಷವಾಗಿರತಕ್ಕಂಥ ಧ್ಯೇಯ, ಆದರ್ಶ, ಉದ್ದೇಶ ಈಡೇರಲು ಸಾಧ್ಯವಾಗುತ್ತದೆ. ಪ್ರಮುಖವಾಗಿ ನಾನು ಈ ಸಂದರ್ಭದಲ್ಲಿ, ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಯಾವುದೇ ಇಲಾಖೆಯ ಬೇಡಿಕೆ ಮೇಲೆ ಚರ್ಚೆಯಾಗತಕ್ಕ ಸಂದರ್ಭದಲ್ಲಿ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿ ಇರಬೇಕು. ಆದರೆ ಇಲ್ಲಿ ಏನಾಗಿದೆ ಎಂದರೆ ದುರ್ಯೋಧನನ ಪಾತ್ರ ಮಾಡುವವರಿಗೆ ದ್ರೌಪದಿಯ ಮಾತನ್ನು ಹೇಳುವುದು. ದ್ರೌಪದಿಯ ಪಾತ್ರ ಮಾಡುವವರಿಗೆ ಕೃಷ್ಣನ ಮಾತನ್ನು ಹೇಳ ವುದಾಗಿದೆ. ಇಲ್ಲಿರತಕ್ಕ ಸಚಿವರು ನಾಳೆ ಯಾವ ಪಾತ್ರವನ್ನು ವಹಿಸುತ್ತಾರೋ ಗೊತ್ತಿಲ್ಲ. ಶಿಖಂಡಿಯ ಮಾತನ್ನು ಹೇಳುವ ಪ್ರಸಂಗ ಏನಾದರೂ ಬರುತ್ತದೇನೋ ಏನೋ ಗೊತ್ತಿಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ತಾತ್ಪೂರ್ತಿಕವಾಗಿರತಕ್ಕ ಇಲಾಖೆಯನ್ನು ವಹಿಸಿಕೊಂಡಿರತಕ್ಕ ಸಚಿವರ ಎದುರಿಗೆ ಇಲಾಖೆಯ ಯಾವುದೇ ಬೇಡಿಕೆಯಾಗಲಿ, ಸೂಚನೆಯಾಗಲಿ ಬರೆದುಕೊಳ್ಳುವುದಕ್ಕೆ ಉಳಿಯುತ್ತದೆಯೇ ಹೊರತು ಪರಿಣಾಮಕಾರಿಯಾಗಿ ಜಿಜ್ಞಾಸೆ ಯಿಂದ ಕೇಳಿ ಪರಿಶೀಲಿಸಿ ಅದನ್ನೆಲ್ಲಾ ಜಾರಿ ಮಾಡಿದರೆ ರಾಜ್ಯಕ್ಕೆ ಒಳ್ಳೆಯದಾದೀತು ಎಂಬ ಕಲ್ಪನೆ ಬರುವುದಕ್ಕೆ ಸಾಧ್ಯ. ಆದರೆ ಇದು ಅವರ ಇಲಾಖೆ ಅಲ್ಲ. ಇದು ನಮ್ಮ ದುರ್ದೈವವೋ ಅಥವಾ ರಾಜ್ಯದ ದುರ್ದೈವವೋ ಏನೋ ಗೊತ್ತಿಲ್ಲ, ಏನೇ ಆಗಲಿ ನಾವು ಹೇಳಬೇಕಾದುದನ್ನು ಹೇಳ ಬೇಕಾಗುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.—ಇಷ್ಟು ಸ್ವಾರಸ್ಯವಾಗಿ ಮಾತನಾಡುವಾಗ ಸಂಬಂಧಪಟ್ಟ ಮಂತ್ರಿ ಗಳು ಎಲ್ಲಿದ್ದಾರೆ ? ಯಾವಾಗ ಬರುತ್ತಾರೆ ? ಇದು ಎಣ್ಣೆ ಬರುವಾಗ ಗಾಣ ಮುರಿಯಿತು ಅಂದ ಹಾಗೆ ಆಯಿತು.

ಶ್ರೀ ಎಸ್. ಜಿ. ಸಂಜಯ್ಯನ ಮಠ.—ಇರಲಿ, ಲಕ್ಷ್ಮೀಸಾಗರ್‌ರವರು ಸಭೆಗೆ ಬಂದರು. ಸಮಸ್ಯೆ ಬಗೆಹರಿಯಿತು ಎಂದು ಕಾಣುತ್ತದೆ. ಕಡ್ಡಾಯದ ವಿಷಯವಾಗಿ ನಾನು ಪ್ರಸ್ತಾಪ ಮಾಡುತ್ತಿರುವಂಥ ವಿಷಯ ಏನೆಂದರೆ, ಕಾಲೇಜು ಮಟ್ಟದಲ್ಲಿ, ಹೈಸ್ಕೂಲು ಮಟ್ಟದಲ್ಲಿ ಮತ್ತು ಪ್ರೌಢಶಾಲೆ ಮಟ್ಟದಲ್ಲಿ ಕೆಲವೊಂದು ಯೋಜನೆಗಳನ್ನು ಕಡ್ಡಾಯವಾಗಿ ಜಾರಿ ಮಾಡಬೇಕಾಗುತ್ತದೆ. ಏಕೆಂದರೆ ಆ ಸಂದರ್ಭದಲ್ಲಿ ವಿದ್ಯಾರ್ಥಿಗಳ ಸಂಪೂರ್ಣ ಮಾನಸಿಕ ಬೆಳವಣಿಗೆ ಆಗಿರುವುದಿಲ್ಲ. ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂದು ನಿರ್ಧಾರ ಮಾಡುವಂಥ ಪ್ರಾಪ್ತ ವಯಸ್ಸಿಗೆ ಆ ವಿದ್ಯಾರ್ಥಿ ಗಳು ಬಂದಿರುವುದಿಲ್ಲ, ಅವರು ಒಂದು ನಿರ್ಧಾರಕ್ಕೆ ಬರಲು ಅವರ ಮಾನಸಿಕ ಬೆಳವಣಿಗೆ ಆಗಿರು ವುದಿಲ್ಲ. ಅಂಥ ಸಂದರ್ಭದಲ್ಲಿ ಯಾವುದು ಒಳ್ಳೆಯದು ಎಂಬುದನ್ನು ಸರ್ಕಾರವೇ ತೀರ್ಮಾನ ಮಾಡಿ ಒತ್ತಾಯಪೂರ್ವಕವಾಗಿಯಾದರೂ ಆ ಸಂದರ್ಭದಲ್ಲಿ ಅವರ ಮೇಲೆ ಹೇರ ಬೇಕಾಗುತ್ತದೆ. ಅದು ರಾಜ್ಯದ ಮತ್ತು ರಾಷ್ಟ್ರದ ಒಳಿತಿನ ದೃಷ್ಟಿಕೋನದಿಂದ ಆಗಬೇಕು. ಅಂಥದ್ದು ಯಾವುದು ಎಂದರೆ ಇವತ್ತು ಎನ್. ಸಿ. ಸಿ. ಇದೆ. ಇದು ಶಿಸ್ತು, ಸಂಯಮ, ರಾಷ್ಟ್ರೀಯ ಭಾವನೆ, ಜಾತ್ಯಾತೀತ ಭಾವನೆ, ರಾಷ್ಟ್ರಪ್ರೇಮ ಮತ್ತು ರಾಷ್ಟ್ರಭಕ್ತಿಯನ್ನು ಸಮುದಾಯದಲ್ಲಿ ಉಂಟು ಮಾಡುವಂಥ ಒಂದು ವಿಶಾಲ ಅರ್ಥವನ್ನು ಹೊಂದಿರತಕ್ಕದ್ದಾಗಿದೆ. ಆದರೆ ಅದು ಕಾಲೇಜುಗಳಲ್ಲಿ ಮತ್ತು ಹೈಸ್ಕೂಲು ಗಳಲ್ಲಿ ಎಷ್ಟರಮಟ್ಟಿಗೆ ನಡೆಯುತ್ತದೆ ? ಇಷ್ಟೊಂದು ದೊಡ್ಡ ಪ್ರಮಾಣದ ಹಿನ್ನೆಲೆಯನ್ನು ಉದ್ದೇಶವನ್ನು ಹೊಂದಿರುವ ಎನ್. ಸಿ. ಸಿ.ಗೆ ಎಷ್ಟರ ಮಟ್ಟಿಗೆ ಪ್ರಾಧಾನ್ಯತೆ ದೊರೆಯುತ್ತಿದೆ ? ರಾಷ್ಟ್ರಭಕ್ತಿ, ರಾಷ್ಟ್ರಪ್ರೇಮ, ರಾಷ್ಟ್ರೀಯ ಭಾವೈಕ್ಯತೆ, ಐಕ್ಯತೆ, ಜಾತ್ಯಾತೀತ ಮನೋಭಾವನೆ ಯನ್ನು ಸೃಷ್ಟಿ ಮಾಡುವಂತಹ ಎನ್. ಸಿ. ಸಿ. ಗೆ ರಾಜ್ಯ ಸರ್ಕಾರ ಎಷ್ಟರ ಮಟ್ಟಿಗೆ ಕಾಲೇಜು ಮಟ್ಟ ದಲ್ಲಿ ಪುರಸ್ಕರಿಸುತ್ತಿದೆ ಎಂಬುದನ್ನು ನೋಡಿದಾಗ ಇದಕ್ಕೆ ಬೇಕಾದವ ಬಂದ, ಬೇಡದವ ಬಿಟ್ಟ ಎಂಬ ರೀತಿಯಲ್ಲಿದೆ.

ಅಧ್ಯಕ್ಷರೇ, ೨೦ನೇ ಶತಮಾನದಲ್ಲಿ, ವೈವಿಧ್ಯಪೂರ್ಣವಾಗಿರುವಂಥ ಜೀವನವನ್ನು ಕಳೆಯುವಂಥ ವಿದ್ಯಾರ್ಥಿಗಳಲ್ಲಿ ಮಾನಸಿಕವಾಗಿ ರಾಷ್ಟ್ರೀಯ ಭಾವೈಕ್ಯತೆ, ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿ ಬೆಳೆಸುವಂಥ ಕೆಲಸಗಳನ್ನು ಸರ್ಕಾರ ಕಡ್ಡಾಯವಾಗಿ ಮಾಡಿದಾಗ ಆ ಭಾವನೆಗಳಿಗೆ ವಿದ್ಯಾರ್ಥಿಗಳು ಸಮೀಪವಾಗಿ ಬರಲು ಸಾಧ್ಯವಾಗುತ್ತದೆ. ಇದಕ್ಕೆ ಬದಲು ಬೇಕಾದವ ತೆಗೆದುಕೊಳ್ಳಬಹುದು, ಬೇಡವಾದವ ಬಿಡಬಹುದು ಎಂಬುದನ್ನು ಮಾಡಿದಾಗ ಸ್ವಾಭಾವಿಕವಾಗಿ ನೋಡಲು ಕಠಿಣವಾಗಿ ಇರತಕ್ಕ ಹಾಗೂ ಅನುಸರಿಸಲೂ ಕಠಿಣವಾಗಿರತಕ್ಕ ಈ ಎನ್.ಸಿ.ಸಿ. ಗೆ ಸೇರಬೇಕೆಂಬ ಭಾವನೆ ಎಲ್ಲರಿಗೂ ಬರುವುದಿಲ್ಲ. ವೈವಿಧ್ಯಪೂರ್ಣವಾಗಿರುವಂಥ, ರಂಗುರಂಗಿನ ಜೀವನ ಕಳೆಯುವಂಥ ವಿದ್ಯಾರ್ಥಿಗಳ ಮನಸ್ಸು ಎನ್.ಸಿ.ಸಿ. ಯಿಂದ ದೂರವಾಗಿರಬೇಕು ಎಂಬ ಭಾವನೆ ಬೆಳೆಯುತ್ತದೆ. ಎನ್.ಸಿ.ಸಿ ತೆಗೆದುಕೊಳ್ಳದೇ ಇರತಕ್ಕ ವಿದ್ಯಾರ್ಥಿಗಳನ್ನು ಪಾಸ್ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಸರ್ಕಾರದ ನಿರ್ಣಯ ಆದಾಗ ಮಾತ್ರ ಸ್ವಾಭಾವಿಕವಾಗಿ ಒಲ್ಲದ ಮನಸ್ಸಿನಿಂದಲಾದರೂ ಆ ವಿಷಯದಲ್ಲಿ ಪಾದಾರ್ಪಣ ಮಾಡುವ ವಿದ್ಯಾರ್ಥಿ ದಿನಗಳೆದಂತೆ, ವಾರ ಕಳೆದಂತೆ ಆಸಕ್ತಿಯನ್ನು ಬೆಳೆಸಿಕೊಳ್ಳುತ್ತಾನೆ. ಇದರಿಂದ ತಮ್ಮ ಉದ್ದೇಶ ಸಫಲವಾಗುತ್ತದೆ. ಇದು ಸಂಪೂರ್ಣವಾಗಿ ಮಾನಸಿಕವಾದಂಥ ಬೆಳವಣಿಗೆಯನ್ನು ಬೆಳೆಸಿಕೊಳ್ಳದೇ ಇರುವ ವಿದ್ಯಾರ್ಥಿಗಳ ಮೇಲೆ ಒತ್ತಡ ಹೇರಬೇಕಾದುದು ಹಾಗೂ ಒತ್ತಡ ಹೇರಬೇಕಾದ ಹಿನ್ನಲೆ ಜಾತ್ಯಾತೀತ ಭಾವನೆ, ರಾಷ್ಟ್ರಭಕ್ತಿ ಮತ್ತು ರಾಷ್ಟ್ರಪ್ರೇಮದ ಭಾವನೆ ಬರಬೇಕೆಂಬುದು. ಎನ್.ಸಿ.ಸಿ. ಡ್ರೆಸ್ ಹಾಕಿಕೊಂಡಿರತಕ್ಕ ಸಂದರ್ಭದಲ್ಲಿ ಒಂದು ರೀತಿಯಾದ ಭಾವನೆ ಬರುತ್ತದೆ. ನಾನೂ ಕೂಡ ಆರು ವರ್ಷ ಎನ್.ಸಿ.ಸಿ. ಕೆಡೆಟ್ ಆಗಿ ಕಾಲೇಜಿನಲ್ಲಿ ಓದುವಾಗ ಡ್ರೆಸ್ ಹಾಕಿಕೊಂಡಿರತಕ್ಕ ಸಂದರ್ಭದಲ್ಲಿ ನಮ್ಮ ಭಾವನೆಗಳು ಯಾವರೀತಿ ಇತ್ತು ಎಂಬುದನ್ನು ಗಮನಿಸಿದ್ದೇನೆ. ಎನ್.ಸಿ.ಸಿ. ಡ್ರೆಸ್ ಹಾಕಿದ್ದಾಗ ಶಿಸ್ತಿನಿಂದ ಇರಬೇಕು, ಬೂಟ್ ಪಾಲಿಷ್ ಮಾಡಿಕೊಳ್ಳದೇ ಹೋದರೆ ಪಾಲಿಷ್ ಮಾಡಿಕೊಳ್ಳಬೇಕು, ಇಸ್ತ್ರಿ ಮಾಡಿಕೊಳ್ಳಬೇಕು, ಜೀವನದಲ್ಲಿ ಶಿಸ್ತನ್ನು ಕಲಿಯಬೇಕು ಎಂಬ ಭಾವನೆ ಬೆಳೆಯುತ್ತದೆ. ಈ ರಾಷ್ಟ್ರಕ್ಕೆ ಗಂಡಾಂತರ ಆಗಿರತಕ್ಕ ಸಂದರ್ಭ ಬಂದಾಗ ನಮ್ಮ ಪಾತ್ರ ಏನು, ಗಂಡಾಂತರ ಯಾವ ಕಾರಣದಿಂದ ಬಂದಿರಬಹುದು, ದೇಶದ ವಿಷಯವಾಗಿ, ರಾಷ್ಟ್ರದ ವಿಷಯವಾಗಿ, ರಾಷ್ಟ್ರಭಕ್ತಿಯ ವಿಷಯವಾಗಿ, ಸ್ವಾತಂತ್ರ್ಯ ತಂದುಕೊಟ್ಟಿರತಕ್ಕ ಹಿನ್ನೆಲೆ ವಿಷಯವಾಗಿ ವಿದ್ಯಾರ್ಥಿಗಳಲ್ಲಿ ಒಳ್ಳೆಯ ಭಾವನೆ ಮೂಡಿ ಅವರು ಪರಿಣಾಮಕಾರಿಯಾಗಿ ಪಾತ್ರ ವಹಿಸುವುದಕ್ಕೆ ಶಕ್ಯವಾಗುತ್ತದೆ ಎಂದು ಈ ವರದಿಯಲ್ಲಿ ಕೆಲವು ವಿಚಾರಗಳನ್ನು ಬರೆದಿದ್ದೀರಿ. ಭಾರತ ಸೇವಾ ದಳ ಮಹಾತ್ಮ ಗಾಂಧಿಯವರ ತತ್ವಗಳ ಮೇಲೆ ಇದೆ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಒಂದು ಸ್ವಯಂ ಸೇವಕ ಯುವ ಸಂಸ್ಥೆ, ಇದರ ಧ್ಯೇಯೋದ್ದೇಶಗಳು ಸ್ಕೌಟ್ಸ್ ಮತ್ತು ಗೈಡ್ಸ್ ನಿಯಮಾವಳಿಗೆ ಒಳಪಟ್ಟಿವೆ. ಯುವಕರಲ್ಲಿ ದಕ್ಷತೆ, ಸನ್ನದತೆ, ಸಮಾಜಸೇವೆ, ಜನಸೇವೆ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಈ ಸಂಸ್ಥೆಯು ವಿದ್ಯಾರ್ಥಿಗಳ ಮೂಲಕ ನಡೆಸುತ್ತಿದೆ ಎಂದು ಹೇಳಿದ್ದೀರಿ. ಅಂದಮೇಲೆ ದಕ್ಷತೆ, ಸನ್ನಡತೆ, ಸಮಾಜಸೇವೆಯನ್ನು ಹೆಚ್ಚು ಮಾಡುವಂಥ ಯೋಜನೆಗಳು ಕಡ್ಡಾಯವಾಗಿ ಆದಾಗ ಮಾತ್ರ ಈ ಭಾವನೆಗಳು ವಿದ್ಯಾರ್ಥಿಗಳ ಹೃದಯದಮೇಲೆ ಪರಿಣಾಮ ಬೀರಬಲ್ಲದೇ ಹೊರತು ಬೇಕಾದರೆ ತೆಗೆದುಕೊಳ್ಳಬಹುದು, ಇಲ್ಲದಿದ್ದರೆ ಬಿಡಬಹುದು ಎಂಬ ನಿರ್ಣಯ ಇದ್ದರೆ ಬೀರುವುದಿಲ್ಲ. ಸಂಪೂರ್ಣವಾಗಿ ಮಾನಸಿಕವಾದ ನಿರ್ಧಾರಕ್ಕೆ ಬರದೇ ಇರುವ ವಿದ್ಯಾರ್ಥಿಗಳ ಮೇಲೆ ಪರಿಣಾಮಕಾರಿಯಾಗುವುದಕ್ಕೆ ಶಕ್ಯವಾಗುವುದಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ರಾಜ್ಯ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಪ್ರತಿಯೊಬ್ಬ ವಿದ್ಯಾರ್ಥಿಯೂ ಎನ್.ಸಿ.ಸಿ. ಕೆಡೆಟ್ ಆಗಲೇಬೇಕು ಎಂದು ಕಡ್ಡಾಯ ಮಾಡಬೇಕು. ಆಗ ಅದರ ಹಿನ್ನೆಲೆಯಲ್ಲಿ ಇರತಕ್ಕ ಸಂಯಮತೆ, ಶಿಸ್ತು, ರಾಷ್ಟ್ರಭಕ್ತಿ ಮತ್ತು ರಾಷ್ಟ್ರಪ್ರೇಮ ಈ ಭಾವನೆಗಳಿಗೆ ಸ್ಪಂದಿಸುವುದಕ್ಕೆ ಸಾಧ್ಯವಾಗುತ್ತದೆ. ರಾಜ್ಯ ಸರ್ಕಾರ ಯುವಜನರ ವಿಷಯದಲ್ಲಿ ಉತ್ತಮವಾದ ಕಾರ್ಯವೈಖರಿ ಮಾಡಬೇಕಾದರೆ ಎನ್.ಸಿ.ಸಿ. ಯನ್ನು ಕಡ್ಡಾಯವಾಗಿ ಪ್ರತಿಯೊಬ್ಬ ವಿದ್ಯಾರ್ಥಿ ಅನುಸರಿಸುವಂಥದ್ದನ್ನು ಜಾರಿ ಮಾಡಬೇಕೆಂದು ಒತ್ತಾಯ ಪೂರ್ವಕವಾಗಿ ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ

(ಸಭಾಧ್ಯಕ್ಷ ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನ್ಯಾಷನಲ್ ಸೋಷಿಯಲ್ ಸರ್ವೀಸ್ ಕೂಡ ಅಷ್ಟೊಂದು ಪರಿಣಾಮಕಾರಿಯಾಗಿರತಕ್ಕ ಒಂದು ವಿಷಯ. ಒಂದು ವಾರದಲ್ಲಿ ಕೇವಲ ಎರಡು ಪೀರಿಯಡ್‌ಗಳು ಇದಕ್ಕೆ ಇರುತ್ತವೆ. ಎನ್.ಎಸ್.ಎಸ್ ನಲ್ಲಿ ಕೂಡ ನಾನು ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಕೆಲಸ ಮಾಡಿದಾಗ ನಮ್ಮ ಮನಸ್ಸಿನಲ್ಲಿ

ಆಗಿರತಕ್ಕ ಪರಿಣಾಮದ ಹಿನ್ನೆಲೆಯಲ್ಲಿ ಸರ್ಕಾರ ಈ ವಿಷಯದಲ್ಲೂ ವಿದ್ಯಾರ್ಥಿಗಳಿಗೆ ಕಡ್ಡಾಯ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಎನ್. ಎಸ್.ಎಸ್. ನಲ್ಲಿ ಪಾಲ್ಗೊಂಡಾಗ ನಮ್ಮ ಭಾವನೆಗಳು ಬದಲಾಗುತ್ತವೆ. ನನ್ನಿಂದ ಸಮಾಜಕ್ಕೆ ರಾಷ್ಟ್ರಕ್ಕೆ ಕಿಂಚಿತ್ ಸೇವೆಯನ್ನು ಮಾಡಬೇಕೆಂಬ ವಿಚಾರ, ಆಸೆ, ಒಂದು ರೀತಿಯಾಗಿರತಕ್ಕ ಭಾವನೆ ಬರುತ್ತದೆ ರಾಷ್ಟ್ರೀಯ ಸೇವಾ ಯೋಜನೆಯನ್ನು ಕಡ್ಡಾಯ ಮಾಡದೇ ಹೋದರೆ ಇದು ಉತ್ತಮವಾದ ಪ್ರತಿಕ್ರಿಯೆ ಕೊಡಬಲ್ಲದೆ? ಇಂತಹ ಒಂದು ವಿಷಯದಲ್ಲಿ ಎನ್‌ಸಿಸಿ ಆಗಲೀ, ಎನ್‌ಎಸ್‌ಎಸ್ ಆಗಲೀ, ಪ್ರಾಥಮಿಕ ಹಂತದ ಹೈಸ್ಕೂಲು ಮಟ್ಟದಲ್ಲಿ ಸ್ಕೌಟ್‌ಗಾಗಲೀ ಸರ್ಕಾರ ಒತ್ತಾಯ ಪೂರ್ವಕವಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಪರಿಪಾಲಿಸಬೇಕೆನ್ನುವ ನೀತಿಯನ್ನು ಜಾರಿಗೆ ತಂದರೆ ಈ ಯೋಜನೆಯ ಹಿನ್ನೆಲೆಯಲ್ಲಿ ರಾಷ್ಟ್ರ ಪ್ರೇಮದಿಂದ ಹಿಡಿದು ರಾಷ್ಟ್ರೀಯ ಒಂದು ಭಾವನೆಯನ್ನು ಹೊಂದಿರತಕ್ಕ, ಇವುಗಳನ್ನು ರೂಪಿಸಿರತಕ್ಕವರಿಗೆ ಒಂದು ಸಮಾಧಾನವನ್ನು ತಂದುಕೊಡುವುದರ ಜೊತೆಗೆ ಸಮಾಜದಲ್ಲಿ ಉತ್ತಮವಾದ ಪರಿಣಾಮ ಒಂದು ಒಳ್ಳೆಯ ವಾತಾವರಣ ಈ ಯುವ ಜನಾಂಗದಿಂದ ಬರಬಹುದು ಎನ್ನುವ ನಿರೀಕ್ಷೆಯನ್ನು ಇಟ್ಟುಕೊಂಡು ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಎನ್‌ಸಿಸಿ ಆಗಲೀ, ಎನ್‌ಎಸ್‌ಎಸ್ ಆಗಲೀ, ಪ್ರಾಥಮಿಕ ಶಾಲಾ ಹಂತದಲ್ಲಿ ಸ್ಕೌಟ್ ಆಗಲೀ ಒತ್ತಾಯ ಪೂರ್ವಕವಾಗಿ ಪ್ರತಿಯೊಬ್ಬ ವಿದ್ಯಾರ್ಥಿ ಅಳವಡಿಸಿಕೊಂಡಿರಬೇಕು ಎನ್ನುವ ಆಧಾರದ ಮೇಲೆ ನಿರ್ಮಿಸಬೇಕೆಂಬ ಆಜ್ಞೆಯನ್ನು ಸರ್ಕಾರ ಹೊರಡಿಸಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ. ಕರ್ನಾಟಕ ಯುವ ಸೇವಾ ದಳವಾಗಲೀ ಅಥವಾ ಇನ್ನಾವುದಾಗಲೀ ಇಂತಹ ಒಂದು ಭಾವನೆಗಳನ್ನು ವ್ಯಕ್ತ ಮಾಡುವ ಯೋಜನೆಗಳು ಏನು ಪುಸ್ತಕದಲ್ಲಿ ಉತ್ತಮ ಶಬ್ದಗಳಲ್ಲಿ ಇವೆಯೋ ಇವುಗಳನ್ನು ಕಡ್ಡಾಯವಾಗಿ ರೂಪಿಸುವುದು ರಾಜ್ಯ ಸರ್ಕಾರದ ಮೇಲೆ ಇದೆ ಎಂದು ಹೇಳುವುದರ ಜೊತೆಗೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಕ್ರೀಡಾ ಸಂಘಟನೆಯಾಗಲೀ, ಕ್ರೀಡಾ ಪ್ರೋತ್ಸಾಹವಾಗಲೀ ಶಹರ ಮಟ್ಟಕ್ಕೆ ಹೋಲಿಸಿದರೆ ಇಲ್ಲಿರತಕ್ಕ ಪ್ರೋತ್ಸಾಹಕ್ಕೆ ಹೋಲಿಕೆ ಮಾಡಿದಾಗ ಇನ್ನೂ ಗ್ರಾಮೀಣ ಪ್ರದೇಶದಲ್ಲಿ ತಿರಸ್ಕಾರ ದೃಷ್ಟಿಯಿಂದಲೇ ಇವತ್ತಿಗೆ ಈ ಯೋಜನೆಗಳನ್ನು ನೋಡತಕ್ಕದ್ದಾಗಲೀ, ಮಾಡುತ್ತಿರುವುದಾಗಲೀ, ಸಧ್ಯಕ್ಕೆ ಇರುವ ಪ್ರೋತ್ಸಾಹವಾಗಲೀ ನೋಡಿದರೆ ಕಂಡುಬರುತ್ತದೆ. ಗ್ರಾಮೀಣ ಯುವಕರಿಗೆ ಯಾವುದೇ ಉತ್ತಮವಾದ ಪ್ರೋತ್ಸಾಹಕರವಾದ ಪ್ರತಿಕ್ರಿಯೆಯನ್ನು ಸರ್ಕಾರ ಸೂಚಿಸಿಲ್ಲವೆಂದು ಸರ್ಕಾರದ ರೀತಿನೀತಿಯಿಂದಲೇ ನಮಗೆ ಗೊತ್ತಾಗುತ್ತದೆ. ಇದು ನನ್ನ ಸ್ಪಷ್ಟ ಆರೋಪ. ಏಕೆಂದರೆ ಸಾಕಷ್ಟು ರೀತಿಯ ವೈವಿಧ್ಯವಾಗಿರತಕ್ಕ ವರ್ಣಮಯ ಬದುಕನ್ನು ಗ್ರಾಮಾಂತರದಲ್ಲಿ ನಡೆಸುತ್ತಾರೆ. ಕಬ್ಬಡ್ಡಿಯಾಗಲೀ ಕೊಕ್ಕೋ ಆಗಲೀ ಕುಂಟಲ್ಪಿಯಾಗಲಿ, ನಾಟಕ, ಏಕಪಾತ್ರಾಭಿನಯದಂತಹ ಕ್ರೀಡೆಗಳಲ್ಲಿ ಯುವಜನರು ಅನುಸರಿಸುವ ಕ್ರೀಡೆಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಇದರ ಜೊತೆಗೆ ಒಂದೊಂದು ವಿಪರ್ಯಾಸವನ್ನು ನಾವು ನೋಡುತ್ತೇವೆ ಏನೆಂದರೆ, ಮೊನ್ನೆ ನಾನು ಒಂದು ಗ್ರಾಮೀಣ ಪ್ರದೇಶದಲ್ಲಿ ತಾಲ್ಲೂಕು ಯುವಜನ ಮೇಳ ಎನ್ನತಕ್ಕ ಒಂದು ಮೇಳಕ್ಕೆ ಅತಿಥಿಯಾಗಿ ಹೋಗಿದ್ದೆ. ಈ ಮೇಳದ ಬಗ್ಗೆ ಸರ್ಕಾರಿ ಅಧಿಕಾರಿಗಳು ಜಾರಿ ಮಾಡಿದ ನೋಟೀಸ್ ಯಾವ ರೀತಿ.

ಇತ್ತು, ಆ ಆಜ್ಞೆ ಯಾವರೀತಿ ಇತ್ತು ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದು ಯಾವ ತಿಂಗಳು ನಡೆಯಿತು ಎಂದು ನನಗೆ ಸರಿಯಾಗಿ ಗೊತ್ತಿಲ್ಲ. ಯಾವುದೋ ಒಂದು ತಿಂಗಳ ೧೫ನೇ ತಾರೀಖಿನ ಒಳಗಾಗಿ ತಾಲ್ಲೂಕು ಮಟ್ಟದ ಯುವಜನ ಮೇಳ ಪೂರ್ತಿ ಮಾಡಬೇಕೆಂದು ೯ನೇ ತಾರೀಖು ತಿಳಿಸಿರುತ್ತಾರೆ ೯ನೇ ತಾರೀಖು ನೋಟೀಸು ಕೊಟ್ಟು ೧೫ನೇ ತಾರೀಖಿನ ಒಳಗೆ ತಾಲ್ಲೂಕು ಮಟ್ಟದ ಯುವಜನ ಮೇಳ ಪೂರ್ತಿ ಮಾಡಬೇಕು ಏಕೆಂದರೆ ಎಲ್ಲಾ ತಾಲ್ಲೂಕುಗಳಲ್ಲಿ ಯುವಜನ ಮೇಳವನ್ನು ಪೂರ್ತಿ ಮಾಡಿದ್ದೇವೆ ಎಂದು ಇವರಿಗೆ ಉತ್ತರ ಹೇಳುವುದಕ್ಕೆ ಕಾರಣ ಬೇಕಾಗಿತ್ತು ಎಂದು ಕಾಣುತ್ತದೆ. ಅದರ ಒಂದು ವಿಶಾಲತೆಯಾಗಲೀ, ಪ್ರಯೋಜನವಾಗಲೀ ಬೇಡ. ಇವರಿಗೆ ಒಂದು ಟಾರ್ಜೆಟ್ ಬೇಕು. ಬಿಜಾಪುರದ ಎಲ್ಲಾ ತಾಲ್ಲೂಕ್‌ಗಳಲ್ಲಿ ಮೇಳ ಆಯಿತು ಎಂದು ಹೇಳುವುದು ಬೇಕು. ಅದು ಇಲ್ಲಿಂದ ಬಂದ ನಿರ್ಣಯವೋ ಅಥವಾ ಅಲ್ಲಿಯ ನಿರ್ಣಯವೋ ಗೊತ್ತಿಲ್ಲ, ಗ್ರಾಮಾಂತರ ಪ್ರದೇಶದಲ್ಲಿ ತಾಲ್ಲೂಕು ಮಟ್ಟದ ಒಂದು ಮೇಳಕ್ಕೆ ೧೫ ದಿವಸಕ್ಕೆ ಮುಂಚಿತವಾಗಿಯಾದರೂ ಒಂದು ತಾರೀಖನ್ನು ಕೊಡಬೇಕು. ಆ ತಾರೀಖಿನ ಒಳಗಾಗಿ ತಾಲ್ಲೂಕು ಮಟ್ಟದ ಸಂಬಂಧಪಟ್ಟ ಕ್ಷೇತ್ರಾಧಿಕಾರಿಗಳು ಸಂಬಂಧಪಟ್ಟ ವಿಸ್ತರಣಾಧಿಕಾರಿಗಳು ತಾಲ್ಲೂಕು ಮಟ್ಟದ ಯುವಕ ಮತ್ತು ಯುವತಿಯರ ಸಂಘಗಳು ಹಾಗೂ ಮಹಿಳಾ ಸಂಘಗಳ ಅಧ್ಯಕ್ಷರ ಜೊತೆ ಸಭೆ ಮಾಡಿ ಈ ತಾರೀಖಿಗೆ ನಾವು ಒಂದು ಯುವಜನ ಮೇಳವನ್ನು ಮಾಡಲಿದ್ದೇವೆ ನಿಮ್ಮ ನಿಮ್ಮ ಗ್ರಾಮಗಳಲ್ಲಿ ಇರತಕ್ಕ ಕಲೆ

ಗಾರರನ್ನು ಕೂಡಿಸಿ ಒಂದು ಕಾರ್ಯಕ್ರಮವನ್ನು ತಯಾರು ಮಾಡಿಕೊಳ್ಳಿ ಎಂದು ಕೆಲವು ದಿವಸಗಳ ಸಮಯವನ್ನು ಕೊಡಬೇಕಾಗುತ್ತದೆ, ಈ ಅಧ್ಯಕ್ಷರುಗಳು ತಾಲ್ಲೂಕು ಯುವ ಜನ ಮೇಳದ ಅಧ್ಯಕ್ಷರು ಜೊತೆ ಕಾರ್ಯಕ್ರಮಗಳ ಬಗ್ಗೆ ವಿಚಾರ ವಿನಿಮಯ ಮಾಡಬೇಕಾಗುತ್ತದೆ. ೯ನೇ ತಾರೀಖು ಟೆಲಿಗ್ರಾಂ ಮಾಡಿ ೧೬ನೇ ತಾರೀಖು ಪೂರ್ತಿ ಮಾಡಿ ಎಂದು ಹೇಳುವುದು. ೧೧ನೇ ತಾರೀಖು ಟೆಲಿಗ್ರಾಂ ಒಡೆದು ನೋಡಿ ಆಮೇಲೆ ಇಂಪ್ಲಿಮೆಂಟ್ ೧೨ನೇ ತಾರೀಖು ಮಾಡಿ ೧೪ನೇ ತಾರೀಖಿನ ಒಳಗೆ ಮುಗಿಸಬೇಕೆಂದರೆ ಹೇಗೆ ಸಾಧ್ಯ ? ಒಂದು ತಾಲ್ಲೂಕು ಮಟ್ಟದಲ್ಲಿ ೧೦೦ ರಿಂದ ೧೨೦ ಹಳ್ಳಿಗಳು ಕೂಡಿದ್ದು ತಾಲ್ಲೂಕು ಮಟ್ಟದಲ್ಲಿ ಸುಮಾರು ಎರಡೆರಡು ಯುವಕ ಕೇಂದ್ರಗಳು ಬರುತ್ತವೆ. ಕೆಲವು ಕಡೆ ಒಂದೇ ಇರಬಹುದು ಸರಾಸರಿ ನೂರು–ಇನ್ನೂರು ಯುವಕ ಕೇಂದ್ರ ಯುವಕ ಸಂಘಗಳು ಒಂದೊಂದು ತಾಲ್ಲೂಕ್ ಕೇಂದ್ರದಲ್ಲಿ ಬರುವಾಗ ಎಲ್ಲರನ್ನೂ ತೊಡಗಿಸಿದಾಗ ಮಾತ್ರ ಒಂದು ಪರಿಣಾಮಕಾರಿಯಾದಂಥ ಒಂದು ವ್ಯವಸ್ಥೆ ಆಗಲಿಕ್ಕೆ ಸಾಧ್ಯ. ಅದರ ಹೊರತು ಈ ತಾರೀಕಿನೊಳಗೇ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಬೇಕಾಗಿದೆ. ಆದ್ದರಿಂದ ವರದಿಯನ್ನು ಕೊಡಬೇಕು ಎಂದರೆ ಯಾವರೀತಿ ಸಾಧ್ಯ ಆಗುತ್ತದೆ ? ಸರ್ಕಾರ ಇದರ ಬಗ್ಗೆ ಗಮನಹರಿಸಬೇಕು. ಮತ್ತು ತಾಲ್ಲೂಕು ಮಟ್ಟದ ಯುವಜನ ಮೇಳ ಮಾಡುವಾಗ ಒಂದು ತಿಂಗಳ ಕಾಲ ಮುಂಚೆಯೇ ದಿನಾಂಕವನ್ನು ನಿರ್ಧಾರ ಮಾಡತಕ್ಕಂಥ ಒಂದು ಕಾರ್ಯಕ್ರಮ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ನಾನು ಈ ಮೂಲಕ ಒತ್ತಾಯಪಡಿಸುತ್ತೇನೆ. ಇನ್ನು ಕ್ರೀಡಾಂಗಣಗಳು. ತಾಲ್ಲೂಕು ಮಟ್ಟದಲ್ಲಿ ಕಾಲೇಜು ಹೈಸ್ಕೂಲ್‌ಗಳಲ್ಲಿ ಅವರೇ ಹೊಂದಿರತಕ್ಕಂಥ ಕ್ರೀಡಾಂಗಣಗಳು ಇರುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಮಂಡಲ ಮಟ್ಟದಲ್ಲಿ ಗ್ರಾಮೀಣ ಮಟ್ಟದಲ್ಲಿ, ಇವತ್ತು ಸರ್ಕಾರದ ಗಮನಕ್ಕೆ ತರಬೇಕಾದರೆ ಅಲ್ಲಿಯೂ ಕೂಡ ವಾಲಿಬಾಲ್ ಆಗಲಿ, ಕ್ರಿಕೇಟ್, ಹಾಕಿಯನ್ನು ಆಡತಕ್ಕಂಥ ಹವ್ಯಾಸ ಇದೆ. ಗ್ರಾಮೀಣ ಮಟ್ಟದಲ್ಲಿ ಇರತಕ್ಕಂಥ ವಿದ್ಯಾರ್ಥಿಗಳು ಪೇಟೆಯಲ್ಲಿ ಕಲಿಯುವವರು ರಜೆ ವೇಳೆಯಲ್ಲಿ ಬಂದಾಗಲಾಗಲೀ ಅಥವಾ ತಮ್ಮ ವಿದ್ಯಾರ್ಜನೆ ಮುಗಿದಮೇಲಾಗಲೀ ಅಲ್ಲಿ ಬಂದರೆ ಅಲ್ಲಿ ನಡೆಯುವಂಥ ಕ್ರಿಡೆಗಳು ನಗರಗಳಲ್ಲಿ ನಡೆಯುವಂಥ ಕ್ರೀಡೆಗಳ ಮಟ್ಟದಲ್ಲಿರುವುದಿಲ್ಲ. ಏಕೆಂದರೆ ನಮ್ಮ ಮಂಡಲವನ್ನೇ ನೋಡಿದಾಗ ಆ ಮಂಡಲ ಪಂಚಾಯಿತಿ ಮಟ್ಟದಲ್ಲಿ ಇರತಕ್ಕಂಥ ಗ್ರಾಮಗಳಲ್ಲಿ ಕ್ರಿಕೇಟ್ ಆಡುವಂಥ ಹುಡುಗರನ್ನು ಇವತ್ತು ನೋಡುತ್ತಿದ್ದೇವೆ. ಹಾಗಿದ್ದಾಗ ಸರ್ಕಾರ ಒಂದು ಸುತ್ತೋಲೆಯನ್ನು ಹೊರಡಿಸಲಿ, ಒಂದು ನಿರ್ಣಯ ಮಾಡಲಿ. ಪ್ರತಿ ಮಂಡಲ ಪಂಚಾಯತಿಯಲ್ಲಿ ಒಂದು ಎಕರೆ ಅಥವಾ ಅರ್ಧ ಎಕರೆಯನ್ನು ಒಂದು ಕ್ರೀಡಾ ಜಾಗವನ್ನಾಗಿ ಗೊತ್ತು ಪಡಿಸುವಂಥಾದ್ದರ ಬಗ್ಗೆ ಸರ್ಕಾರ ತೀರ್ಮಾನ ಮಾಡಬೇಕು. ಈ ರೀತಿ ಮಾಡಿದರೆ ಯುವಜನರಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಈ ಜಾಗವನ್ನು ಏತಕ್ಕಾಗಿ ನಿರ್ಮಿತಮಾಡಿದ್ದಾರೆ ಎನ್ನತಕ್ಕದ್ದರ ಬಗ್ಗೆ ಅವರು ತಮ್ಮಷ್ಟಕ್ಕೆ ತಾವು ಮಾತನಾಡಿಕೊಂಡಾಗ ಇದು ಕ್ರೀಡೆಗಾಗಿ, ಆಟ ಆಡುವುದಕ್ಕೆ ಈ ಜಾಗವನ್ನು ಮಂಡಲ್ ಪಂಚಾಯಿತ್‌ಯವರು ಕಾದಿರಿಸಿದ್ದಾರೆ. ಹಾಗಾದರೆ ಈ ರೀತಿ ಕಾದಿರಿಸಿದಾಗ ಹುಡುಗನಾಗಿರತಕ್ಕಂಥ ನಾವು ಆಟ ಆಡಬೇಕು ಎನ್ನುವ ವಿಚಾರ, ಜಿಜ್ಞಾಸೆ ಅವರಲ್ಲಿ ಪ್ರಾರಂಭವಾಗುತ್ತದೆ. ಹೀಗೆ ಪ್ರಾರಂಭವಾದಾಗ ಅವರು ಒಂದು ಟೀಮನ್ನು ಕಟ್ಟಿಕೊಂಡು ಪ್ರಾರಂಭದಲ್ಲಿ ಕಬಡ್ಡಿಯನ್ನೇ, ರಿಂಗ್ ಅನ್ನೋ ಅಥವಾ ಫುಟ್‌ಬಾಲ್‌ನ್ನೋ ಆಡಲು ಪ್ರಾರಂಭಿಸುತ್ತಾರೆ. ಇದನ್ನು ನೋಡಿದಂಥ ಇನ್ನಿತರ ಯುವಕರು ಸ್ವಾಭಾವಿಕವಾಗಿ ಅಲ್ಲಿ ಆಕರ್ಷಿತರಾಗಿ ನಾವೂ ಕೂಡ ಆಡಬೇಕೆಂದು ಆಡಲು ಹೋಗತಕ್ಕಂಥ ವಾತಾವರಣ ನಿರ್ಮಾಣವಾಗಿ ಗ್ರಾಮೀಣ ಮಟ್ಟದಲ್ಲಿ ಈ ಅನುಕೂಲತೆ ಯುವಕರಿಗೆ ಸಿಗುತ್ತದೆ ಎಂಬ ವಿಷಯವನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇನ್ನು ಯೂತ್ ಹಾಸ್ಟಲ್ ಪ್ರಾರಂಭಿಸುತ್ತೇವೆ ಎಂದು ಹೇಳಿದರು, ಜಿಲ್ಲಾಮಟ್ಟದಲ್ಲಾದರೂ ಒಂದು ಯುವಕ ಕೇಂದ್ರ, ಯುವಕ ಹಾಸ್ಟೇಲ್ ಬರಬೇಕು. ಏಕೆಂದರೆ ಸರ್ಕಾರದ ನೌಕರಿಯಲ್ಲಿರುವವರಿಗೆ ಎನ್‌ಜಿಓ ಸಂಘ ಅಂತ ಇದೆ. ಆದ್ದರಿಂದ ಯಾವುದೇ ಕೆಲಸ ಕಾರ್ಯಗಳಿಗೆ ಹೋದಾಗ ಜಿಲ್ಲಾಮಟ್ಟದಲ್ಲಿ ಒಂದು ಯೂತ್ಸ್ ಹಾಸ್ಟೇಲ್ ಅಂತ ಮಾಡಿ ಅಲ್ಲಿಗೆ ಬರುವವರಿಂದ ಕಡಿಮೆ ಮಟ್ಟದಲ್ಲಿ ಫೀಸ್‌ನ್ನು ವಸೂಲು ಮಾಡಿದರೆ ಬಹುಶಃ ಯುವಜನಾಂಗಕ್ಕೆ ಸಂತೋಷ ಆದೀತು ಎನ್ನತಕ್ಕಂಥ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಾ, ಇನ್ನೊಂದು ಮುಖ್ಯವಾದ ವಿಷಯ ಯುವಜನ ಸೇವಾ ಇಲಾಖೆಗೆ ಬಾರದೇ ಹೋದರೂ ಅವರು ವಾರ್ತಾ ಮತ್ತು ಪ್ರಚಾರ ಇಲಾಖೆಯೊಡನೆ ಸಮಾಲೋಚನೆ ಮಾಡಿ ಹಳ್ಳಿಗಳಲ್ಲಿ ಆರೋಗ್ಯದ ಬಗ್ಗೆ ಕಲ್ಪನೆ, ಉತ್ತಮ ಆರೋಗ್ಯ ಇದ್ದರೆ ಯಾವರೀತಿ ನಾವು ಚೆನ್ನಾಗಿ ಬೆಳೆಯುವುದಕ್ಕೆ ಸಾಧ್ಯ, ಆರೋಗ್ಯದ ಸಮರ್ಥನೆ, ಆರೋಗ್ಯದ ಉಪಯೋಗ ಮತ್ತು ಆರೋಗ್ಯ ಇದ್ದರೆ ಏನನ್ನು ಬೇಕಾದರೂ ಜೀವನದಲ್ಲಿ ಎದುರಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ಕಲ್ಪನೆಗಳನ್ನು ಕೊಡುವಂಥ ಸಾಕ್ಷ್ಯಚಿತ್ರಗಳನ್ನು ತೋರಿಸುವಂಥ ವ್ಯವಸ್ಥೆ ಮಾಡಬೇಕು. ಈಗ ಈ

ಮಾಧ್ಯಮದಲ್ಲಿ ಸರ್ಕಾರ ಗ್ರಾಮಾಂತರ ಯೋಜನೆಗಳನ್ನು ತೋರಿಸುತ್ತದೆ. ಇದರಲ್ಲಿಯೇ ಯುವಕರು ಉತ್ತಮ ಆರೋಗ್ಯ ದೇಹದಾರ್ಢ್ಯತೆ ಇಟ್ಟುಕೊಂಡರೆ ಹೇಗೆ ಅನುಕೂಲ ಆಗುತ್ತದೆ, ಶ್ರೀಮಂತಿಕೆಯನ್ನು ಅನುಭವಿಸುವುದಕ್ಕೆ ಬಡತನವನ್ನು ಎದುರಿಸುವುದಕ್ಕೆ ಆರೋಗ್ಯ ಎಷ್ಟು ಪ್ರಮುಖವಾದುದು ಎನ್ನತಕ್ಕಂಥ ಕಲ್ಪನೆಯನ್ನು ಅವರ ಮನಸ್ಸಿನಲ್ಲಿ ಪರಿಣಾಮಕಾರಿಯಾಗಿ ಮೂಡಿಸಲು ಸರ್ಕಾರಿ ಜೀಪಿನಲ್ಲಿ ಹೋಗಿ ೧೬ ಎಂ.ಎಂ, ಇರತಕ್ಕಂಥ ಸ್ಕ್ರೀನ್‌ಮೇಲೆ ಸಣ್ಣ ಪ್ರೊಜೆಕ್ಟರ್ ಇಟ್ಟು ತೋರಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಇಂತಿಂಥ ಆಹಾರ ಸೇವಿಸುವುದರಿಂದ ಆರೋಗ್ಯದ ಮೇಲೆ ಏನು ಪರಿಣಾಮ ಆಗುತ್ತವೆ ಎಂದು ತೋರಿಸಿದರೆ ಯುವಜನಾಂಗದಲ್ಲಿ ಜಾಗೃತಿಯಾಗಿ ಅವರು ಇದರಿಂದ ಆಕರ್ಷಿತರಾಗಿ ಈ ಅಂಶಗಳನ್ನು ತಾವು ಕೂಡ ಅನುಸರಿಸಲು ಅನುಕೂಲವಾಗುತ್ತದೆಯೆನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ತಿಳಿಸಿ ಇನ್ನು ಎರಡು ನಿಮಿಷಗಳಲ್ಲಿ ಮೈನ್ಸ್ ಅಂಡ್ ಜಿಯಾಲಜಿ ಬಗ್ಗೆ ಪ್ರಸ್ತಾಪ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಈ ಗಣಿ ಹಾಗೂ ಭೂ-ವಿಜ್ಞಾನ ವಿಷಯದಲ್ಲಿ ಬಹಳ ಜನ ನನ್ನ ಸ್ನೇಹಿತರು, ಈ ರಾಜ್ಯದಲ್ಲಿರತಕ್ಕ ಕಲ್ಲು ಲೂಟಿಯಾಗುತ್ತಿದೆ, ಸೌಂದರ್ಯ ಹಾಳಾಗುತ್ತಿದೆ, ಅದು ನಮ್ಮ ರಾಜ್ಯದ ನಿಧಿಯಾಗಿರಬೇಕು ಎನ್ನತಕ್ಕಂಥ ಮಾತುಗಳನ್ನು ಹೇಳಿದ್ದಾರೆ. ಈ ವಿಷಯದಲ್ಲಿ ನಾನು ಸರ್ಕಾರಕ್ಕೆ ನನ್ನ ಸ್ಪಷ್ಟವಾದ ಅಭಿಪ್ರಾಯವನ್ನು ಹೇಳುತ್ತೇನೆ ಏನೆಂದರೆ, ಎಷ್ಟೇ ಪ್ರಮಾಣದ ಗಣಿ ನಮ್ಮ ರಾಜ್ಯದಲ್ಲಿ ಇರಲಿ, ಅದು ಕೆಂಪು ಕಲ್ಲು ಇರಲಿ, ಕರಿ ಕಲ್ಲು ಇರಲಿ ಬಿಳಿ ಕಲ್ಲು ಇರಲಿ ಅದು ರಫ್ತು ಆಗುತ್ತಾ ಹೋದರೂ ಹೋಗಲಿ, ಬೇಕಾದವರು ಖರೀದಿ ಮಾಡಲಿ, ಇದಕ್ಕೆ ಅನುಕೂಲವನ್ನು ಕಲ್ಪಿಸುವ ಬಗ್ಗೆ ನನ್ನ ವಿರೋಧವಿಲ್ಲ, ಇದನ್ನೇನು ಜಕಣಾಚಾರಿ ಕಡಿದು ಹೋಗಿದ್ದನೇ. ಅಥವಾ ಡಂಕಣಾಚಾರಿ ನಿರ್ಮಿಸಿದ್ದನೇ? ಇದು ಏನು ಭಾರಿ ಪ್ರಮಾಣದ, ಸುಂದರವಾದ ಮೂರ್ತಿಯೇ? ಇದನ್ನು ನಾವು ಕಾಯಬೇಕೇ. ಈ ಕಲ್ಲು ಉದಾಹರಣೆಗೆ ಒಬ್ಬರು ಜಹಗೀರುದಾರರು ಸುಮಾರು ೪೫೦ ಎಕರೆ ಇರತಕ್ಕಂಥ ಗುಡ್ಡವನ್ನು ನಮ್ಮಲ್ಲಿರತಕ್ಕಂಥ ಪೂಜ್ಯ ಸ್ವಾಮಿಗಳಿಗೆ ದಾನ ಕೊಟ್ಟಾಗ ಆ ದಾನವನ್ನು ಸ್ವಾಮಿಗಳು ತೆಗೆದುಕೊಂಡರು, ಆ ಗುಡ್ಡವನ್ನು ಅವರು ಬಿತ್ತಬೇಕೇ, ಬೆಳೆಯಬೇಕೇ ಎನ್ನತಕ್ಕಂಥ ಅವಹೇಳನಕ್ಕೆ ದಾನ ಕೊಟ್ಟಂಥವರು ಗುರಿಯಾಗುತ್ತಾರೆ. ಹತ್ತಾರು ವರ್ಷಗಳು ಕಳೆದರೂ ಈ ಸಂಸ್ಥೆ ಇಂದು ಆರ್ಥಿಕ ವಿಫಲತೆಯಲ್ಲಿ ಹೋಗುತ್ತಿದೆ, ಈ ಸಂಸ್ಥೆ ಸಧೃಡವಾಗಿ ಆಗುವುದಕ್ಕೆ ಸಾಧ್ಯವಿಲ್ಲ ಸಾಕಷ್ಟು ಪ್ರಮಾಣದ ಲಕ್ಷಾಂತರ ವಿದ್ಯಾರ್ಥಿಗಳು ಅಲ್ಲಿ ಕಲಿತು ಹೋಗುತ್ತಾರೆ ಆದ್ದರಿಂದ ಸೌಂದರ್ಯ ಹಾಳಾಗುತ್ತಿದೆ, ಕಲ್ಲು ಹೋಗುತ್ತಿದೆ ಎಂದು ಸುಮ್ಮನೆ ಕುಳಿತುಕೊಂಡರೆ, ಇದರ ಉಪಯೋಗ ಆಗುವುದಕ್ಕೆ ಸಾಧ್ಯವೇ? ಆದ್ದರಿಂದ ಈ ವಿಷಯದಲ್ಲಿ ಸರ್ಕಾರಕ್ಕೆ ನನ್ನ ಎಚ್ಚರಿಕೆ ಮತ್ತು ನನ್ನ ಸಲಹೆ ಏನೆಂದರೆ, ಇದನ್ನು ಲೂಟಿ ಹೊಡೆಯತಕ್ಕಂಥ ಕೆಲವೇ ಜನ ಶ್ರೀಮಂತರಾಗುವುದಕ್ಕೆ ಬಿಡಬೇಡಿ ಕಲ್ಲಿನ ಗಣಿಯ ಕೆಲಸಕ್ಕೆ ತೊಡಗಿರುವವರು ಎಲ್ಲರೂ ಬೆಂಜ್ ಕಾರು ದೊಡ್ಡ ದೊಡ್ಡ ಬಂಗಲೆಯನ್ನು ಅಥವಾ ಕೋಟಿಗಟ್ಟಲೆ ಹಣವನ್ನು ಶೇಖರಣೆ ಮಾಡುವಂಥ ಸ್ಥಿತಿಗೆ ತಲುಪಿದ್ದಾರೆ. ಇದರಲ್ಲಿ ಭ್ರಷ್ಟಾಚಾರ ಇದೆ ಎನ್ನತಕ್ಕ ವಿಚಾರಕ್ಕೆ ನಾನು ಹೋಗುವುದಿಲ್ಲ. ಆದರೆ ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ಮಾಡುತ್ತೇನೆ. ಏನೆಂದರೆ ಲೂಟಿ ಆಗುವುದರಲ್ಲಿ ಅರ್ಧದಷ್ಟು ಭಾಗ ಸರ್ಕಾರಕ್ಕೆ ಬರುವಂಥ ಒಂದು ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕು. ಈ ೬ ಕೋಟಿ ೭೭ ಲಕ್ಷ ಯಾವ ಮೂಲೆಗೆ ಇಷ್ಟು ಹಣ ಒಬ್ಬ ಸಣ್ಣ ಗಣಿ ಉದ್ದಿಮೆ ಮಾಡುವಂಥವನ ಕಿಸೆಯಲ್ಲಿ ಇರುತ್ತವೆ. ಟ್ರೆಜರಿಯಲ್ಲಿ ಅಥವಾ ಬ್ಯಾಂಕಿನಲ್ಲಿ ಅಲ್ಲ ಮಂಗಳೂರ್ ಬಂದರು ಮೂಲಕ ಸಾಕಷ್ಟು ಪ್ರಮಾಣದಲ್ಲಿ ಈ ಕಲ್ಲುಗಳನ್ನು ಫ್ರಾನ್ಸ್‌ಗೆ ಕಳುಹಿಸಿದರು, ಅವರು ಜಗತ್ತಿನ ಯಾವುದೇ ಭಾಗಕ್ಕೆ ಕಳುಹಿಸಲಿ. ಆದರೆ ಇದರಲ್ಲಿ ಲಾಭದ ಶೇಕಡ ೫೦ರಷ್ಟು ಸರ್ಕಾರಕ್ಕೆ ಬರುವಂಥ ವ್ಯವಸ್ಥೆ ಮಾಡಿದರೆ, ಒಂದು ವರ್ಷಕ್ಕೆ ೧೫೦-೨೦೦ ಕೋಟಿ ರೂಪಾಯಿಗಳ ಆದಾಯ ಸರ್ಕಾರಕ್ಕೆ ಬರುತ್ತದೆ, ಈಗ ಈ ರೀತಿಯ ವ್ಯವಸ್ಥೆ ಮಾಡತಕ್ಕಂತಾದ್ದು ಅಗತ್ಯ ಇದೆ ಈಗ ಸರ್ಕಾರಕ್ಕೆ ಧಾರುಣವಾದ ಆರ್ಥಿಕ ಪರಿಸ್ಥಿತಿ ಇದೆ. ನೀವು ಕಟ್ಟುನಿಟ್ಟಿನ ವ್ಯವಸ್ಥೆಯಲ್ಲಿ ಮುಳುಗಿದ್ದೀರಿ ತೇಲಾಡುತ್ತಿದ್ದೀರಿ, ಕುಣಿದಾಡುತ್ತಿದ್ದೀರಿ, ಆ ಮಾತು ಬೇರೆ. ಆದರೆ ಈ ಸಂಬಂಧದಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡು, ಸರ್ಕಾರಕ್ಕೆ ಉತ್ತಮ ಆದಾಯ ಮಾಡಿಕೊಳ್ಳಿ ಎಂದು ಹೇಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ, ಅವರೂ ಇದೇರೀತಿ ಹಿಂದೆ ಕುಣಿದಾಡಿದ್ದಾರೆ, ಇದನ್ನು ಅವರು ಮರೆಯಬಾರದು......

ಶ್ರೀ ಕೆ. ಹೆಚ್. ಪಾಟೀಲ್.—ಬಸವರಾಜ ಪಾಟೀಲ್ ಅನ್ಸಾರಿ ಅವರೊಡನೆ ಕುಣಿದಾಡುವುದಕ್ಕೆ ನಂಜಯ್ಯನಮಠ್ ಅವರು ಹೋಗುತ್ತಾರೆಯೇ?...

ಶ್ರೀ ಬಸವರಾಜ ಪಾಟೀಲ್ ಅನ್ಸಾರಿ.—ಕುಣಿದಾಡುವ ಜಾಗದಲ್ಲಿ ನೀವು ಬರುವುದಿಲ್ಲ. ಒಂದು ವೇಳೆ ತಮಗೆ ಅಪೇಕ್ಷೆ ಇದ್ದರೆ ಬರಬಹುದು. ನಾವು ಬೇಡವೆನ್ನುವುದಿಲ್ಲ.

ಶ್ರೀ ಎಸ್. ಜಿ. ನಂಜಯ್ಯನ ಮಠ್.—ಬಸವರಾಜ ಪಾಟೀಲರು ಕುಣಿದಾಡುವ ವಿಷಯ ನನಗೆ ಗೊತ್ತಿದೆ. ಏಕೆಂದರೆ, ಅವರೂ ಹಿಂದೆ ಇಲ್ಲಿದ್ದು ಕುಣಿದಾಡಿದ್ದಾರೆ......

ಶ್ರೀ ಬಸವರಾಜ ಪಾಟೀಲ್ ಅನ್ಸಾರಿ.—ಅಲ್ಲಿ ಕುಣಿದಾಡಿದ್ದವು ಅಲ್ಲಿ ಬಿಟ್ಟು ಬಂದ ಮೇಲೆ ಜನ ಮತ್ತೆ ಆರಿಸಿ ಕಳುಹಿಸಿದ್ದಾರೆ. ಕುಣಿದಾಡಿದವರು ಆ ಕಡೆಯುಲ್ಲೂ ಇದ್ದಾರೆ, ಈ ಕಡೆಯುಲ್ಲೂ ಇದ್ದಾರೆ.

ಶ್ರೀ ಎಸ್. ಜಿ. ನಂಜಯ್ಯನಮಠ್.—ಇದರ ಜೊತೆಗೆ ಸರ್ಕಾರಕ್ಕೆ ಅರ್ಧದಷ್ಟು ಭಾಗ ಲಾಭದ ಕರವಾಗಲೀ, ನಿಧಿಯಾಗಲೀ ಬರುವಂಥ ಕಟ್ಟುನಿಟ್ಟಿನ ಕ್ರಮ ತಗೆದುಕೊಂಡರೆ ಸರ್ಕಾರಕ್ಕೆ ಉತ್ತಮ ಆದಾಯ ಬರುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಬಗ್ಗೆ ಕಟ್ಟುನಿಟ್ಟಿನ ಕಾನೂನನ್ನು ಜಾರಿಗೊಳಿಸಿ, ಸರ್ಕಾರಕ್ಕೆ ಆದಾಯ ಬರುವಂತಹ ಕಾನೂನನ್ನು ಜಾರಿಗೆ ತರಬೇಕು. ಆಗ ಇದರ ಬಗ್ಗೆ ಜನರಿಗೆ ಭಯ ಬಂದು, ಸರ್ಕಾರಕ್ಕೆ ಉತ್ತಮವಾದ ಆದಾಯ ಬರುತ್ತದೆ. ಕೊನೆಯದಾಗಿ ಕೆಲವೊಂದು ಜಿಲ್ಲೆಯಲ್ಲಿ ನೀರಿನ ಪ್ರಮಾಣವನ್ನು ಹುಡುಕಿ, ತೆಗದುಕೊಂಡ ಕೆಲವೊಂದು ಹಳ್ಳಿಗಳ ಪಟ್ಟಿ ಪಿ. ಎಲ್. ಡಿ. ಬ್ಯಾಂಕಿನಲ್ಲಿತ್ತು, ಈ ಪಟ್ಟಿ ಸುಮಾರು ೧೫–೨೦ ವರ್ಷಗಳ ಹಿಂದೆ ಮಾಡಿರತಕ್ಕಂತಾದ್ದು. ಇಂತಹ ಗ್ರಾಮಗಳಲ್ಲಿ ಬೋರ್‌ವೆಲ್ ತೆಗೆದರೆ ಬೋರ್‌ವೆಲ್‌ನಲ್ಲಿ ನೀರು ಬೀಳುತ್ತದೆ ಎನ್ನತಕ್ಕಂಥ ರಿಪೋರ್ಟ್ ಕೂಡ ಕೊಟ್ಟಿದ್ದಾರೆ.

೪–೦೦ ಪಿ. ಎಂ.

ಕೆಲವು ಗ್ರಾಮಗಳಲ್ಲಿ ಸ್ವಂತ ಖರ್ಚಿನಿಂದ ಬೋರ್‌ವೆಲ್ ಹಾಕಿಸಿದಾಗ ಸಾಕಷ್ಟು ಪ್ರಮಾಣದಲ್ಲಿ ನೀರು ಬಂದಿದೆ. ಆದರೆ ಸರಕಾರದ ವರದಿಯಲ್ಲಿ ಆ ಗ್ರಾಮದಲ್ಲಿ ನೀರೇ ಬರುವುದಿಲ್ಲ ಎಂದು ಇದೆ. ಈ ರೀತಿಯಾಗಿ ಈ ವಿಚಾರರಲ್ಲಿ ಅಸಮರ್ಪಕವಾದ ವ್ಯವಸ್ಥೆ ಇವೆ. ಆದುದರಿಂದ ರೈತರಿಗೆ ಅನುಕೂಲ ವಾಗುವಂತಹ ನಿರ್ಣಯವನ್ನು ಈ ಬಗ್ಗೆ ಕೈಗೊಳ್ಳಲು ಸರಕಾರ ಕ್ರಮ ತೆಗೆದುಕೊಳ್ಳಲಿ, ಆ ರೀತಿ ನಿರ್ಣಯ ಆಗಲಿ ಎಂದು ತಮ್ಮ ಮುಖಾಂತರ ಸರಕಾರವನ್ನು ಕೇಳಿಕೊಂಡು ನನ್ನ ನಾಲ್ಕು ಮಾತು ಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟಕಲ್).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಸಾಕಷ್ಟು ಸದಸ್ಯರು ಸಾಕಷ್ಟು ಬೆಳಕನ್ನು ಈ ಬೇಡಿಕೆಗಳ ಮೇಲೆ ಚೆಲ್ಲಿದ್ದಾರೆ. ನಾನು ಹೆಚ್ಚು ಪ್ರಸ್ತಾಪ ಮಾಡದೇ ಒಂದೆರಡು ವಿಷಯಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ ಈ ಯೂತ್ ಸರ್ವೀಸಸ್ ಡಿಪಾರ್ಟ್‌ಮೆಂಟ್ ಸುಮಾರು ೧೯೬೬ನೇ ಇಸವಿಯಲ್ಲಿ ಸೆಪರೇಟ್ ಡೈರೆಕ್ಟೊರೇಟ್ ಆಗಿ ಹೊಸ ಖಾತೆಯನ್ನು ಹೊಂದಿತು. ಇದನ್ನು ಸಪರೇಟ್ ಮಾಡಿದಂಥ ಉದ್ದೇಶ ಏನಂದರೆ ಕರ್ನಾಟಕ ರಾಜ್ಯದ ಜನಸಂಖ್ಯೆಯಲ್ಲಿ ಸುಮಾರು ೫೦ ಪರ್ಸೆಂಟ್ ಯುವಕರು ಇದ್ದಾರೆ, ಅವರಿಗೆ ಒಂದು ಒಳ್ಳೆಯ ಮಾರ್ಗದರ್ಶನ ಆಗಬೇಕು, ಅವರ ಕ್ಯಾರೆಕ್ಟರ್‌ನ್ನು ಸರಿಯಾದ ರೀತಿಯಿಂದ ಬೆಳೆಸಬೇಕು. ದೈಹಿಕವಾಗಿ ಮತ್ತು ಮಾನಸಿಕವಾಗಿ ಅವರ ಬೆಳವಣಿಗೆ ಆಗಬೇಕು ಎನ್ನತಕ್ಕಂಥ ಉದ್ದೇಶದಿಂದ ಒಂದು ಹೊಸ ಡಿಪಾರ್ಟ್‌ಮೆಂಟನ್ನು ಪ್ರಾರಂಭ ಮಾಡಲಾಯಿತು. ಯುವಕರು ಹೆಚ್ಚಿನ ಆಸಕ್ತಿ ವಹಿಸಿ ತಾವು ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದರೆ, ತಮ್ಮ ಪ್ರತಿಭೆಯನ್ನು ತೋರಿಸಿದರೆ ರಾಷ್ಟ್ರಕ್ಕೆ ಪ್ರಯೋಜನ ಮಾಡಿದರೆ ರಾಷ್ಟ್ರವನ್ನು ಕಟ್ಟುವುದರಲ್ಲಿ ಅವರು ಸರಿಯಾದ ರೀತಿಯಿಂದ ಸಹಾಯ ಮಾಡಿದರೆ ಅವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು ಎಂಬ ದೃಷ್ಟಿಯಿಂದ ಈ ಒಂದು ಹೊಸ ಖಾತೆ ಅಸ್ತಿತ್ವಕ್ಕೆ ಬಂದಿತು. ಈ ರೀತಿ ಬಂದ ಮೇಲೆ ಇವತ್ತು ಏನಾಗಿದೆ ಎಂದರೆ, ಯಾವ ಮಹತ್ವವನ್ನು ಇದಕ್ಕೆ ಕೊಡಬೇಕಾಗಿತ್ತೋ ಹಾಗೂ ಎಷ್ಟರ ಮಟ್ಟಿಗೆ ಆರ್ಥಿಕವಾಗಿ ಇದಕ್ಕೆ ಸಹಾಯ ಮಾಡಬೇಕಾಗಿತ್ತೋ ಅಷ್ಟರ ಮಟ್ಟಿಗೆ ಮಾಡಲಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅದು ಯಾವುದೇ ಕ್ಷೇತ್ರ ಇರಬಹುದು, ಸ್ಪೋರ್ಟ್ಸ್ ಇರಬಹುದು, ಇಂಡೋರ್ ಗೇಮ್ಸ್ ಇರಬಹುದು, ಬೇರೆ ಯಾವುದೇ ರೀತಿಯಿಂದ ಕೂಡಾ ಇವತ್ತಿನ ದಿವಸ ಸರಕಾರ ಹೆಚ್ಚಿನ ಆಸಕ್ತಿ ವಹಿಸಿ ಇದನ್ನು ಮಾಡುತ್ತಾ ಇಲ್ಲ.

ಅಧ್ಯಕ್ಷರೇ, ಉದಾಹರಣೆಗೆ ತಮಗೆ ಹೇಳಬೇಕಾದರೆ, ಹೋದಸಲ ಅಂದರೆ ೧೯೮೭-೮೮ರಲ್ಲಿ ಇವರು ಇದಕ್ಕೆ ಕೊಟ್ಟಂಥ ಹಣ ಎಷ್ಟು ಹಾಗೂ ಎಷ್ಟು ಹಣವನ್ನು ಖರ್ಚು ಮಾಡಿರುತ್ತಾರೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಸ್ಟೇಟ್ ಸೆಕ್ಟರ್ ಸ್ಕೀಮ್‌ನಲ್ಲಿ ಬಜೆಟ್ ಪ್ರಾವಿಜನ್ ಮಾಡಿದ್ದು ೧೧೭.೧೫ ಲಕ್ಷ. ಖರ್ಚು ಮಾಡಿದ್ದು ೭೧ ೫೦ ಲಕ್ಷ ರೂಪಾಯಿಗಳು ಮಾತ್ರ. ಸೆಂಟ್ರಲಿ ಸ್ಪಾನ್ಸಾರ್ಡ್ ಸ್ಕೀಮ್‌ನಲ್ಲಿ ಬಂದಿದ್ದು ೨೮.೬೦ ಲಕ್ಷ, ಖರ್ಚು ಮಾಡಿದ್ದು ೨೭.೯೦ ಲಕ್ಷ. ಹೀಗೆ ಒಟ್ಟಾರೆಯಾಗಿ ಅಲಾಟ್ ಮಾಡಿದ ಮೂರು ಕೋಟಿ ಎರಡು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳಲ್ಲಿ, ಒಂದು ಕೋಟಿ ತೊಂಭತ್ತು ಲಕ್ಷ ನಲವತ್ತು ಸಾವಿರ ರೂಪಾಯಿಗಳನ್ನು ಮಾತ್ರ ಇವರು ಖರ್ಚು ಮಾಡಿದ್ದಾರೆ. ಅಂದರೆ ಇದರ ಅರ್ಥ ಕೇಂದ್ರ ಸರಕಾರದಿಂದ ಬಂದಂಥ ಹಣವನ್ನು ಖರ್ಚು ಮಾಡಲಿಕ್ಕೆ ಆಗಲಿಲ್ಲವೋ ಅಥವಾ ಇವರು ಸ್ಕೀಮ್‌ಗಳನ್ನು ಪ್ರಿಪೇರ್ ಮಾಡಿ ಕೇಂದ್ರ ಸರಕಾರಕ್ಕೆ ಕಳುಹಿಸುವುದಕ್ಕೆ ಆಗಲಿಲ್ಲವೋ ಎನ್ನತಕ್ಕಂಥಾದ್ದನ್ನು ಸ್ಪಷ್ಟಪಡಿಸಬೇಕು. ಏತಕ್ಕೆಂದರೆ ಅವರು ಪ್ರಾವಿಜನ್ ಮಾಡಿದ ಹಣವನ್ನು ಖರ್ಚು ಮಾಡುವುದಕ್ಕೆ ಸರಕಾರದ ಹತ್ತಿರ ಯೋಜನೆಗಳು ಇಲ್ಲ ಎಂದರೆ ನಾವು ತಮಗೆ ಏನು ಹೇಳಬೇಕು. ಒಂದು ಕಡೆ ಹಣದ ಕೊರತೆ ಇದೆ ಎಂದು ಹೇಳುತ್ತಾರೆ, ಇನ್ನೊಂದು ಕಡೆ ಬಜೆಟ್ ಪ್ರಾವಿಜನ್ ಮಾಡುತ್ತಾರೆ, ಮತ್ತೊಂದು ಕಡೆ ಅದನ್ನು ಖರ್ಚು ಮಾಡುವುದಿಲ್ಲ. ಇದೊಂದೇ ಖಾತೆಗೆ ಈ ರೀತಿ ಆಗಿಲ್ಲ. ಹೋದಸಲ ನಾನು ಇರಿಗೇಷನ್ ಮೇಲೆ ಮಾತನಾಡುವಾಗ ಹೇಳಿದೆ. ಬಜೆಟ್ ಪ್ರಾವಿಜನ್‌ನಲ್ಲಿ ಸಾಕಷ್ಟು ಹಣ ತೋರಿಸಿದ್ದಾರೆ. ಆದರೆ ಖರ್ಚು ಮಾಡಲಿಲ್ಲವೆಂಬ ಆಪಾದನೆ ಮಾಡಿದಾಗ, ಸೋಷಿಯಲ್ ಸರ್ವೀಸಸ್‌ಗೆ ಕಮ್ಯೂನಿಟಿ ಸರ್ವೀಸಸ್‌ಗೆ ಹೆಚ್ಚು ಆದ್ಯತೆ ಕೊಟ್ಟಿದ್ದೇವೆ, ಆದುದರಿಂದ ಇರಿಗೇಷನ್‌ಗೆ ಖರ್ಚು ಬಹಳ ಕಡಿಮೆಯಾಗಿದೆ ಎಂಬ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು.

ಇವತ್ತು ಸೋಷಿಯಲ್ ಸರ್ವೀಸಸ್ ನೋಡಿದಾಗ ಕಮ್ಯೂನಿಟಿ ಸರ್ವೀಸಸ್ ನೋಡಿದಾಗ ಯಾತ• ಸರ್ವೀಸಸ್‌ನಲ್ಲಿ ಬಡ್ಜೆಟ್ ಪ್ರಾವಿಜನ್ ಇದ್ದರೂ ಸಹ ಕಡಿಮೆ ಹಣ ಖರ್ಚು ಮಾಡಿದ್ದಾರೆ. ಇದು ಒಂದು ಕಡೆ ಈಗ ಇರತಕ್ಕಂಥ ಅಲ್ಪ ಸ್ವಲ್ಪ ಈ ಸಣ್ಣ ಡಿಪಾರ್ಟ್‌ಮೆಂಟ್‌ನಲ್ಲಿ ಕೂಡ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಲ್ಯಾಪ್ಸ್ ಮಾಡಿದ್ದಾರೆ. ಈ ಇಂದು ಕೋಟಿ ರೂಪಾಯಿಗಳಿಗೆ ಸರಿಯಾದ ಯೋಜನೆ ಇಲ್ಲದಿದ್ದರೆ ನಾವು ಏನು ಹೇಳಬೇಕು ? ಈ ಇಲಾಖೆಯ ಮಂತ್ರಿಗಳ ನಿರ್ಲಕ್ಷ್ಯವೆಂದು ಹೇಳಬೇಕೋ ಅಧಿಕಾರಿಗಳ ನಿರ್ಲಕ್ಷ್ಯವೆಂದು ಹೇಳಬೇಕೋ ಗೊತ್ತಿಲ್ಲ. ಯಾರು ಯಾರು ಇದಕ್ಕೆ ತಪ್ಪಿತಸ್ಥರು ಎನ್ನುತಕ್ಕಂಥಾದ್ದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕು, ಸುಮ್ಮನೆ ಹಣದ ಕೊರತೆ ಇದೆ ಎಂದು ಹೇಳುವುದು ಬೇಡ. ಕೊಟ್ಟಂತಹ ಹಣವನ್ನು ಸರಿಯಾದ ರೀತಿಯಲ್ಲಿ ಯೋಜನೆಯನ್ನು ರೂಪಿಸಿ ಖರ್ಚು ಮಾಡದೆ ಹೋದರೆ ನಿಜವಾಗಿಯೂ ನಾವು ಅಪವಾದಕ್ಕೆ ಗುರಿಯಾಗಬೇಕಾಗುತ್ತದೆ. ಈ ರಾಜ್ಯದಲ್ಲಿರತಕ್ಕಂಥ ಯುವಜನರು ನಮ್ಮನ್ನು ಕ್ಷಮಿಸುವುದಿಲ್ಲ. ಈ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಎರಡನೆಯದಾಗಿ ಸುಮಾರು ೧೩ ನೆಹರು ಕೇಂದ್ರಗಳು ಇವೆ. ಈ ಕೇಂದ್ರಗಳನ್ನು ಯಾವ ಉದ್ದೇಶದಿಂದ ಜಾರಿಗೆ ತಂದರೆಂದರೆ ಯಾರು ಯುವಕರು ಇರುತ್ತಾರೋ ಅವರಿಗೆ ತರಬೇತಿ ಕೊಟ್ಟು ಸಹಾಯ ಮಾಡುವ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ಈ ಕೇಂದ್ರಗಳನ್ನು ತೆರೆದರು. ಈ ಕೇಂದ್ರಗಳಿಗೆ ಕೇಂದ್ರ ಸರ್ಕಾರದವರು ಹಣ ಸಹಾಯ ಮಾಡುತ್ತಾರೆ. ನಮ್ಮ ರಾಜ್ಯದಲ್ಲಿ ೧೩ ಕೇಂದ್ರಗಳು ಎಲ್ಲೆಲ್ಲಿ ಇವೆಯೆಂದರೆ, ಕೋಲಾರ, ಬೆಳಗಾಂ, ಬೀದರ್, ರಾಯಚೂರು, ಗುಲ್ಬರ್ಗಾ ಹಾಸನ, ಮಂಗಳೂರು, ಚಿಕ್ಕಮಂಗಳೂರು ಮೈಸೂರು, ಮಂಡ್ಯ, ಉತ್ತರ ಕನ್ನಡ ಇತ್ಯಾದಿ ಕಡೆಗಳಲ್ಲಿದ್ದರೂ ಫುಲ್ ಫ್ಲೆಡ್ಜ್ ಕೇಂದ್ರಗಳು ಇರುವುದು ಕೇವಲ ನಾಲ್ಕು ಕಡೆ ಮಾತ್ರ. ಇನ್ನುಳಿದ ಕೇಂದ್ರಗಳನ್ನು ಫುಲ್ ಫ್ಲೆಡ್ಜ್ ಕೇಂದ್ರಗಳನ್ನಾಗಿ ಮಾಡಲು ಏತಕ್ಕೆ ನೀವು ಪ್ರಯತ್ನ ಮಾಡಲಿಲ್ಲ ? ಈ ಫುಲ್ ಫ್ಲೆಡ್ಜ್ ಕೇಂದ್ರಗಳನ್ನಾಗಿ ಮಾಡಬೇಕೆನ್ನುವುದು ತಮಗೆ ಗೊತ್ತಿದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕೆ. ಹೆಚ್. ಪಾಟೀಲ್‌ರವರು ಹೇಳಿದ ಹಾಗೆ ಕೇಂದ್ರ ಸರ್ಕಾರದಲ್ಲಿ ಈ ಖಾತೆಯನ್ನು ವಹಿಸಿಕೊಂಡಿರತಕ್ಕಂಥ ಶ್ರೀಮತಿ ಮಾರ್ಗರೇಟ್ ಆಳ್ವರವರು ಅವರು ಸ್ವಲ್ಪ ಆಸಕ್ತಿ ವಹಿಸಿ ಕೆಲಸ ಮಾಡತಕ್ಕಂಥಾದ್ದು ಇದೆ. ನಮ್ಮ ಸರ್ಕಾರದಿಂದ ಯಾವುದೇ ಸ್ಕೀಮು ಹೋದರೂ ಬೇಗನೇ ಮಾನ್ಯತೆ ಕೊಟ್ಟು ತಕ್ಷಣ ಕೆಲಸ ಮಾಡತಕ್ಕಂಥಾದ್ದನ್ನು ಅವರು ಮಾಡುತ್ತಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿರತಕ್ಕಂಥ ೧೩ ನೆಹರು ಕೇಂದ್ರಗಳಲ್ಲಿ ಕೇವಲ ನಾಲ್ಕು ಕೇಂದ್ರಗಳು ಮಾತ್ರ ಫುಲ್-ಫ್ಲೆಡ್ಜ್ ಕೇಂದ್ರಗಳಾಗಿವೆ. ಇನ್ನುಳಿದಂತಹ ೯ ಕೇಂದ್ರಗಳನ್ನು ಏತಕ್ಕೆ ಫುಲ್ ಫ್ಲೆಡ್ಜ್ ಕೇಂದ್ರಗಳನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡಲಿಲ್ಲ ? ಇದಕ್ಕೆ ಸರ್ಕಾರದವರು ಉತ್ತರ ಹೇಳಬೇಕಾಗುತ್ತದೆ.

ಇವು ಯಾವ ಮಟ್ಟದಲ್ಲಿ ನಿಂತಿವೆ ಎನ್ನುವ ಬಗ್ಗೆ ಯಾರು ಗಮನಹರಿಸಿಲ್ಲ. ಇದರಿಂದ ಏನಾಗಿದೆ ಎಂದರೆ ನಮ್ಮ ಯುವಕರ ಆಕ್ಟಿವಿಟೀಸ್ ಕುಂಠಿತವಾಗಿದೆ ಎಂದು ನಾನು ಹೇಳಬಯಸುತ್ತೇನೆ. ಇವತ್ತು ನಮ್ಮ ಯೂನಿವರ್ಸಿಟಿಗಳಲ್ಲಿ ಫೆಸ್ಟಿವಲ್ಸ್ ಮಾಡಿ ಅಲ್ಲಿರತಕ್ಕಂಥ ಯುವಕರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಅವರಿಗೆ ಆಟ ಪಾಠಗಳನ್ನು ಕಲಿಸಿ ಪ್ರೋತ್ಸಾಹಿಸುವ ದೃಷ್ಟಿಯಿಂದ ಈ ಫೆಸ್ಟಿವಲ್ಸ್ ಮಾಡುತ್ತಾರೆ. ಇದಕ್ಕೆ ಸುಮಾರು ೨೦ ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ನಮ್ಮ ರಾಜ್ಯದಲ್ಲಿ ಸುಮಾರು ೭-೮ ಯೂನಿವರ್ಸಿಟಿಗಳು ಇವೆ. ಗುಲ್ಬರ್ಗಾ ಯೂನಿವರ್ಸಿಟಿ, ಕರ್ನಾಟಕ ಯೂನಿವರ್ಸಿಟಿ ಮಂಗಳೂರು ಯುನಿವರ್ಸಿಟಿ, ಶಿವಮೊಗ್ಗ ಯೂನಿವರ್ಸಿಟಿ, ಬೆಂಗಳೂರು ಯೂನಿವರ್ಸಿಟಿ, ಮೈಸೂರು ಯೂನಿವರ್ಸಿಟಿ ಮತ್ತು ಎರಡು ಅಗ್ರಿಕಲ್ಚರ್ ಯೂನಿವರ್ಸಿಟಿಗಳು ಇವೆ. ಈ ಎಲ್ಲಾ ಯೂನಿವರ್ಸಿಟಿಗಳಿಗೂ ಸೇರಿಸಿ ೨೦ ಸಾವಿರ ರೂಪಾಯಿಗಳು ಕೊಟ್ಟರೆ ಯಾವ ರೀತಿ ಪ್ರಯೋಜನವಾಗುತ್ತದೆ? ಕಾಲೇಜು ಮಟ್ಟದಲ್ಲಿ ಸ್ಪೋರ್ಟ್ಸ್ ಕಂಡೆಕ್ಟ್ ಮಾಡಿ ಇಂಟರನಲ್ ಕಾಲೇಜುಗಳಿಂದ ಬಂದಿರತಕ್ಕಂಥ ಯುವಕರನ್ನು ಯೂನಿವರ್ಸಿಟಿಗೆ ತರುತ್ತಾರೆ. ಆಮೇಲೆ ಇಂಟರನಲ್ ಯೂನಿವರ್ಸಿಟಿಗಳಿಗೆ ತರುತ್ತಾರೆ. ಇಂಥಾದ್ದಕ್ಕೆ ೨೦ ಸಾವಿರ ರೂಪಾಯಿಗಳು ಯಾವ ಮೂಲೆಗೆ? ಇದರಿಂದ ಏನು ಸಹಾಯವಾಗುತ್ತದೆ? ಈ ಹಣವನ್ನು ಸುಮ್ಮನೆ ನಾಮಕಾವಸ್ತೆಗೆ ಇಟ್ಟುಕೊಂಡಿದ್ದೀರಿ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆ ಯೋಜನೆಗೆ ಒಂದು ೧೦ ಸಾವಿರ ರೂಪಾಯಿಗಳು ಈ ಯೋಜನೆಗೆ ಒಂದು ಇಪ್ಪತ್ತು ಸಾವಿರ ರೂಪಾಯಿಗಳು ಇಟ್ಟು ತಾವು ಯಾರಿಗೆ ಲಾಭ ಮಾಡಿಕೊಡುತ್ತೀರೆಂದರೆ ಈಗಾಗಲೇ ನಮ್ಮ ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಹೇಳಿದ ಹಾಗೆ ಕೆಲವು ಅಸೋಸಿಯೇಷನ್‌ಗಳಿಗೆ ಮತ್ತು ಅದರ ಡೈರೆಕ್ಟರ್ಸ್‌ಗೆ ಅನುಕೂಲ ಮಾಡಿಕೊಡುತ್ತಿದ್ದೀರಿ. ಅವರು ಯಾವುದೋ ಬೋಗಸ್ ಓಚರ್ಸ್ ಹಾಕಿ ಸ್ಪೋರ್ಟ್ಸ್ ಕಂಡೆಕ್ಟ್ ಮಾಡಿದೆವು ಎಂದು ಹೇಳಿ ಹಣ ತಿನ್ನುತ್ತಾರೆ.

ಯುವಜನ ಸೇವಾ ಇಲಾಖೆಯಲ್ಲಿರುವವರು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ರಾಜ್ಯದಲ್ಲಿರತಕ್ಕ ಎಲ್ಲಾ ಯುವಕರುಗಳೂ ಸ್ಪೋರ್ಟ್ಸ್‌ಗಳಲ್ಲಿ ಭಾಗವಹಿಸುವುದಕ್ಕೆ ಸರ್ಕಾರ ಪ್ರೋತ್ಸಾಹ ಕೊಡಬೇಕು. ಸ್ಟೇಟ್ ಲೆವೆಲ್‌ನಲ್ಲಿ ಮತ್ತು ನ್ಯಾಷನಲ್ ಲೆವೆಲ್‌ನಲ್ಲಿ ಯುವಕರು ಕ್ರೀಡೆಗಳಲ್ಲಿ ಭಾಗವಹಿಸುವಂತೆ ಅನುಕೂಲವಾಗಲು ರಾಜ್ಯ ಸರ್ಕಾರ ಅವರಿಗೆ ಎಲ್ಲಾ ರೀತಿಯಿಂದಲೂ ಅನುಕೂಲ ಮಾಡಿಕೊಡಬೇಕು. ಈ ಅನುಕೂಲಕ್ಕಾಗಿ ಕನಿಷ್ಟಪಕ್ಷ ಐದು ಲಕ್ಷ ರೂಪಾಯಿಗಳನ್ನಾದರೂ ನೀವು ಪ್ರತಿ ಶಾಲಾಕಾಲೇಜುಗಳಿಗೆ ಕೊಡಬೇಕಾಗಿತ್ತು. ಆದರೆ ನೀವು ಅಷ್ಟು ಹಣವನ್ನು ಇಟ್ಟಿಲ್ಲ. ಈ ಕ್ರೀಡೆಗಳ ಬಗ್ಗೆ ಗಮನವನ್ನೇ ಹರಿಸಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಆಮೇಲೆ ಪ್ರತಿಯೊಂದು ಜಿಲ್ಲೆಯಲ್ಲೂ ಸ್ಟೇಡಿಯಂ ಕಟ್ಟಬೇಕೆಂಬ ಯೋಜನೆ ಇತ್ತು. ಈಗಾಗಲೇ ಕೆಲವು ಜಿಲ್ಲೆಗಳಲ್ಲಿ ಸ್ಟೇಡಿಯಂನ್ನು ಕಟ್ಟಲಾಗಿದೆ. ಆದರೆ ಈ ಸ್ಟೇಡಿಯಂಗಳನ್ನು ಸರಿಯಾಗಿ ಮೆಯಿನ್‌ಟೈನ್ ಮಾಡುತ್ತಿಲ್ಲ. ಕೆಲವು ಜಿಲ್ಲೆಗಳಲ್ಲಿ ಅಲ್ಲಿನ ಡೆಪ್ಯುಟಿ ಕಮಿಷನರ್‌ರವರು, ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ಸ್‌ಗಳು, ಪೋಲೀಸ್ ಆಫೀಸರ್ಸ್‌ಗಳು ಹಾಗೂ ಇತರೆ ದೊಡ್ಡ ದೊಡ್ಡ ಹುದ್ದೆಗಳಲ್ಲಿರುವ ಆಫೀಸರ್ಸ್‌ಗಳು ಕಾಂಟ್ರಿಬ್ಯೂಟ್ ಮಾಡಿ ಸ್ಟೇಡಿಯಂಗೆ ಹಣವನ್ನು ಒದಗಿಸಿಕೊಟ್ಟಿದ್ದರು. ಸ್ಟೇಡಿಯಂಗಳನ್ನೇನೋ ಕಟ್ಟಿದ್ದಾಗಿದೆ. ಆದರೆ ಅವುಗಳನ್ನು ಸರಿಯಾಗಿ ಸರ್ಕಾರ ಮೆಯಿನ್‌ಟೈನ್ ಮಾಡುತ್ತಿಲ್ಲ. ಯಾವಾಗಲಾದರೂ ಒಮ್ಮೆ ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಸ್ಪೋರ್ಟ್ಸ್ ಆದಾಗ ಮಾತ್ರ ಆ ಸ್ಟೇಡಿಯಂಗೆ ಸುಣ್ಣ ಬಣ್ಣ ಹಚ್ಚುತ್ತಾರೆಯೇ ಹೊರತು ಬೇರೆ ಸಮಯದಲ್ಲಿ ಅದರ ಕಡೆ ಗಮನವನ್ನೇ ಹರಿಸುವುದಿಲ್ಲ. ಬೇರೆ ಟೈಮ್‌ನಲ್ಲಿ ನಾಯಿ ನರಿ, ಹಂದಿ ಎಲ್ಲಾ ಅಲ್ಲಿ ಹೋಗಿ ಹೊಲಸು ಮಾಡಿಕೊಂಡಿರುತ್ತವೆ. ಗುಲ್ಬರ್ಗಾದಲ್ಲೂ ಇದೇ ಪರಿಸ್ಥಿತಿ. ರಾಯಚೂರಿನಲ್ಲಿಯೂ ನೋಡಿದ್ದೇನೆ, ಅಲ್ಲಿಯೂ ಇದೆ ಪರಿಸ್ಥಿತಿ ಇದೆ. ಎಲ್ಲಾ ಜಿಲ್ಲೆಗಳಲ್ಲೂ ಇದೇ ಪರಿಸ್ಥಿತಿ ಇರಬಹುದೆಂದು ಕಾಣುತ್ತದೆ. ಕನಿಷ್ಟಪಕ್ಷ ನೀವು ಮೂರು ನಾಲ್ಕು ಜನರಿಗಾದರೂ ಸಂಬಳವನ್ನು ಕೊಟ್ಟು ಪ್ರತಿ ವರ್ಷ ಆ ಸ್ಟೇಡಿಯಂಗೆ ಸುಣ್ಣಬಣ್ಣ ಬಳಿಸಿ ಮೆಯಿನ್‌ಟೈನ್ ಮಾಡುವುದು ಒಳ್ಳೆಯದು. ಇಲ್ಲದಿದ್ದರೆ ಆ ಸ್ಟೇಡಿಯಂಗಳು ಕೆಲವೇ ದಿವಸಗಳಲ್ಲಿ ಹಾಳಾಗಿ ಹೋಗುತ್ತವೆ. ಇಷ್ಟು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಸ್ಟೇಡಿಯಂಗಳನ್ನು ಕಟ್ಟಿದರೂ ಮೆಯಿನ್‌ಟೈನ್ ಮಾಡದಿದ್ದರೆ ಅವು ಪ್ರಯೋಜನಕ್ಕೆ ಬಾರದೇ ಹೋಗುತ್ತವೆ. ಮಾನ್ಯ ಮಂತ್ರಿಗಳು ಈ ಕಡೆ ಗಮನವನ್ನು ಹರಿಸಿ ಎಲ್ಲಾ ಜಿಲ್ಲೆಗಳಲ್ಲಿರುವ ಸ್ಟೇಡಿಯಂಗಳು ಸರಿಯಾದ ರೀತಿಯಲ್ಲಿ ಮೆಯಿನ್‌ಟೈನ್ ಮಾಡುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ಇನ್ನೊಂದು ವಿಷಯದ ಬಗ್ಗೆ ವಿಶೇಷವಾಗಿ ಹೇಳುವುದಾದರೆ Financial assistance for development

of play-fields and purchase of sports equipments ಗೆ ಸಂಬಂಧಪಟ್ಟಂತೆ ಬಹಳ ಕಡಿಮೆ ಹಣವನ್ನು ನೀವು ಕೊಡುತ್ತಿದ್ದೀರಿ. "This scheme is meant for providing financial assistance to private educational institutions for developing sports fields and purchase of sports equipments. During the current year an amount of Rs. 1,60 lakhs has been provided." ಇಷ್ಟೇ ನೀವು ಕೊಡುವುದು ಅಂದರೆ ಇದು ಯಾವ ಮೂಲೆಗೆ ಸಾಕಾಗುತ್ತದೆ, ಇದನ್ನು ತಾವು ಯೋಜನೆ ಮಾಡಬೇಕು. ತಮಗೆ ಗೊತ್ತಿದ್ದ ಹಾಗೆ ಅಧ್ಯಕ್ಷರೇ ನಮ್ಮ ರಾಜ್ಯದಲ್ಲಿ ಸಾವಿರಾರು ಕಾಲೇಜುಗಳು ಇವೆ. ಈ ಎಲ್ಲಾ ಕಾಲೇಜುಗಳಿಗೆ ಸಹಾಯ ಮಾಡಬೇಕೆಂದರೂ ಕನಿಷ್ಟ ಪಕ್ಷ ಒಂದೊಂದು ಕಾಲೇಜಿಗೆ ಇಪ್ಪತ್ತು ಸಾವಿರ ರೂಪಾಯಿಗಳನ್ನು ಕೊಡಬೇಕು ಒಂದು ಕಾಲೇಜಿಗೆ ಇಪ್ಪತ್ತು ಸಾವಿರ ರೂಪಾಯಿಗಳನ್ನು ಕೊಟ್ಟರೆ ನಮ್ಮ ರಾಜ್ಯದಲ್ಲಿರತಕ್ಕಂಥ ಎಲ್ಲಾ ಕಾಲೇಜುಗಳಿಗೂ ಕ್ರೀಡಾಭಿವೃದ್ಧಿಗೆ ವರ್ಷಕ್ಕೆ ಮೂವತ್ತು ಲಕ್ಷ ರೂಪಾಯಿಗಳಾದರೂ ಸಾಕಾಗುವುದಿಲ್ಲ. ಅಂಥದ್ದರಲ್ಲಿ ನೀವು ಕೇವಲ ಒಂದು ಲಕ್ಷದ ಅರವತ್ತು ಸಾವಿರ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಿ. ಈ ಹಣಕ್ಕೆ ಯಾವ ಕಾಲೇಜಿನವರು ನಿಮ್ಮ ಮೇಲೆ ಪ್ರಭಾವ ಬೀರುತ್ತಾರೋ ಅಂಥ ಕಾಲೇಜುಗಳಿಗೂ ಮಾತ್ರ ಸಹಾಯ ಕೊಡುವುದಕ್ಕಾಗುತ್ತದೆಯೇ ಹೊರತಾಗಿ ಎಲ್ಲಾ ಕಾಲೇಜುಗಳಿಗೂ ಸಹಾಯ ಮಾಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ದಯವಿಟ್ಟು ಗಮನವನ್ನು ಹರಿಸಬೇಕು. ಇದುವರೆಗೂ ಇಂಥ ಕಡೆ ಸರ್ಕಾರ ಗಮನ ಹರಿಸಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಆಮೇಲೆ ಮಾನ್ಯ ಅಧ್ಯಕ್ಷರೇ, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಯೂಥ್ ಹಾಸ್ಟೆಲ್‌ಗಳನ್ನು ತೆರೆಯುವುದು ಅವಶ್ಯಕ ಇವೆ ಪ್ರತಿಯೊಂದು ಜಿಲ್ಲೆಯಲ್ಲೂ 'ಯೂಥ್ ಹಾಸ್ಟೆಲ್' ಇರಬೇಕು ಹಳ್ಳಿಯಿಂದ ಯುವಕರು ಪಟ್ಟಣಗಳಿಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ಗೆಂದೋ ನೌಕರಿಗೆ ಅರ್ಜಿ ಹಾಕುವುದಕ್ಕೆಂದೋ ಅಥವಾ ಕಾಲೇಜುಗಳಿಗೆ ಅಡ್ಮಿಷನ್ ಪಡೆಯಲೆಂದೋ ಬರುತ್ತಾರೆ. ಹಳ್ಳಿಗಳಿಂದ ಬರುವ ಈ ಜನರಿಗೆ ಪಟ್ಟಣಗಳಲ್ಲಿ ಯಾರೂ ಪರಿಚಯ ವಿರುವುದಿಲ್ಲ. ಯೂಥ್ ಹಾಸ್ಟೆಲ್‌ಗಳು ಜಿಲ್ಲೆಗಳಲ್ಲಿದ್ದರೆ ಹಳ್ಳಿಗಳಿಂದ ಬರುವ ಯುವಕರು ಆ ಹಾಸ್ಟೆಲ್‌ನಲ್ಲಿ ರಾತ್ರಿ ಹೊತ್ತು ಇಳಿದುಕೊಂಡು ತಮ್ಮ ಕೆಲಸಗಳನ್ನು ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಹಾಸ್ಟೆಲ್‌ಗಳು ಇಲ್ಲದೇ ಇದ್ದರೆ ಲಾಡ್ಜಿಂಗ್‌ನಲ್ಲಿ ೩೦-೪೦ ರೂಪಾಯಿಗಳ ಬಾಡಿಗೆಯನ್ನು ಕೊಟ್ಟಿರುವುದಕ್ಕೆ ಬಡ ಜನರಿಗೆ ಸಾಧ್ಯವಾಗುವುದಿಲ್ಲ. ಆದುದರಿಂದ ಮಾನ್ಯ ಮಂತ್ರಿಯವರು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಯೂಥ್ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಿ ಹಳ್ಳಿಗಳಿಂದ ಪಟ್ಟಣಗಳಿಗೆ ಇಂಟರ್‌ವ್ಯೂಗೆಂದೋ ಕೆಲಸಕ್ಕೆಂದೋ ಬರುವ ಬಡ ಯುವಕರಿಗೆ ಬಹಳ ಅನುಕೂಲ ವಾಗುತ್ತದೆ. ಯೂಥ್ ಹಾಸ್ಟೆಲ್‌ಗಳಲ್ಲಿ ಇಳಿದುಕೊಂಡರೆ ಕಡಿಮೆ ಖರ್ಚಿನಲ್ಲಿ ಸ್ನಾನ ಮಾಡಿಕೊಂಡು ಊರಿನಿಂದ ತಂದಿರತಕ್ಕಂಥ ಪೆಟ್ಟಿಗೆಗಳನ್ನು ಆ ಹಾಸ್ಟೆಲ್‌ನಲ್ಲಿ ಇಟ್ಟುಕೊಂಡು ಯುವಕರು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಕೊಂಡು ಇಂಟರ್‌ವ್ಯೂಗೆ ಬಂದಿದ್ದರೆ ಇಂಟರ್‌ವ್ಯೂ ಮುಗಿಸಿಕೊಂಡು ಹೋಗುತ್ತಾರೆ. ಈ ಹಳ್ಳಿಗಳ ಹುಡುಗರು ಎಂಜಿನಿಯರಿಂಗ್ ಕಾಲೇಜಿಗೋ ಅಥವಾ ಮೆಡಿಕಲ್ ಕಾಲೇಜಿಗೆ ಸೇರಿಕೊಳ್ಳುವುದಕ್ಕೆ ಹಳ್ಳಿಗಾಡುಗಳಿಂದ ಜಿಲ್ಲಾ ಕೇಂದ್ರಕ್ಕೆ ಹೊಸದಾಗಿ ಬಂದಾಗ ಅವರುಗಳಿಗೆ ಇಳಿದುಕೊಳ್ಳುವುದಕ್ಕೆ ಸ್ಥಳ ಸಿಗದಿದ್ದಾಗ ಇಂಥ ಯೂಥ್ ಹಾಸ್ಟೆಲ್‌ನಲ್ಲಿ ಇಳಿದುಕೊಳ್ಳುವುದಕ್ಕೆ ಫೆಸಿಲಿಟಿ ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಯೂಥ್ ಹಾಸ್ಟೆಲ್‌ಗಳನ್ನು ತೆರೆದು ಬಡ ಮಕ್ಕಳಿಗೆ ಅನುಕೂಲಗಳನ್ನು ಮಾಡಿಕೊಡಬೇಕೆಂದು ಈ ಮೂಲಕ ಸಲಹೆಯನ್ನು ಕೊಡುತ್ತೇನೆ. ಬೆಂಗಳೂರು ಮತ್ತು ಸುತ್ತಮುತ್ತ ಇರುವ ಪಟ್ಟಣಗಳಲ್ಲಿ ಮಾತ್ರ ನೀವು ಇಂಥ ಫೆಸಿಲಿಟಿಗಳನ್ನು ಮಾಡಿದ್ದೀರಿ. ಆದರೆ ಗುಲ್ಬರ್ಗ, ಬೆಳಗಾಂ, ಧಾರವಾಡ ಇವೆಲ್ಲಾ ದೊಡ್ಡ ದೊಡ್ಡ ಪಟ್ಟಣಗಳು ಆಗಿದ್ದರೂ ಸಹಾ ನೀವು ಯಾವುದೇ ರೀತಿಯ ಯೂಥ್ ಹಾಸ್ಟೆಲ್. ಫೆಸಿಲಿಟಿಯನ್ನು ಒದಗಿಸಿಕೊಟ್ಟಿಲ್ಲ. ಗುಲ್ಬರ್ಗ, ಬೆಳಗಾಂ, ಧಾರವಾಡಗಳಲ್ಲಿ ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಫಾರ್ಮಸಿ ಕಾಲೇಜುಗಳಿಗೆ ಸೇರಿಕೊಳ್ಳುವುದಕ್ಕೆ ಸುತ್ತಮುತ್ತಲೂ ಇರುವ ಹಳ್ಳಿ ಪ್ರದೇಶಗಳ ವಿದ್ಯಾರ್ಥಿಗಳು ಬರುತ್ತಾರೆ, ಆದರೆ ಅವರಿಗೆ ಇಳಿದುಕೊಳ್ಳುವುದಕ್ಕೆ ಸರಿಯಾದ ಸ್ಥಳವೇ ಇರುವುದಿಲ್ಲ. ಹಳ್ಳಿ ಪ್ರದೇಶಗಳಿಂದ ಇಂಟರ್‌ವ್ಯೂಗೆ ಏನಾದರೂ ಜಿಲ್ಲಾ ಕೇಂದ್ರಗಳಿಗೆ ಹುಡುಗರು ಅರ್ಜಿಗಳನ್ನು ಹಾಕುವುದಕ್ಕೆ ಅಥವಾ ಇನ್ಯಾವುದೋ ಕೆಲಸಕ್ಕೆ ಬಂದರೆ ಸುಮಾರು ಎರಡು ನೂರು ರೂಪಾಯಿಗಳಷ್ಟು ಅವರು ಖರ್ಚು ಮಾಡಬೇಕಾಗುತ್ತದೆ. ಎರಡನೇ ಸಾರಿ ಅವರು ಬರಬೇಕಾದರೆ ಅವರ ಮನೆಯವರು ಮೊನ್ನೆ ತಾನೇ ಎರಡು ನೂರು

ರೂಪಾಯಿ ಖರ್ಚು ಮಾಡಿಕೊಂಡು ಹೋಗಿದ್ದೀಯಾ, ಪುನಃ ಏತಕ್ಕೆ ಹೋಗುವುದು ಎಂದು ಹೇಳಿ ಅವರನ್ನು ಮನೆಯಲ್ಲಿಯೇ ನಿಲ್ಲಿಸುತ್ತಾರೆ. ಇದರಿಂದ ಹುಡುಗರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಇದನ್ನು ಪದೇ ಪದೇ ಏತಕ್ಕೆ ಹೇಳುತ್ತಿದ್ದೇನೆಂದರೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಯೂಥ್ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಿಸಬೇಕು. ಯೂಥ್ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ಇರುವ ತೊಂದರೆಯಾದರೂ ಏನು ? ಒಂದು ಹಾಸ್ಟೆಲ್‌ನ್ನು ಪ್ರಾರಂಭ ಮಾಡಿದರೆ ಅದಕ್ಕೆ ತಗಲುವ ವೆಚ್ಚದಲ್ಲಿ ೭೫ ಪರ್‌ಸೆಂಟ್ ಕೇಂದ್ರ ಸರ್ಕಾರ ಕೊಡುತ್ತದೆ ನೀವು ಹಾಕುವುದು ಕೇವಲ ೨೫ ಪರ್‌ಸೆಂಟ್ ಮಾತ್ರ. ನೀವು ಈ ಕೂಡಲೇ ಡೆಪ್ಯೂಟಿ ಕಮಿಷನರ್‌ರವರಿಗೂ ಅಥವಾ ಸಂಬಂಧಪಟ್ಟ ಆಫೀಸರ್‌ಗಳಿಗೆ ತಿಳಿಸಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಒಂದೊಂದು ಯೂತ್ ಹಾಸ್ಟೆಲ್‌ಗಳನ್ನು ಕಟ್ಟುವುದಕ್ಕೆ ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆಮೇಲೆ ಇನ್ನೊಂದು ವಿಷಯ ಹೇಳ ಬೇಕೆಂದರೆ, ಈಗಾಗಲೇ ನನ್ನ ಅನೇಕ ಮಿತ್ರರು ಅದರ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಬೆಲ್ಲದ್‌ರವರೂ ಸಹಾ ಮಾತನಾಡಿದ್ದಾರೆ. ನಾವು ಯಾವ ಸ್ಪೋರ್ಟ್ಸ್‌ಗಳಿಗೆ ಹೆಚ್ಚಿನ ಗಮನವನ್ನು ಕೊಡುತ್ತಿದ್ದೇವೆ ಎಂದರೆ ಕ್ರಿಕೆಟ್, ಹಾಕಿ, ಟೆನಿಸ್, ಮುಂತಾದವುಗಳಿಗೆ ಮಾತ್ರ. ನಾವು ಶ್ರೀಮಂತ ಜನಗಳನ್ನು ಆಕರ್ಷಣೆ ಮಾಡತಕ್ಕಂಥ ಮತ್ತು ಅವರ ಮನಸ್ಸನ್ನು ಒಲಿಸತಕ್ಕಂಥ ಕ್ರೀಡೆಗಳಿಗೆ ಮಾತ್ರ ನಾವು ಹೆಚ್ಚು ಗಮನವನ್ನು ಕೊಡುತ್ತಿದ್ದೇವೆ. ಆದರೆ ನಮ್ಮ ದೇಶದ ಆಟಗಳೇ ಆದ ಕೊಕ್ಕೋ ಕಬಡ್ಡಿ, ಇಂತಹವುಗಳಿಗೆ ಗಮನವನ್ನೇ ಕೊಡುತ್ತಿಲ್ಲ. ಕ್ರಿಕೆಟ್ ಗೇಮ್‌ನಲ್ಲಿ ಕ್ರೀಡಾಪಟುಗಳಿಗೂ ಅಂಥ ಹೆಚ್ಚಿನ ವ್ಯಾಯಾಮ ಏನೂ ಸಿಗುವುದಿಲ್ಲ. ಆದರೆ ಕಬಡ್ಡಿ, ಕೊಕ್ಕೋ, ಮುಂತಾದ ಗೇಮ್‌ಗಳಲ್ಲಿ ಹೆಚ್ಚಿನ ಎಕ್ಸರ್‌ಸೈಜ್ ಆಗುತ್ತದೆ. ಆದರೆ ನಾವು ಆ ಕಡೆ ಗಮನವನ್ನು ಕೊಡುತ್ತಿಲ್ಲ. ಪಾರ್ಟಿಸಿಪೆಂಟ್ ಗೇಮ್‌ಗಳಾದ ಫುಟ್‌ಬಾಲ್ ವಾಲಿಬಾಲ್ ಮುಂತಾದವುಗಳಿಗೆ ಗಮನ ಕೊಡದೇ ೨೨ ಜನ ಲೇಜಿ ಫೆಲೋಸ್ ಸೇರಿಕೊಂಡು ಆಡುವಂಥ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವಂಥ ಕ್ರಿಕೆಟ್ ಆಟಕ್ಕೆ ನಾವು ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ. ಇದು ಸರಿಯಲ್ಲ. ಇದರ ಕಡೆ ನಾವು ಹೆಚ್ಚಿನ ಗಮನವನ್ನು ಕೊಟ್ಟು ವಾಲಿಬಾಲ್, ಫುಟ್‌ಬಾಲ್, ಕೊಕ್ಕೋ ಕಬಡ್ಡಿ ಮುಂತಾದ ಆಟಗಳಿಗೆ ಹೆಚ್ಚು ಗಮನವನ್ನು ಕೊಡಬೇಕು. ಮಾನ್ಯ ಅಧ್ಯಕ್ಷರೇ, ಮೊದಲು ದಸರಾ ಸಮಯದಲ್ಲಿ ಸ್ಪೋರ್ಟ್ಸ್ ನಡೆಯುತ್ತಿತ್ತು. ಆಗ ಏನು ಮಾಡುತ್ತಿದ್ದರು ಎಂದರೆ ಎಲ್ಲಾ ತಾಲ್ಲೂಕು ಲೆವೆಲ್‌ನಲ್ಲಿ ಮೊದಲು ಪಂದ್ಯಗಳು ನಡೆದು ಆ ಪಂದ್ಯಗಳಲ್ಲಿ ಯಾರು ಜಯಗಳಿಸುತ್ತಾರೋ ಅಂಥವರುಗಳನ್ನು ಸೆಲೆಕ್ಟ್ ಮಾಡಿ ಆಮೇಲೆ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸುವುದಕ್ಕೆ ಕಳುಹಿಸುತ್ತಿದ್ದರು. ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಗೆದ್ದವರನ್ನು ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆ ಮಾಡುತ್ತಿದ್ದರು. ಆಗ ದೇಹಕ್ಕೆ ವ್ಯಾಯಾಮ ನೀಡುವ ವೈಟ್ ಲಿಫ್ಟ್, ಕುಸ್ತಿ ಮುಂತಾದ ಕ್ರೀಡೆಗಳನ್ನು ಆಡುತ್ತಿದ್ದರು. ಇವತ್ತಿನ ದಿವಸಗಳಲ್ಲಿ ಇಂಥ ಕ್ರೀಡೆಗಳ ಬಗ್ಗೆ ಲಕ್ಷ್ಯವೇ ಇಲ್ಲ. ಮೊದಲು ಎಲ್ಲಾ ತಾಲ್ಲೂಕು ಕೇಂದ್ರಗಳಿಂದಲೂ ಪ್ರತಿಭಾನ್ವಿತ ಕ್ರೀಡಾಪಟುಗಳನ್ನು ಸರ್ಕಾರ ಗುರುತಿಸಬೇಕು. ಈ ರೀತಿ ಗುರುತಿಸಿ ಕ್ರೀಡಾಪಟುಗಳಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ತರಬೇತಿಯನ್ನು ಕೊಟ್ಟು ರಾಜ್ಯ ಮಟ್ಟದ ಸ್ಪರ್ಧೆಗಳನ್ನಾಗಿ ಆಯ್ಕೆ ಮಾಡಬೇಕು. ಆಮೇಲೆ ರಾಷ್ಟ್ರ ಮಟ್ಟದ ಹಾಗೂ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳನ್ನಾಗಿ ಆಯ್ಕೆ ಮಾಡಬೇಕು ಆದರೆ, ಇಂಥ ಯಾವ ಕೆಲಸಗಳನ್ನು ಮಾಡುತ್ತಿಲ್ಲ. ಆದರೆ ವರ್ಷಕ್ಕೊಮ್ಮೆ ಮಾತ್ರ ಮಾನ್ಯ ಅಧ್ಯಕ್ಷರೇ, ತಮ್ಮ ಅಧ್ಯಕ್ಷತೆಯಲ್ಲಿ, ನಮಗೆ ಮಾತ್ರ ಕ್ರೀಡೆಗಳನ್ನು ತೋರಿಸುತ್ತಾರೆ. ರನ್ನಿಂಗ್, ಪನ್ನಿಂಗ್ ಎಂದು ಮಾಡುತ್ತಾರೆ, ಚೀಫ್ ಮಿನಿಸ್ಟರ್ ಕ್ರಿಕೆಟ್ ಟೀಮ್ ಒಂದು ಅಪೋಸಿಷನ್ ಲೀಡರ್ ಅವರ ಒಂದು ಕ್ರಿಕೆಟ್ ಟೀಮ್ ಒಂದು ಎಂದು ಇಟ್ಟುಕೊಂಡು ಆಡುತ್ತಾರೆ.

ನಾನು ಇದನ್ನು ಏತಕ್ಕೆ ಹೇಳುತ್ತಾ ಇದ್ದೇನೆ ಅಂದರೆ, ಈ ಕಡೆಗೆ ತಾವುಗಳು ಇನ್ನೂ ಹೆಚ್ಚು ಗಮನಕೊಟ್ಟರೆ, ರಾಜ್ಯದಲ್ಲಿ ಯಾರು ಪ್ರತಿಭಾಶಾಲಿ ಕ್ರೀಡಾಪಟುಗಳಿದ್ದಾರೆ. ಅಂತಹವರನ್ನು ಕಂಡುಹಿಡಿಯುವುದಕ್ಕೆ ಇದರಿಂದ ಅವಕಾಶವಾಗುತ್ತದೆ. ಇಲ್ಲದಿದ್ದರೆ ಯಾವುದೋ ಒಂದು ಕಾಂಪಿಟೇಶನ್ ಇದ್ದಾಗ, ಅಥವಾ ಯಾವುದೋ ಒಂದು ಕ್ರೀಡೆಗಳಿಗೆ ಸಂಬಂಧಪಟ್ಟ ಕಾರ್ಯಕ್ರಮಗಳು ಇದ್ದಾಗ. ಕೆಲವು ಹೆಸರುಗಳನ್ನು ಕಳುಹಿಸಿಕೊಡಿ ಎಂದು ಡಿ.ಸಿ.ಯವರಿಗೆ ಬರೆಯುವುದು, ಅದನ್ನು ಅವರು ನೋಡಿಕೊಂಡು ತಮಗೆ ಬೇಕಾದಂಥ ಅಥವಾ ಯಾರು ಪ್ರಭಾವಶಾಲಿಗಳು ಇದ್ದಾರೆ ಅವರು ಕೊಟ್ಟಂಥ ಹೆಸರುಗಳನ್ನು ಕಳುಹಿಸಿಕೊಡುವುದು ಮುಂತಾಗಿ ಮಾಡುವಲ್ಲಿ ಅವಕಾಶ ಉಂಟಾಗುತ್ತದೆ. ಹೀಗಾಗಿ ರಾಜ್ಯ ಮಟ್ಟದಲ್ಲಿ ನಡೆಯತಕ್ಕಂಥ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುವವರು ಅಂದರೆ ಓಡುವ ಸ್ಪರ್ಧೆಗೆ ಭಾಗವಹಿಸುವವರಿಗೆ ಜೋರಾಗಿ ನಡೆಯುವುದಕ್ಕೆ ಕೂಡ ಬರುವುದಿಲ್ಲ ಅಂತಹವರನ್ನು ಆಯ್ಕೆ

ಮಾಡುವಂಥ ಪ್ರಸಂಗಗಳೂ ಇದ್ದಾವೆ. ಯಾವುದರಲ್ಲಿ ಪ್ರವೀಣರು ಯಾರಿದ್ದಾರೆ ಎಂದು ಕಂಡುಹಿಡಿದು ಸೂಕ್ತ ಅಭ್ಯರ್ಥಿಗಳನ್ನು ಇಂತಹ ಸ್ಪರ್ಧೆಗಳಲ್ಲಿ ಆಯ್ಕೆ ಮಾಡುವಂಥ ಪರಿಸ್ಥಿತಿಯು ತಪ್ಪಿದರೆ ನೀವು ಹೇಗೆ ಸ್ಪೋರ್ಟ್ಸ್‌ನ್ನು ಬೆಳೆಸುತ್ತೀರಿ? ಈ ಬಗ್ಗೆ ನಿಮ್ಮ ಗಮನವನ್ನು ಹರಿಸಬೇಕಾಗುತ್ತದೆ. ಒಂದುಕಡೆ ಹೇಳುತ್ತೀರಿ, ದೊಡ್ಡ ದೊಡ್ಡ ಕೆಲಸಕಾರ್ಯಗಳಿಗೆ ಹಣವಿಲ್ಲದ ಕಾರಣ ಅವುಗಳನ್ನು ನಿಲ್ಲಿಸಿದ್ದೇವೆ ಎಂದು. ಹಾಗಿದ್ದಲ್ಲಿ ಕನಿಷ್ಟಪಕ್ಷ ಇಂತಹ ಒಂದು ಯುವಜನ ಕಲ್ಯಾಣಪರವಾಗಿರುವ ಕಾರ್ಯ ಗಳಿಗಾದರೂ ಸ್ವಲ್ಪ ಖರ್ಚು ಮಾಡಿ. ಈ ದೃಷ್ಟಿಯಿಂದ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಯುವಜನರಿಗೆ ಸಹಾಯ ಮಾಡುವಂಥ ವಿಚಾರದಲ್ಲಿ ಮತ್ತು ಅವರ ದೈಹಿಕ ಶಿಕ್ಷಣದ ವಿಚಾರದಲ್ಲಿ ಹೆಚ್ಚು ಗಮನವನ್ನು ಕೊಡಿ. ಇದಕ್ಕೆ ದೊಡ್ಡ ಮೊತ್ತದ ಹಣವು ಬೇಕಾಗುವುದಿಲ್ಲ. ನೀವು ಪುಸ್ತಕಗಳ ಪ್ರಿಂಟಿಂಗ್‌ಗಾಗಿ ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತಾ ಇದ್ದೀರಿ. ಆದರೆ ಈ ಬಾಬಿಗೆ ನಿಮಗೆ ಹಣ ಖರ್ಚು ಮಾಡಲು ಮನಸ್ಸು ಬರುವುದಿಲ್ಲ. ನಿಮ್ಮ ಸರ್ಕಾರದ ಸಾಧನೆಗಳನ್ನು ಪುಸ್ತಕಗಳನ್ನು ಹೊರತರುವುದರ ಮೂಲಕ ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತೀರಿ, ಆದರೆ ಯುವಜನರಿಗೋಸ್ಕರವಾಗಿ ನಿಮ್ಮಲ್ಲಿ ಹಣ ಇಲ್ಲವೇ? ಇದರ ಬಗ್ಗೆ ಆಸಕ್ತಿವಹಿಸಿ ಈ ಬಗ್ಗೆಯೂ ಕೋಟಿಗಟ್ಟಲೆ ಹಣವನ್ನು ಏಕೆ ಇಡಬಾರದು? ನೀವೇ ಕೊಟ್ಟ ಲೆಕ್ಕದ ಪ್ರಕಾರ ನೀವು ಖರ್ಚು ಮಾಡಿದ್ದು ಕೇವಲ ೧ ಕೋಟಿ ೯೦ ಲಕ್ಷ ರೂಪಾಯಿಗಳು ಮಾತ್ರ. ಅಂದರೆ ತಲಾ ವೆಚ್ಚವನ್ನು ಕಂಡುಹಿಡಿದು ಹೇಳುವುದಾದರೆ ಅದು ಒಬ್ಬರಿಗೆ ಒಂದು ರೂಪಾಯಿಗಿಂತಲೂ ಕಡಿಮೆ ಎಂದು ಕಂಡುಬರುತ್ತದೆ. ಹೀಗೆ ತಲಾ ಒಂದು ರೂಪಾಯಿ ಗಿಂತಲೂ ಕಡಿಮೆ ಹಣವನ್ನು ಖರ್ಚು ಮಾಡಿದರೆ, ಯಾವ ರೀತಿಯಲ್ಲಿ ನೀವು ಯುವಜನ ಕಲ್ಯಾಣ ಕಾರ್ಯಕ್ರಮಗಳಲ್ಲಿ ಸುಧಾರಣೆಯನ್ನು ಮಾಡುತ್ತೀರಿ? ಇನ್ನು ಮುಂದಾದರೂ ಯುವಜನ ಹಾಸ್ಟೆಲ್‌ಗಳನ್ನು ಪ್ರತಿಯೊಂದು ಜಿಲ್ಲೆಯಲ್ಲಿಯೂ ತೆರೆಯಬೇಕು. ಹಾಗೆಯೇ ಲೋಕಲ್ ಆಟಗಳು ಏನಿವೆ, ಅವುಗಳಿಗೆ ಹೆಚ್ಚಿನ ಗಮನವನ್ನು ಕೊಡಬೇಕು. ಮಾನ್ಯ ಸದಸ್ಯರಾದ ಬೆಲ್ಲದ್‌ರವರು ಹೇಳಿದಹಾಗೆ ಕುಸ್ತಿ ಪಂದ್ಯಗಳಿಗೂ ಕೂಡ ಹೆಚ್ಚಿನ ಪ್ರೋತ್ಸಾಹವನ್ನು ಕೊಡು ವಂತಾಗಬೇಕು ಹಿಂದೆ ಈ ಬಗ್ಗೆ ಒಂದೊಂದು ವಿಧಾನಸಭಾ ಕ್ಷೇತ್ರದಲ್ಲಿ ಸ್ಟೇಡಿಯಂ ಮಾಡಿಕೊಡು ತ್ತೇವೆ ಎಂದು ಹೇಳಿದ್ದರು. ಅದಕ್ಕಾಗಿ ೫೦ ಸಾವಿರ, ಒಂದು ಲಕ್ಷ ಹಣವನ್ನು ಕೊಡುತ್ತೇವೆಂದು ಎಂದು ಸಹ ಹೇಳಿದ್ದರು. ಆದರೆ ಹೀಗೆ ಹೇಳಿದಂತಹ ಅನೇಕ ಕಡೆಗಳಲ್ಲಿ ಆ ಕೆಲಸವು ಇನ್ನೂ ಪ್ರಾರಂಭ ವಾಗಿಲ್ಲ ಕಾರಣವನ್ನು ಕೇಳಿದಾಗ, ಈ ಕಾರ್ಯಗಳನ್ನು ಎನ್.ಆರ್.ಇ.ಪಿ. ಕೆಲಸದ ಜೊತೆಗೆ ತೆಗೆದು ಕೊಳ್ಳುತ್ತೇವೆ, ಅದಕ್ಕಾಗಿ ಅವರು ಹಣವನ್ನು ಕೊಟ್ಟ ಮೇಲೆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳಿದರು. ನಮ್ಮ ಗುರುಮಿಟ್‌ಕಲ್‌ನಲ್ಲಿ ಇಂತಹ ಒಂದು ಸ್ಟೇಡಿಯಂ ಮಂಜೂರಾಗಿ ನಾಲ್ಕು ವರ್ಷಗಳು ಆಯಿತು. ಆದರೆ ಅದಕ್ಕಾಗಿ ೧೦ ಪೈಸೆಗಳನ್ನು ಕೂಡ ಇಲ್ಲಿಯವರೆಗೆ ಖರ್ಚು ಮಾಡಿಲ್ಲ. ಆದುದರಿಂದ ಕನಿಷ್ಟಪಕ್ಷ ಇಂತಹ ಕೆಲಸ ಕಾರ್ಯಗಳ ಬಗ್ಗೆ ನಿಗಾ ವಹಿಸಲು ಯಾರು ಜಿಲ್ಲಾ ಮಂತ್ರಿಗಳು ಇದ್ದಾರೋ, ಅವರು ಯಾವುದೇ ಇಂತಹ ಕಾರ್ಯಕ್ರಮಗಳು ಇರಲಿ, ಅದು ೨೦ ಅಂಶಗಳ ಕಾರ್ಯ ಕ್ರಮವೇ ಇರಲಿ, ಅಥವಾ ಕರ್ನಾಟಕ ಡೆವಲಪ್ ಮೆಂಟ್ ಪ್ರೋಗ್ರಾಮ್ ಎಂದು ಏನು ಮಾಡಿಕೊಂಡಿ ದ್ದೀರಿ, ಅದರಲ್ಲಿ ಆದರೂ ಕೂಡ ಏನೇನು ಕೆಲಸಗಳು ಆಗಿದೆ, ಎಲ್ಲಿ ಕೆಲಸ ಸ್ಥಗಿತಗೊಂಡಿದೆ ಮಂತ್ರಿ ಏತಕ್ಕಾಗಿ ಸ್ಥಗಿತಗೊಂಡಿದೆ, ಹಾಗೂ ಯಾವ ಯಾವ ಕೆಲಸಕ್ಕಾಗಿ ಎಷ್ಟೆಷ್ಟು ಹಣ ಬಂದಿದೆ, ಖರ್ಚು ಮಾಡಿರತಕ್ಕಂಥಾದ್ದು ಎಷ್ಟು ಎಂಬುದಾಗಿ ರಿವ್ಯೂ ಮಾಡಬೇಕು. ಆದರೆ ಯಾವ ಜಿಲ್ಲಾ ಮಂತ್ರಿಗಳೂ ಈ ಕೆಲಸ ಮಾಡಿಲ್ಲ ಎಂದು ಹೇಳಬೇಕಾಗುತ್ತದೆ. ಹೀಗೆ ರಿವ್ಯೂ ಮಾಡದೇ ಇದ್ದರೆ ಯಾವುದೇ ಕೆಲಸಕ್ಕಾಗಿ ಆಗಲಿ ಹಣಬಂದಿರುವುದು ಹೇಗೆ ಗೊತ್ತಾಗಬೇಕು? ಯಾವುದೇ ಅಧಿಕಾರಿಯೂ ಈ ಬಗ್ಗೆ ಕೆಲಸ ನಿರ್ವಹಿಸದೇ ಇದ್ದುದು ಹೇಗೆ ಗೊತ್ತಾಗಬೇಕು? ನಿಗದಿತ ಕೆಲಸಕ್ಕೆ ಎಲ್ಲಿಯೂ ಹಣ ಬಿಡುಗಡೆ ಆಗಿಲ್ಲ. ಈ ಕೆಲಸಗಳ ಬಗ್ಗೆ ಸಹ ತಿಳಿದುಕೊಳ್ಳುವಲ್ಲಿ ಜಿಲ್ಲಾ ಮಂತ್ರಿಗಳೂ ಕೂಡ ಆಸಕ್ತಿ ವಹಿಸಬೇಕು.

ಈ ಕೆಲಸ ಲ್ಯಾಂಡ್ ಅಕ್ವಿಸಿಶನ್‌ಗೋಸ್ಕರ ನಿಂತಿದೆಯೆ? ಅದಕ್ಕೆ ಹಣ ಬಿಡುಗಡೆ ಆಗಿಲ್ಲವೇ? ಅಥವಾ ಎಸ್ಟಿಮೇಟ್ ಆಗಿಲ್ಲವೇ? ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಎಷ್ಟರ ಮಟ್ಟಿಗೆ ಹಣವನ್ನು ಖರ್ಚು ಮಾಡಿದ್ದೀರಿ ಮುಂತಾಗಿ ಹೇಳಬೇಕು. ಹೀಗೆ ಒಂದಲ್ಲ ಹಲವಾರು ಲ್ಯಾಪ್ಸ್‌ಗಳನ್ನು ಮಾಡಿದ್ದಾರೆ. ಅದಕ್ಕೆ ನಾನು ಕೇಳಿಕೊಳ್ಳುತ್ತಾ ಇರುವುದು ಏನೆಂದರೆ ಈ ಕುರಿತು ಸಮಗ್ರವಾದ ಒಂದು ವಿಚಾರಣೆ ನಡೆಯಬೇಕು. ಅಂದರೆ ಕನಿಷ್ಟಪಕ್ಷ ಈ ಬಗ್ಗೆ ಒಂದು ಸಮಿತಿಯನ್ನು ಮಾಡಿ. ಅದರಲ್ಲಿ ನಮಗೆ ಬೇಕಾದವರನ್ನು ಹಾಕಿ, ಆ ಸಮಿತಿಯು ಒಂದು ರಿಪೋರ್ಟ್ ಅನ್ನು ಕೊಡಲಿ. ಇಂತಿಂತಹ ಆಟಗಳಿಗೆ ಪ್ರೋತ್ಸಾಹ ಕೊಡಬೇಕು. ಇಂತಿಂಥವುಗಳಿಗೆ ಎಲ್ಲೆಲ್ಲಿ ಪ್ರೆಯಾರಿಟಿ

ಕೊಡಬೇಕು ಎಂಬ ಬಗ್ಗೆ ಒಂದು ನಿರ್ಧಾರಕ್ಕೆ ಅವರು ಬರಲಿ. ಉದಾಹರಣೆಗೆ ಮಾನ್ಯ ಭೂಪತಿಯವರು ಹೇಳಿದಂತೆ ಬಿಜಾಪುರದ ಯುವಕರು ಸೈಕಲಿಂಗ್‌ನಲ್ಲಿ ಎಕ್ಸ್‌ಪರ್ಟ್ ಇರುವಷ್ಟು ಬೇರೆ ರಾಜ್ಯಗಳಲ್ಲಿ ಕೂಡ ಇಲ್ಲ ಎಂದು ಹೇಳಿದರು. ಆದರೆ ಅವರಿಗೆ ಸೂಕ್ತ ಪ್ರೋತ್ಸಾಹ ಇಲ್ಲ. ಹೀಗೆ ಸಮಿತಿಯನ್ನು ಮಾಡಿ ಯಾವ ಯಾವ ಕಡೆಗಳಲ್ಲಿ ಯಾವುದೇ ಆಟಗಳಲ್ಲಿ ಪ್ರವೀಣರಾದವರು ಯಾರು ಇದ್ದಾರೆ ಎಂದು ಗುರುತು ಹಚ್ಚುವ ಕಾರ್ಯ ಆಗಬೇಕಾಗಿದೆ. ಆದ್ದರಿಂದ ಒಂದು ಸಮಿತಿಯನ್ನು ನೇಮಕ ಮಾಡಿದರೆ ಅದರ ಮೂಲಕ ಇದನ್ನೆಲ್ಲಾ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕಾಗಿ ಕನಿಷ್ಟ ಪಕ್ಷ ಒಂದು ಸಮಿತಿಯನ್ನು ರಚನೆ ಮಾಡಬೇಕೆಂದು ತಮ್ಮ ಮೂಲಕ ಸರಕಾರವನ್ನು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ೨೦೦ ಸ್ಪೋರ್ಟ್ಸ್ ಸೆಂಟರ್ಸ್‌ಗಳಿವೆ. ನಮ್ಮಲ್ಲಿ ೨೬,೦೦೦ ಹಳ್ಳಿಗಳಿವೆ. ಕನಿಷ್ಟಪಕ್ಷ ೨೬ ಸಾವಿರ ಹಳ್ಳಿಗಳಲ್ಲಿ ಒಂದೊಂದು ಸೆಂಟರ್ ಮಾಡುವುದಕ್ಕೆ ಆಗುವುದಿಲ್ಲ. ಸಧ್ಯಕ್ಕೆ ಯಾವ ಸರಕಾರಕ್ಕೂ ಕೂಡ ಈ ರೀತಿ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಕನಿಷ್ಠ ಪಕ್ಷ ಮಂಡಲ ಪಂಚಾಯಿತಿಗೆ ಒಂದರಂತೆ ಮಾಡಬೇಕು, ಅಲ್ಲಿ ಸೆಂಟರ್ ಮಾಡುವ ಮೂಲಕ ಹಳ್ಳಿಯ ಮಕ್ಕಳಿಗೆ ಸ್ಪೋರ್ಟ್ಸ್‌ಗಳಿಗೆ ಸಣ್ಣ ಪುಟ್ಟ ಆಟಗಳಿಗೆ ಸಹಾಯ ಮಾಡತಕ್ಕಂಥಾದ್ದು ಮತ್ತು ಇದಕ್ಕೆ ಹಣವನ್ನು ಬಿಡುಗಡೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಅವರು ಈ ಖಾತೆಗೆ ಹೊಸದಾಗಿ ಮಂತ್ರಿಗಳಾಗಿದ್ದಾರೆ ಈ ಕಡೆಗೆ ಹೆಚ್ಚು ಗಮನ ಕೊಟ್ಟು ಕೆಲಸ ಮಾಡಬೇಕಾಗುತ್ತದೆ. ನಾವು ಅವರಿಂದ ಇದನ್ನು ನಿರೀಕ್ಷಣೆ ಮಾಡಬೇಕಾಗಿದೆ. ಹೋದ ಸಲ ಏನು ಆಗಿಲ್ಲವೆಂದು ಅವರ ವರದಿಯಿಂದಲೇ ಹೇಳಬಹುದು ಇನ್ನು ಮುಂದಾದರೂ ಕೂಡ ಇದರ ಬಗ್ಗೆ ಹೆಚ್ಚು ಗಮನ ಕೊಡುತ್ತಾರೆಂದು ಭಾವಿಸಿದ್ದೇನೆ. ಇನ್ನು ಮೈನ್ಸ್ ಅಂಡ್ ಜಿಯಾಲಜಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಅದರಲ್ಲಿ ಹೇಳಬೇಕಾದಂಥಾದ್ದು ಬಹಳ ಇದೆ. ಇದು ಬಹಳ ನೆಗ್ಲೆಕ್ಟ್ ಮಾಡಿದಂತಹ ಇಲಾಖೆಯಾಗಿದೆ. ಇದನ್ನು ಕೈಗಾರಿಕೆಗಳ ಇಲಾಖೆಗೆ ಸೇರಿಸಿದ್ದಾರೆ. ಆದುದರಿಂದಾಗಿ ಈ ಕಡೆ ಯಾರದ್ದೂ ಹೆಚ್ಚು ಗಮನವಿಲ್ಲ, ಇದನ್ನು ಕೇಳುವವರು ಹೇಳುವವರು ಯಾರೂ ಇಲ್ಲ. ಈ ಕಡೆಗೆ ಲಕ್ಷ್ಯ ಕೊಡತಕ್ಕಂಥಾದ್ದು ಬಹಳ ಅವಶ್ಯಕ, ಈ ಇಲಾಖೆಯಲ್ಲಿ ಕೆಲವು ಕಾರಣಗಳಿಂದ ಇದರ ಕೆಲವು ಆರ್ಡರ್‌ಗಳಿಂದ ಕನಕಪುರದಲ್ಲಿ ಚಳುವಳಿ ಆಗಿದೆ. ಚಾಮರಾಜ ನಗರದಲ್ಲಿ ಚಳುವಳಿ ಆಗಿದೆ. ಇನ್ನೂ ಅನೇಕ ಕಡೆ ಆಗಿದೆ. ಕೆಲವರು ನಿಸರ್ಗ ಸಂಪತ್ತನ್ನು ಲೂಟಿ ಮಾಡುತ್ತಿದ್ದಾರೆ ಅನ್ನತಕ್ಕಂತಹ ಒಂದು ಅಪವಾದ ಬಂದಿದ್ದು ಅದಕ್ಕೆ ಪ್ರೋತ್ಸಾಹ ಕೊಡತಕ್ಕಂತಹ ಅಧಿಕಾರಿಗಳು ಈ ಇಲಾಖೆಯಲ್ಲಿದ್ದಾರೆ ಅನ್ನತಕ್ಕಂಥಾದ್ದನ್ನು ನೀವೂ ಪೇಪರಿನಲ್ಲಿ ಓದಿರಬಹುದು. ಅದರ ಬಗ್ಗೆ ದೊಡ್ಡ ಚಳುವಳಿ ಆಯಿತು, ರೈತ ಸಂಘದವರು ಕನಕಪುರದಲ್ಲಿ ವೆಹಿಕಲ್ಸ್ ಅನ್ನು ಸ್ಟಾಪ್ ಮಾಡಿದರು. ಆದ್ದರಿಂದ ಇದರ ವಿಷಯವನ್ನು ತಿಳಿಯತಕ್ಕಂಥಾದ್ದು ಕೂಡ ಬಹಳ ಅವಶ್ಯಕ. ಸುಮ್ಮನೆ ಏನೋ ಚಳುವಳಿ ನಡೆಯಿತು, ಅದನ್ನೆಲ್ಲಾ ನಾವು ಸರಿ ಮಾಡಿದ್ದೇವೆಂದು ನೀವು ಹೇಳಿಬಿಟ್ಟರೆ ಖಂಡಿತವಾಗಿ ಈ ಇಲಾಖೆಯಿಂದ ಜನತೆಗೆ ಅನುಕೂಲವಾಗುವುದಿಲ್ಲವೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ, ಗುಲ್ಬರ್ಗ ರಾಯಚೂರು, ಬಳ್ಳಾರಿ, ಜಿಲ್ಲೆಗಳಲ್ಲಿ ಹೆಚ್ಚಿನ ಗಣಿಗಳಿವೆ. ಎಲ್ಲಿ ಹೆಚ್ಚಿನ ಗಣಿಗಳು ಇರುತ್ತವೆ ಅಲ್ಲಿ ಖನಿಜ ಸಂಪತ್ತು ಇದ್ದು ಹೆಚ್ಚಿನ ಆದಾಯ ಬರುತ್ತದೆ. ಕೆಲವು ಕಡೆ ಹೆಚ್ಚು ಲೈಮ್ ಸ್ಟೋನ್ಸ್ ಇದೆ, ಕೆಲವು ವೆಸ್ಟೆಡ್ ಇಂಟ್ರೆಸ್ಟ್‌ಗಳು ಯಾರು ಇದ್ದಾರೆ, ಅವರು ಸಿಂಡಿಕೇಟ್ ಮಾಡಿಕೊಂಡು ೫ ಕಿಲೋ. ಮೀಟರ್ ಒಳಗಡೆ ಯಾರಿಗೂ ಲೈಸನ್ಸ್ ಕೊಡಬಾರದೆಂದು ಮೊದಲು ಮಾಡಿದರು. ೫ ಕಿಲೋ ಮೀಟರ್ ದೂರದಲ್ಲಿ ಗಣಿಯಲ್ಲಿರುವ ಸಂಪತನ್ನು ತೆಗೆದರೂ ಮುಂದಿನ ೫ ಕಿಲೋ ಮೀಟರ್‌ವರೆಗೆ ಬೇರೆ ಯಾರೂ ತೆಗೆಯುವ ಹಾಗೆ ಇಲ್ಲ, ಆ ರೀತಿ ಮಾಡಿದರು. ಮೈನ್ಸ್ ಏರಿಯಾ ಎಲ್ಲೆಲ್ಲಿ ಇದೆ ಅಲ್ಲೆಲ್ಲಾ ಬೇರೆಯವರಿಗೆ ಸಿಗದ ಹಾಗೆ ಮಾಡುತ್ತಿದ್ದರು. ಇದರಿಂದ ಬಡವರಿಗೆ ತೊಂದರೆಯಾಗುತ್ತದೆ ಏದು ಇದನ್ನು ರಿಮೂವ್ ಮಾಡಿದರೆ ಬಡವರಿಗೆ ಅನುಕೂಲವಾಗುತ್ತದೆ. ಕೆಲವರು ಸಿಂಡಿಕೇಟ್ ಮಾಡಿಕೊಂಡು ಶ್ರೀಮಂತರು ಬಡವರ ಶೋಷಣೆ ಮಾಡುತ್ತಿದ್ದಾರೆ ಎಂದು ಹೇಳಿದ್ದಕ್ಕೆ ತದ ನಂತರ ೨ ಕಿಲೋ ಮೀಟರ್‌ವರೆಗೆ ಎಂದು ಮಾಡಿದರು ಇದರಿಂದ ಕೂಡ ಬಹಳ ಅನ್ಯಾಯವಾಗುತ್ತದೆಂದು ಹೇಳಿದ್ದಕ್ಕೆ ಈ ಕಿಲೋ ಮೀಟರ್ ಲೆಕ್ಕವನ್ನೇ ಫಿಕ್ಸ್ ಮಾಡಬೇಡಿ, ಯಾರ್ಯಾರಿಗೆ ಎಲ್ಲೆಲ್ಲಿ ಅನುಕೂಲವಾಗುತ್ತದೆಯೋ ಅಲ್ಲಿ ತೆಗೆದುಕೊಳ್ಳಲಿ ಲೈಸನ್ಸ್ ಫೀಸ್ ಎಷ್ಟು ಇದೆ ಅದನ್ನು ಅವರು ಕೊಡುತ್ತಾರೆಂದು ಹೇಳಿದ ಮೇಲೆ ಅದನ್ನು ತೆಗೆದಿದ್ದಾರೆ. ೧೦೦-೨೦೦ ಗಣಿಗಳು ಎಲ್ಲಿ ಇವೆ ಅಂತಹ ಮೈನ್ಸ್‌ಗಳಲ್ಲಿ ರಸ್ತೆಗಳು ಇಲ್ಲ. ಈ ರಸ್ತೆಗಳನ್ನು ಮಾಡುವುದಕ್ಕೆ ಕೇಂದ್ರ ಸರಕಾರದವರು ಹಣ ಕೊಡುತ್ತಾರೆ, ಅವರಿಂದ ಬರತಕ್ಕಂತಹ ಹಣವನ್ನು ತೆಗೆದುಕೊಂಡು ರಸ್ತೆ ಮಾಡತಕ್ಕಂತಹ ಕೆಲಸ ಮಾಡಬೇಕು. ಇನ್ನು ಮೈನ್ಸ್‌ಗಳಲ್ಲಿ

ಕೆಲಸ ಮಾಡತಕ್ಕಂತಹ ಕಾರ್ಮಿಕರಿಗೆ ಕ್ವಾರ್ಟರ್ಸ್‌ಗಳೂ ಇಲ್ಲ, ಮಿನಿಮಮ್ ವೇಜಸ್ ಇಲ್ಲ, ಈ ರೀತಿಯಾದರೆ ಇದು ಯಾವ ರೀತಿಯ ನ್ಯಾಯವೆಂಬುದನ್ನು ತಾವು ಯೋಚನೆ ಮಾಡಬೇಕು.

೪-೩೦ ಪಿ. ಎಂ,

ಕಾರ್ಮಿಕರನ್ನು ಎಕ್ಸ್‌ಪ್ಲಾಯಿಟ್ ಮಾಡುವುದು, ಬರತಕ್ಕಂಥ ರೆವಿನ್ಯೂವನ್ನು ತೆಗೆದುಕೊಳ್ಳುವುದು ಆದರೆ ಆ ಏರಿಯಾದಲ್ಲಿ ಇರತಕ್ಕಂಥ ಜನರಿಗೆ ಕಮ್ಯೂನಿಕೇಷನ್ ಆಗಲೀ, ರಸ್ತೆಗಳಾಗಲೀ ಯಾವುದನ್ನೂ ಕೂಡಾ ಮಾಡಿ ಕೊಡುವುದಿಲ್ಲ ಎಂದು ಹೇಳಿದರೆ ಬಹಳ ದೊಡ್ಡ ಅನ್ಯಾಯವಾಗುತ್ತದೆ. ಕನಿಷ್ಟಪಕ್ಷ ಮೈನ್ಸ್ ಏರಿಯಾ ಏನು ಇದೆ ಅಲ್ಲಿರತಕ್ಕಂಥ ಅದು ಕೊಳ್ಳೇಗಾಲ, ಚಾಮರಾಜನಗರ ಕನಕಪುರ ಬಿಜಾಪುರ ಇರಬಹುದು. ಗುಲ್ಬರ್ಗ ಇರಬಹುದು, ವಾಡಿ ಇರಬಹುದು, ಶಹಬಾದ್ ಚಿತಾಪುರ, ಇರಬಹುದು, ಇವುಗಳಲ್ಲಿ ಕೆಲವುಗಳಿಗಾದರೂ ಮುಖ್ಯ ರಸ್ತೆಗಳ ಕೆಲಸವನ್ನು ತೆಗೆದು ಕೊಳ್ಳಬೇಕು. ಜನರಿಗೆ ಸಹಾಯ ಮಾಡಬೇಕು ಏಕೆಂದರೆ ಬಡ ರೈತರಿಂದ ಮೂರು ನಾಲ್ಕು ಸಾವಿರ ರೂಪಾಯಿಗಳಿಗೆ ಈ ರೀತಿ ಜಮೀನನ್ನು ಪಡೆದುಕೊಂಡು ಶ್ರೀಮಂತರಿಗೆ ಹೆಚ್ಚಿಗೆ ಕೊಡುತಾರೆಂದು ಹಾಗೂ ನಾಲ್ಕೈದು ಸಾವಿರ ರೂಪಾಯಿಗಳಿಗ ಜಮೀನನ್ನು ಮಾರಿಕೊಂಡು ಇವತ್ತಿನ ದಿವಸ ಈ ಬಡವರು ಇದ್ದದ್ದನ್ನು ಮಾರಿಕೊಂಡು ಪಾಪರ್ ಆಗಿ ಬಿಟ್ಟಿದ್ದಾರೆ. ಅವರು ಹಳ್ಳಿಗಾಡುಗಳಿಂದ ಬರಬೇಕಾದರೆ ಅವರಿಗೆ ಸರಿಯಾದ ರಸ್ತೆ ಇಲ್ಲ. ಇಂಥದ್ದಕ್ಕೆ ದಯವಿಟ್ಟು ಗಮನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ನಿಮಗೆ ಇದರಿಂದ ಬರತಕ್ಕಂಥ ಆದಾಯ ಎಷ್ಟು ಎಂದರೆ ೮೬ ರಲ್ಲಿ ೬ ಕೋಟಿ ೭೭ ಲಕ್ಷ ಎಂದು ತೋರಿಸಿದ್ದೀರಿ. ೮೭ರಲ್ಲಿ ೬ ಕೋಟಿ ೨೭ ಲಕ್ಷ ಮಾತ್ರ, ಅಂದರೆ ಕೇವಲ ೨೭ ಲಕ್ಷ ಮಾತ್ರ ಎನ್‌ಹ್ಯಾನ್ಸ್ ಆಗಿದೆ, ಇದರಿಂದ ಏನು ತೋರಿಸುತ್ತದೆ ಎಂದರೆ ಸರ್ಕಾರದವರು ಸರಿಯಾಗಿ ಡ್ರೈವ್ ಮಾಡುತ್ತಿಲ್ಲ, ಸರಿಯಾದ ರೀತಿಯಲ್ಲಿ ಇನ್‌ಸ್ಟ್ರಕ್ಷನ್ ಕೊಡುತ್ತಿಲ್ಲ ಎಂದು ಇದರಿಂದಲೇ ತೋರಿಸುತ್ತಿದೆ, ಅದಕ್ಕೆ ಇವತ್ತು ಅನೇಕ ಜನಗಳು ಅನ್-ಆಥರೈಸ್ಡ್ ಕ್ವೈರೀಸ್ ಗಳನ್ನು ಮಾಡುತ್ತಿದ್ದಾರೆ, ಒಂದೊಂದು ಲೈಸೆನ್ಸ್ ಇಟ್ಟುಕೊಂಡು ಹತ್ತು ಕ್ವೈರಿಗಳನ್ನು ತೆಗೆಯುವುದು ಎಲ್ಲಿ ಟ್ಯಾಕ್ಸ್ ಕೊಡಬೇಕಾಗುತ್ತದೆ. ಅಲ್ಲಿ ಹೋಗಿ ಇನ್ಸ್‌ಪೆಕ್ಟರೋ ಅಥವಾ ಜಿಯಾಲಜಿಸ್ಟೋ ಹೋಗಿ ಏನೋ ಬರೆದುಕೊಂಡು ಬರುತ್ತಾನೆ, ಆಗ ಮುಗಿದು ಹೋಗುತ್ತದೆ. ನನ್ನ ಜಿಲ್ಲೆಯಲ್ಲಿ ಸುಮಾರು ನೂರಾರು ಕ್ವೆರೀಸ್ ಅನ್-ಆಥರೈಸ್ಡ್ without licence ನಡೆಸುತ್ತಿದ್ದಾರೆ ಇಲ್ಲಿ ಒಂದೇ ಲೈಸೆನ್ಸ್‌ನ್ನು ತೆಗೆದುಕೊಳ್ಳುವುದು ಇನ್ನೊಂದು ಎಸ್ಕವೇಟ್ ಮಾಡುತ್ತಾರೆ. ಅಲ್ಲಿ ಮತ್ತೆ ರಾಯಲ್ಟಿ ಕೊಡುವುದಿಲ್ಲ, ರೆಂಟೂ ಕೊಡುವುದಿಲ್ಲ. ಇಂಥ ಒಂದು ಪರಿಸ್ಥಿತಿ ಇದೆ. ಇದರ ಬಗ್ಗೆ ಸರಿಯಾದ ಎನ್‌ಕ್ವೈರಿ ಮಾಡಿಸಬೇಕು ಎಂದು ನಾನುಡಿಮ್ಯಾಂಡ್ ಮಾಡುತ್ತೇನೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಕೆಲವು ಮಾತನ್ನು ಇದರ ಬಗ್ಗ ಹೇಳಿದ್ದಾರೆ. ಈಗ ರೆಂಟ್ ಕಲೆಕ್ಟ್ ಮಾಡುವುದರಲ್ಲಿ ಸರ್ಕಾರದ ಅಧಿಕಾರಿಗಳು ಎಷ್ಟು ವಿಫಲರಾಗಿದ್ದಾರೆಂಬ ಬಗ್ಗೆ ಮಾನ್ಯ ವೀರಪ್ಪ ಮೊಯಿಲಿಯ ವರು ಬಹಳ ಹೇಳಿದ್ದಾರೆ. ಆದರೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನತಕ್ಕಂಥದ್ದು ಬಹಳ ಮುಖ್ಯ. ಇದು ಕಣ್ಣು ಮುಚ್ಚಿ ಕುಳಿತರೆ ಹಾಗೆಯೇ ಹೋಗಿ ಬಿಡುತ್ತದೆ. ಕೇಳುವವರೇ ಇಲ್ಲ. ಇದನ್ನು ಕೇಳಲಿಲ್ಲ ಎಂದು ಹೇಳಿದರೆ ಹಾಗೆಯೇ ನಡೆದುಕೊಂಡು ಹೋಗುತ್ತದೆ. ಈ ವರದಿಯಲ್ಲಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಡಿಪಾರ್ಟ್‌ಮೆಂಟ್‌ನವರು ಇದರ ಬಗ್ಗ ಏನು ಕ್ರಮವನ್ನು ತೆಗೆದು ಕೊಂಡಿದ್ದಾರೆ ? ಮೂರನೇ ಏಪ್ರಿಲ್ ೮೬ರಲ್ಲಿ ಒಂಭತ್ತನೇ ರಿಪೋರ್ಟನ್ನು ಏನು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಪ್ರೆಸೆಂಟ್ ಮಾಡಿದ್ದಾರೆ, ಆ ರೀತಿ ಪ್ರೆಸೆಂಟ್ ಮಾಡಿದಂಥ ರಿಪೋರ್ಟ್ ಮೇಲೆ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ನಿಮ್ಮ ಉತ್ತರದಲ್ಲಿ ಹೇಳಬೇಕು ಇದು ತಮಗೆ ಗೊತ್ತಿರುವ ಹಾಗೆ ಅಕೌಂಟೆಂಟ್ ಜನರಲ್‌ರವರು ಪಾಯಿಂಟ್ ಔಟ್ ಮಾಡಿದ್ದರ ಆಧಾರದ ಮೇಲೆ based on that report only Public Accounts Committee ಅವರು ರೆಕಮೆಂಡೇಷನ್ ಮಾಡುತ್ತಾರೆ. ಅವರು ಮಾಡುವಂಥ ರೆಕಮೆಂಡೇಷನ್ ಮೇಲೆ ಸರ್ಕಾರದವರ ಕ್ರಮವೇನು ? ಅವರು ಏನು ಹೇಳಿದ್ದಾರೆಂದರೆ.

" The Committee are amazed at the way in which this matter has been dealt with by the Department. "

" When the matter came before the Committee in November 1985, the Governement spokesman explained that surface rent and cess are chargeable on the actual area occupied for mining purposes "

ಹಟ್ಟಿಗೋಲ್ಡ್ ಮೈನ್ಸ್ ಕಂಪನಿ ಅದು ಕೂಡಾ ಸರ್ಕಾರಿ ಕಂಪನಿಯೇ ಅದನ್ನು ಆಕ್ಯುಪೈ ಮಾಡಿದ್ದವರಿಂದ ದುಡ್ಡನ್ನು ಕಲೆಕ್ಟ್ ಮಾಡಿಲ್ಲ. ಸಣ್ಣ ಅಮೌಂಟ್ ಎಂದು ಕಲೆಕ್ಟ್ ಮಾಡಿಲ್ಲ ಕಲೆಕ್ಟ್ ಮಾಡಬೇಕು ಎಂದು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ರೆಕಮೆಂಡ್ ಮಾಡಿದರೂ ಕೂಡಾ ಇಲ್ಲಿಯ ವರೆಗೂ ಸುಮ್ಮನೆ ಕುಳಿತ್ತಿದ್ದಾರೆ. ಅದಕ್ಕೆ ಅವರು ಹೇಳಿದ್ದಾರೆ.

" The working plan which is required to assess the sur face rent due to government was called for from the company only in 1983 obvionsly after the lapse was brought to light by Audit in January, 1983 Though the required information was received in June 1984 the revised demands are yet to be issued in Nov, 1985 "

ಅಂದರೆ ನೋಟೀಸ್ ೧೯೮೩ಕ್ಕೆ ಬಂದವರೂ ಕೂಡಾ ಅದನ್ನು ಅವರು ಅದರ ಬಗ್ಗೆ ಇನ್‌ಫರ್ಮೇಷನ್ ಜೂನ್‌ನಲ್ಲಿ ತೆಗೆದುಕೊಂಡಿದ್ದಾರೆ. ಆ ಮೇಲೆ ಡಿಮ್ಯಾಂಡ್ ನೋಟೀಸ್ ಅನ್ನು ನವೆಂಬರ್ ೮೫ರಲ್ಲಿ ಇಶ್ಯೂ ಮಾಡಿದ್ದಾರೆ. ಅದರಲ್ಲಿ

" When the Committee discussed this matter. Though the amount involved is small such lethargy on the part of the department should not be allowed to continue. The Committee desire that the officers responsible for the delay should be pulled up. They also desire that a report of action taken should be given to them within three months "

ಅಂತ ಇದೆ. ರಿಪೋರ್ಟ್ ಕೊಟ್ಟ ಮೇಲೆ ಮೂರು ತಿಂಗಳಲ್ಲಿ ರಿಪ್ಲೈ ಬಂತೋ ಇಲ್ಲವೋ ಹೇಗೆ ? ಬಂದ ಮೇಲೆ ಆ ಅಧಿಕಾರಿಗಳ ಮೇಲೆ ತಾವು ಏನು ಆಕ್ಷನ್ ತೆಗೆದುಕೊಂಡಿದ್ದೀರಿ ಎಂಬುದನ್ನು ಈ ಸದನಕ್ಕೆ ತಿಳಿಸಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ. ಮುಂದೆ ಹೇಳುತ್ತಾರೆ.

" Audit has pointed out that both the Hutti Gold Mines Company limited and the Bharat Gold Mining Company Limited bad not paid the cess under the Mines and Mine rals (Regulation and Development) Act 1957. Rs. 38.672 due from these companies upto 1981, "

ಎಂದು ಅಂದರೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ತಮ್ಮ ನೋಟೀಸಿಗೆ ತಂದರೂ ಕೂಡ ಇಲ್ಲಿಯುವರೆಗೆ ಸಂಬಂಧಪಟ್ಟ ಅಧಿಕಾರಿಗಳು ಅದನ್ನು ಆಕ್ಟ್ ಮಾಡದೇ ಹೋದರೆ, ಅಮೌಂಟ್ ಎಷ್ಟೋ ಇರಬಹುದು, ಸಾವಿರ ಇರಬಹುದು, ಲಕ್ಷ ಇರಬಹುದು, ಕೋಟಿ ಇರಬಹುದು, ಆದರೆ ಆಸಕ್ತಿ ವಹಿಸಿ ನಿಮ್ಮ ಅಧಿಕಾರಿಗಳು ಕೆಲಸ ಮಾಡದೇ ಹೋದರೆ, ಅವರು ಕೆಲಸ ಮಾಡದೇ ಹೋದಾಗ ನೀವು ಅವರಿಗೆ ಫಾಲೋ ಅಪ್ ಮಾಡದೇ ಹೋದರೆ ಯಾವ ರೀತಿ ಡಿಪಾರ್ಟ್‌ಮೆಂಟ್ ಸರಳವಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಮತ್ತೆ ಇನ್ನು ಒಂದು ಇಂಟರೆಸ್ಟಿಂಗ್ ವಿಷಯ ಏನು ಅಂದರೆ ಗುಲ್ಬರ್ಗಾದಲ್ಲಿ ಕೆಲವು

ಲೈಸೆನ್ಸ್‌ಗಳನ್ನು ನೈಜಾಮ್ ಕಾಲದಲ್ಲಿ ಕೊಟ್ಟಿದ್ದಾರೆ. ಈಗ ಲೀಸ್ ೧೯೭೭ರಲ್ಲಿಯೇ ಎಕ್ಸ್‌ಪೈರ್ ಆಯಿತು. ಪುನಃ ಸರ್ಕಾರದವರು ಅದನ್ನು ೨೦ ವರ್ಷಕ್ಕೋಸ್ಕರ ರಿನ್ಯೂ ಮಾಡಿದರು. ಆದರೆ ಲೀಸ್ ಅನ್ನು ರಿನ್ಯೂ ಮಾಡುವಾಗ ಅಕೌಂಟೆಂಟ್ ಜನರಲ್‌ರವರು ಪಾಯಿಂಟ್ ಔಟ್ ಮಾಡಿದರು. ಯಾವ ಅಭಿಪ್ರಾಯದಿಂದ ಲೀಸ್ ಅನ್ನು ರಿನ್ಯೂ ಮಾಡಿದ್ದಾರೆ ಅದು ಸರಿಯಿಲ್ಲವೆಂದು, ಅದನ್ನು ಪುನಃ

ಪರಿಶೀಲಿಸಬೇಕು ಎಂದು ಅಕೌಂಟೆಂಟ್ ಜನರಲ್ ರವರು ಹೇಳಿದ ಮೇಲೆ, ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಈ ರಿಪೋರ್ಟ್ ಅನ್ನು ೧೯೮೧ರಲ್ಲಿ ಕೊಟ್ಟರು. ನಾನು ಹೇಳತಕ್ಕ ತಾತ್ಪರ್ಯ ಇಷ್ಟೇ. ಈ ರಿಪೋರ್ಟ್ ಬಂದ ಮೇಲೆ ಇದು ಅನ್ಯಾಯ ಆಗಿದೆ, ಲಾ ಡಿಪಾರ್ಟ್‌ಮೆಂಟ್ ಇದನ್ನು ಎಕ್ಸಾಮಿನ್ ಮಾಡಬೇಕು, ಇದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ಬರುವುದು ಹೋಗುತ್ತದೆ ಎಂದು ಹೇಳಿದ ಮೇಲೂ ಏನೂ ಆಕ್ಷನ್ ಅನ್ನು ಡಿಪಾರ್ಟ್‌ಮೆಂಟ್‌ನವರು ತೆಗೆದುಕೊಂಡಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ತಮ್ಮ ರೆಕಮೆಂಡೇಷನ್‌ನಲ್ಲಿ ಏನು ಹೇಳುತ್ತಾರೆ ಅಂದರೆ.—

"As regards dead rent, the Secretary informed the Committee that the Government of Karnataka in their notification CI 194 MN 83 dated 11th August 1983, revised the dead rent payable on lease blocks quarrying Shahabad Stones granted under the KMMC Rules, 1969. The dead rent payable on lease blocks quarrying stone was revised to Rs. 5000 per acre per annum from Rs. 500 per acre per annum. 290 quarrying lease holders challenged the validity of the notification. The High Court of Karnataka admitted the writ-petition and issued interim stay for the operation of the Government Notification. They also provided interim relief to the petitioners. The matter was under consideration of the Government."

"The Committee are surprised that the lease agreement sanctioned by the former Government of Hyderbad in 1952 and which lapsed in 1972 were renewed by the Government of Karnataka for a further period of 20 years on the same terms without proper examination by reference to subsequent enactments and statutory rules, viz., the Mines and Minerals (Regulation and Development) Act 1957 and the Karnataka Minor Minerals concession Rules 1979. Opinion of the Controller of Mining Leases was obtained after audit commented on the renewal of the agreement in 1976. He opined that the agreements were void and without effect: but even now this matter is stated to be under examination in consultation with the Law Department. There has been unpardonable delay in deciding this matter which the Committee consider is due to sheer apathy on the part of officers, if not due to conniviance to favour private parties. It is strange that the views given by the Law Dept. were found to be not relevant to the subject and their advice had to be sought again. The Committee desire that this matter should be probed and all the officers responsible for the delay, both at Government level (including Law Dept.) and in the Department of Mines and Geology should be identified and disciplinary action taken against them."

ಈ ರೀತಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಹೇಳಿದ ಮೇಲೆ ನೀವು ಏನು ಕ್ರಮ ತೆಗೆದು ಕೊಂಡಿದ್ದೀರೆಂಬುದನ್ನು ನಮಗೆ ತಿಳಿಸಬೇಕು. ಇದು ೮–೧೦ ವರ್ಷಗಳಿಂದ ನಡೆದಿದೆ. ೧೯೮೬ರಲ್ಲಿ ಇದನ್ನು ಪಿ.ಎ.ಸಿ. ನವರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಕಳೆದ ಎರಡು ವರ್ಷಗಳಿಂದಲಾದರೂ ತಾವು ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಆದರೆ ಇಲ್ಲಿಯವರೆಗೆ ತಾವು ಯಾವುದೇ ಕ್ರಮ ತೆಗೆದು ಕೊಂಡಿಲ್ಲ. ಅವರು ಮುಂದೆ ಏನು ಹೇಳಿದ್ದಾರೆಂದರೆ.—

> "The Committee recommed that the unjustified concessions allowed to the lessees should be withdrawn in public interest. If there are legal impediments, Government may consider terminating the leases by suitably amending the statutory provisions as was done in the case of leases relating to forest produce. The mining companies should be made to pay proper price for the mining leases, in keeping with the general rise in the price levels."

ಎಂದು, ಇದರ ಬಗ್ಗೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ? ಇದನ್ನು ತಾವು ಹೇಳಬೇಕು ? ಮತ್ತೆ ರೆವಿನ್ಯೂ ಲೀಕೇಜಸ್ ಬಗ್ಗೆ ಅವರು ಏನು ಶಿಫಾರಸ್ ಮಾಡಿದ್ದಾರೆಂಬುದನ್ನು ಸಹ ಓದಿ ಹೇಳುತ್ತೇನೆ.—

> "In order to prevent leakages of revenue on this account the Committee recommend that the quantities of lime stone and limestone waste supplied by the mining companies to cement factories be varified with reference to the records of the cement factories. The source from which raw material is obtained by the cement factories should be checked and linked with the quantities mined by the mining lessees.
>
> Royalty on limestone used by the factories may be recovered through the cement factories so that there may be no scope for short recovery."

ಎಂದು ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಈ ೯ನೇ ವರದಿಯನ್ನು ಪಿ.ಎ.ಸಿನವರು ೧೯೮೭ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಕೊಟ್ಟಿದ್ದಾರೆ. ಅವರು ಇದರಲ್ಲಿ ಮಾಡಿರುವಂತಹ ಶಿಫಾರಸ್‌ಗಳ ಆಧಾರದ ಮೇಲೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ? ಎಷ್ಟರಮಟ್ಟಿಗೆ ರಿಕವರಿ ಮಾಡಿದ್ದೀರಿ ? ಅವರು ಈ ಬಗ್ಗೆ ಸ್ಟ್ಯಾಚ್ಯೂಟರಿ ಅಮೆಂಡ್‌ಮೆಂಟ್ ಮಾಡುವುದಕ್ಕೆ ಹೇಳಿದ್ದಾರೆ. ಆದರ ಪ್ರಕಾರ ನೀವು ಕಾನೂನನ್ನು ತಿದ್ದುಪಡಿ ಮಾಡಿದ್ದೀರೋ ಹೇಗೆ ಎಂಬುದನ್ನು ಮಾನ್ಯ ಮಂತ್ರಿಗಳು ಈ ಸದನಕ್ಕೆ ತಿಳಿಸಬೇಕು. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಚರ್ಚೆ ಮುಕ್ತಾಯವಾಯಿತು. ನಾಳೆ ಮಾನ್ಯ ಮಂತ್ರಿಗಳಿಂದ ಉತ್ತರ.

ಪ್ರಕಟಣೆ

ಅಧ್ಯಕ್ಷರು.—ಈಗ ಒಂದು ಪ್ರಕಟಣೆ ಇದೆ. ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯವ ರಿಂದ ಈ ಕೆಳಕಂಡ ಸಂದೇಶ ನನಗೆ ಬಂದಿದೆ.—

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ ೧೧೫ರ ಮೇರೆಗೆ ವಿಧಾನಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕವನ್ನು